RNI:KARKAN/2021/85750


# ಕರುನಾಡ ಕಂದ

Volume 3 ಸಂಪುಟ 3 | Issue 12 ಸಂಚಿಕೆ 12 | Date 16-04-2024 | Page 16 ಪುಟ 16 | ಬೆಲೆ: 20/-

FORTNIGHTLY ಪಾಕ್ಷಿಕ ಪತ್ರಿಕೆ

ಸಂಪಾದಕರು: ಬಸವರಾಜ ಬಳಿಗಾರ

## ಚುನಾವಣೆಯೆಂಬ ಗುಂಗಿನೊಳಗಿನ ನೆನಪುಗಳು...



### ಬೇಸಿಗೆ ಅಂತ ಅತಿಯಾಗಿ ಜ್ಯೂಸ್ ಕುಡಿದರೆ ತೊಂದರೆ ಖಚಿತ

### ಜಿಲ್ಲಾ ಅಧ್ಯಕ್ಷರಾಗಿ ಪರಶುರಾಮ ಪಾರಪ್ಪ ಬಂಡಿ ಆಯ್ಕೆ

### ಎ.ಐ.ಸಿ.ಸಿ ಹ್ಯೂಮನ್ ರೈಟ್ಸ್ ತಾಳಿಕೋಟೆ ತಾಲೂಕು ಉಪಾಧ್ಯಕ್ಷರಾಗಿ ಉಸ್ಮಾನ ಬಾಗವಾನ ಆಯ್ಕೆ

### ಅನುಮಾನವೇ ಅನಾರೋಗ್ಯಕ್ಕೆ ಕಾರಣ

## ಕೋಟೆ ನಾಡಿನ ಜನತೆ ಲೋಕ ಸಮರದಲ್ಲಿ ಹಿರಿಯರನ್ನು ಉಳಿಸಿಕೊಳ್ತಾರಾ/ಹೊಸ ಮುಖಕ್ಕೆ ಅವಕಾಶ ಕೊಡ್ತಾರಾ?...





### ಪ್ರಪ್ರಥಮ ವಚನಕಾರ ಶಿವಶರಣ ದೇವರ ದಾಸಿಮಯ್ಯ



### ಗೋ ರಕ್ಷಕರ ಹೆಸರಿನಲ್ಲಿ ನೈತಿಕ ಪೊಲೀಸ್‌ಗಿರಿ ನಿಲ್ಲಿಸಲು ಆಗ್ರಹ: ವಿನಾಕಾರಣ ಕಿರುಕುಳ ನೀಡಬೇಡಿ, ತಪ್ಪು ಮಾಡಿರುವವರ ವಿರುದ್ಧ ಕ್ರಮ ಕೈಗೊಳ್ಳಿ



### ರಂಜಾನ್ ರಂಗು: ಅಗರಖೇಡ ಗ್ರಾಮದಲ್ಲಿ ಹಬ್ಬದ ಕಳೆ



ಕರುನಾಡ ಕಂದ
ಸಂಪುಟ 3 । ಸಂಚಿಕೆ 12
ದಿನಾಂಕ: 16–04–2024 ಪುಟಗಳು:16

# ಬೇಸಿಗೆ ಅಂತ ಅತಿಯಾಗಿ ಜ್ಯೂಸ್ ಕುಡಿದರೆ ತೊಂದರೆ ಖಚಿತ



ಬಾಯಾರಿದಾಗ, ದೇಹ ದಣಿದಾಗ ಜ್ಯೂಸ್ ಕುಡಿಯಬೇಕು ಅನ್ನಿಸುವುದು ಸಹಜ.ಬಿರು ಬೇಸಿಗೆಯಲ್ಲಿ ರಸ್ತೆಯಲ್ಲಿ ಹೋಗುತ್ತಿರುವಾಗ ಪಕ್ಕದಲ್ಲೇ ಇರುವ ಜ್ಯೂಸ್ ಸೆಂಟ–ರ್ ನೋಡಿದ್ರೆ ಮನಸ್ಸು ಅತ್ತ ಎಳೆಯುತ್ತದೆ.ಮನೆಯಲ್ಲಿ ಇದ್ರೂ ಹಣ್ಣುಗಳ ಕಡೆ ನೋಡಿದಾಗ ಇದನ್ಯಾಕೆ ಜ್ಯೂಸ್ ಮಾಡಬಾರದು ಅನ್ನಿಸೋದು ಕೂಡ ಸಹಜ. ತಂಪು ಪಾನೀಯಗಳಿಗಿಂತ ತಾಜಾ ಹಣ್ಣಿನ ಜ್ಯೂಸ್ ಕುಡಿಯುವುದು ಆರೋಗ್ಯಕ್ಕೂ ಉತ್ತಮ ಎನ್ನುವುದನ್ನು ನಾವು ಕೇಳಿಕೊಂಡೇ ಬಂದಿದ್ದೇವೆ. ಆದರೆ ಹೋಟೆಲ್‌ಗಳಿಗೆ ಹೋದಾಗ ಚಿಕ್ಕ ಗ್ಲಾಸ್‌ನಲ್ಲಿ ಜ್ಯೂಸ್ ಕೊಡುತ್ತಾರೆ. ಮನೆಯಲ್ಲಾದರೆ ನಾವು ದೊಡ್ಡ ಗ್ಲಾಸ್ ತುಂಬಾ ಜ್ಯೂಸ್ ತುಂಬಿಸಿಕೊಂಡು ಕುಡಿಯುತ್ತೇವೆ, ಆದರೆ ಹೋಟೆಲ್‌ಗಳಲ್ಲಿ ಯಾಕ್ ಹೀಗೆ,ಹಣ ಉಳಿಸೋಕೆ ಇರಬಹುದು ಅಂತ ನೀವು ಯೋಚಿಸಿರಬಹುದು.ಆದರೆ ಖಂಡಿತ ಅದಕ್ಕಲ್ಲ. ಹಣ್ಣಿನ ಜ್ಯೂಸ್ ನೀವು ಅಂದುಕೊಂಡಷ್ಟು ಆರೋಗ್ಯಕ್ಕೆ ಒಳ್ಳೆಯದಲ್ಲ.ಇದನ್ನು ಮಿತವಾಗಿ ಸೇವಿಸುವುದರಿಂದ ಮಾತ್ರ ದೇಹಕ್ಕೆ ಅವಶ್ಯ ಪೋಷಕಾಂಶ ಸಿಗುತ್ತದೆ.

ಜ್ಯೂಸ್ ಕುಡಿಯುವುದು ತಾಜಾ ಹಣ್ಣುಗಳ ಸೇವನೆಯಂತಲ್ಲ ಹಣ್ಣು ತಿನ್ನುವುದಕ್ಕಿಂತ ಜ್ಯೂಸ್ ಕುಡಿಯುವುದೇ ಹಲವರಿಗೆ ಇಷ್ಟವಾಗುತ್ತದೆ. ಆ ಕಾರಣ–ಕ್ಕೆ ಪದೇ ಪದೇ ಜ್ಯೂಸ್ ಕುಡಿಯುವುದನ್ನೇ ಹೆಚ್ಚು ಇಷ್ಟಪಡುತ್ತಾರೆ.

ತಾಜಾ ಹಣ್ಣಿನ ರಸ ಕುಡಿಯುವುದು ಹಾಗೂ ಸಂಪೂರ್ಣ ಹಣ್ಣು ತಿನ್ನುವುದಕ್ಕೂ ಬಹಳ ವ್ಯತ್ಯಾಸವಿದೆ ಎನ್ನುತ್ತಾರೆ ಗುರುಗ್ರಾಮದ ಆರ್ಟೆಮಿಸ್ ಆಸ್ಪತ್ರೆಯ ಕ್ಲಿನಿಕಲ್ ಡಯಟಿಷಿನ್ ಡಾ.ಸಂಗೀತಾ ತಿವಾರಿ.

### ಅವರ ಪ್ರಕಾರ ಹಣ್ಣು ನೇರವಾಗಿ ತಿನ್ನುವುದಕ್ಕೂ ಹಾಗೂ ಜ್ಯೂಸ್ ಮಾಡಿ ಕುಡಿಯುವುದಕ್ಕೂ ಇರುವ ವ್ಯತ್ಯಾಸಗಳಿವು.

*ಹಣ್ಣಿನಲ್ಲಿ ನಾರಿನಂಶ ಸಮೃದ್ಧವಾಗಿರುತ್ತದೆ.ಆದ–ರೆ ಇದನ್ನು ಜ್ಯೂಸ್ ಮಾಡಿದಾಗ ನಾರಿನಾಂಶ ಹೊರ ಹೋಗುತ್ತದೆ.ಆ ಕಾರಣಕ್ಕೆ ಹಣ್ಣನ್ನು ನೇರವಾಗಿ ತಿನ್ನುವುದು ಉತ್ತಮ.

*ನಾರಿನಂಶ ಇಲ್ಲದ ಹಣ್ಣಿನ ರಸವು ದೇಹದಲ್ಲಿ ಸಕ್ಕರೆಯ ಮಟ್ಟ ವೇಗವಾಗಿ ಏರಿಕೆಯಾಗಲು ಕಾರಣವಾಗುತ್ತದೆ.

*ಹಣ್ಣಿನ ರಸದಲ್ಲಿ ಹಣ್ಣಿಗಿಂತ ಹೆಚ್ಚು ಕ್ಯಾಲೊರಿ ಅಂಶವಿರುತ್ತದೆ.ಏಕೆಂದರೆ ಹಣ್ಣಿನ ರಸವನ್ನು ತಯಾ–ರಿಸಲು ಒಂದಕ್ಕಿಂತ ಹೆಚ್ಚು ಹಣ್ಣು ಸೇರಿಸುತ್ತೇವೆ.ಇದ–ರಿಂದ ಕ್ಯಾಲೊರಿ ಅಂಶ ಹೆಚ್ಚಬಹುದು.

*ಹಣ್ಣಿನ ರಸವು ಹಣ್ಣಿಗಿಂತ ಹೆಚ್ಚು ಸಕ್ಕರೆಯಂಶ ಹೊಂದಿರುತ್ತದೆ.ಅದಕ್ಕೆ ಕಾರಣ ಜ್ಯೂಸ್ ತಯಾರಿಸುವಾಗ ಸಾಮಾನ್ಯವಾಗಿ ಎಲ್ಲರೂ ಸಕ್ಕರೆ ಸೇರಿಸುತ್ತಾರೆ.ಇದರಿಂದ ಸಕ್ಕರೆಯಂಶ ದುಪ್ಪಾಟ್ಟಾಗುತ್ತದೆ.

*ಹಣ್ಣುಗಳಲ್ಲಿ ನೈಸರ್ಗಿಕ ಜೀವಸತ್ವಗಳು,ಖನಿಜಗಳು ಹಾಗೂ ಉತ್ಕರ್ಷಣ ನಿರೋಧಕ ಅಂಶಗಳು ಹೇರಳವಾಗಿರುತ್ತದೆ ಆದರೆ ಇದನ್ನು ಜ್ಯೂಸ್ ಮಾಡುವುದರಿಂದ ಪೋಷಕಾಂಶ ನಷ್ಟಕ್ಕೆ ಕಾರಣವಾಗಬಹುದು.ಅದರಲ್ಲೂ ವಿಟಮಿನ್ "ಸಿ"ಯಂತಹ ನೀರಿನಲ್ಲಿ ಕರಗುವ ಜೀವಸತ್ವಗಳು ಜ್ಯೂಸ್ ಮಾಡಿದಾಗ ಇಲ್ಲದಂತಾಗಬಹುದು.

*ಹಣ್ಣಿನ ಜ್ಯೂಸ್ ಕುಡಿಯುವುದಕ್ಕಿಂತ ಹಣ್ಣು ತಿನ್ನುವುದ–ರಿಂದ ಹೊಟ್ಟೆ ತುಂಬಿದಂತಾಗುತ್ತದೆ. ಯಾಕೆಂದರೆ ಹಣ್ಣಿನಲ್ಲಿ ನಾರಿನಾಂಶ ಹೆಚ್ಚಿರುತ್ತದೆ.

ಬೆಂಗಳೂರಿನ ಗ್ಲೆನೆಗಲ್ಸ್ ಬಿಜಿಎಸ್ ಆಸ್ಪತ್ರೆಯ ಕ್ಲಿನಿಕಲ್ ನ್ಯೂಟ್ರಿಷನ್ ಕಾರ್ತಿಗ್ಯೆ ಸೆಲ್ವಿ ಎ ಅವರ ಪ್ರಕಾರ ಸಂಪೂರ್ಣ ಹಣ್ಣಿನಲ್ಲಿರುವ ನಾರಿನಾಂಶವು ನಮಗೆ ಹಸಿವಾಗುವುದನ್ನು ತಡೆಯುತ್ತದೆ.ಹೊಟ್ಟೆ ತುಂಬಿದ ಅನುಭವ ಸಿಗುವಂತೆ ಮಾಡುತ್ತದೆ. ನಿಯಮಿತ ಕರುಳಿನ ಚಲನೆಯನ್ನು ಉತ್ತೇಜಿಸುವ ಮೂಲಕ ಮಲಬದ್ಧತೆಯನ್ನು ನಿವಾ–ರಿಸುತ್ತದೆ ಎನ್ನುತ್ತಾರೆ.

ನೀವು ಹಣ್ಣನ್ನು ತಿಂದಾಗ,ದೇಹವು ಹಣ್ಣಿನಲ್ಲಿರುವ ಸಕ್ಕರೆಯನ್ನು ಹೀರಿಕೊಳ್ಳಲು ಸಮಯ ತೆಗೆದುಕೊಳ್ಳುತ್ತದೆ ಆದರೆ ಹಣ್ಣಿನ ರಸವನ್ನು ಸೇವಿಸಿದಾಗ,ರಕ್ತದಲ್ಲಿನ ಸಕ್ಕರೆಯಲ್ಲಿ ಸ್ಪೈಕ್ ಇರುತ್ತದೆ.ಪರಿಣಾಮವಾಗಿ,ದೇಹವು ಇನ್ಸುಲಿನ್ ಅನ್ನು ತಕ್ಷಣವೇ ಬಿಡುಗಡೆ ಮಾಡುತ್ತದೆ ಮತ್ತು ರಕ್ತದಲ್ಲಿನ ಹೆಚ್ಚಿನ ಪ್ರಮಾಣದ ಸಕ್ಕರೆಯು ಕೊಬ್ಬು ಮತ್ತು ಗ್ಲೈಕೋಜೆನ್ ಆಗಿ ಪರಿವರ್ತನೆಗೊಳ್ಳುತ್ತದೆ.ಇದು ಹಸಿವು ಹೆಚ್ಚುವಂತೆ ಮಾಡಿ ಹೆಚ್ಚು ತಿನ್ನುವಂತೆ ಮಾಡುತ್ತದೆ ಎಂದು ಸೆಲ್ವಿ ಹೇಳುತ್ತಾರೆ.

## ಹಣ್ಣಿನ ರಸದಿಂದ ಪ್ರಯೋಜನವೂ ಇದೆ

**ಹಣ್ಣಿನ ರಸ ಸೇವನೆಯಿಂದ ಮೇಲೆ ಹೇಳದಂತೆ ಸಾಕಷ್ಟು ಅನಾನುಕೂಲವಿದ್ದರೂ ಇದರಿಂದ ಪ್ರಯೋಜನವೂ ಇದೆ.**

***ತಾಜಾ ಹಣ್ಣಿನ ರಸವು ಹಣ್ಣುಗಳಲ್ಲಿ ಕಂಡುಬರುವ ಅಗತ್ಯವಾದ ಜೀವಸತ್ವಗಳು,ಖನಿಜಗಳು ಮತ್ತು ಉತ್ಕರ್ಷಣ ನಿರೋಧಕಗಳ ನಿಮ್ಮ ಸೇವನೆಯನ್ನು ಹೆಚ್ಚಿಸಲು ಅನುಕೂಲಕರ ಮಾರ್ಗವಾಗಿದೆ.**

***ವಿಟಮಿನ್ ಸಿ ಮತ್ತು ಫ್ಲೇವನಾಯ್ಡ್‌ಗಳಂತಹ ಉತ್ಕರ್ಷಣ ನಿರೋಧಕಗಳನ್ನು ಹೊಂದಿದೆ,ಇದು ದೇಹದಲ್ಲಿನ ಹಾನಿಕಾರಕ ಫ್ರಿ ರಾಡಿಕಲ್‌ಗಳನ್ನು ತಟಸ್ಥಗೊಳಿಸಲು ಮತ್ತು ಆಕ್ಸಿಡೇಟಿವ್ ಒತ್ತಡವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.**

***ಹಣ್ಣಿನ ರಸವು ನೈಸರ್ಗಿಕ ಸಕ್ಕರೆಗಳು ಮತ್ತು ಎಲೆಕ್ಟ್ರೋಲೈಟ್‌ಗಳ ಮೂಲವನ್ನು ಒದಗಿಸುತ್ತದೆ, ಇದು ವ್ಯಾಯಾಮದ ನಂತರದ ಚೇತರಿಕೆಗೆ ಸಮರ್ಥವಾಗಿ ಪ್ರಯೋಜನಕಾರಿಯಾಗಿದೆ.**

***ಸೋಡಾ ಅಥವಾ ಇತರ ತಂಪು ಪಾನೀಯಗಳನ್ನು ಕುಡಿಯುವುದಕ್ಕಿಂತ ಹಣ್ಣಿನ ಜ್ಯೂಸ್ ಉತ್ತಮ.ಆದರೆ ಆಯಾಸ,ಸುಸ್ತು ಆದಾಗ ಒಂದು ಲೋಟ ನೀರು ಹಾಗೂ ಒಂದು ಹಣ್ಣು ಸೇವನೆಗಿಂತ ಉತ್ತಮ.**

## ಅಡ್ಡ ಪರಿಣಾಮಗಳು

**ತಾಜಾ** ಹಣ್ಣಿನ ಜ್ಯೂಸ್ ಕುಡಿಯುವುದರಿಂದ ಅಡ್ಡ ಪರಿಣಾಮಗಳು ಉಂಟಾಗಬಹುದು ಎನ್ನುವ ತಜ್ಞರು ಅದರಲ್ಲೂ ಸಕ್ಕರೆ ಸೇರಿದ ಹಣ್ಣಿನ ಜ್ಯೂಸ್‌ನಿಂದ ಅಪಾಯ ಹೆಚ್ಚು ಎನ್ನುತ್ತಾರೆ.

**ಸಕ್ಕರೆಯ ಮಟ್ಟ ಏರಿಕೆ**: ಹಣ್ಣಿನ ರಸಕ್ಕೆ ಸಕ್ಕರೆ ಸೇರಿಸಿ ತಯಾರಿಸಿದ ಜ್ಯೂಸ್ ಕುಡಿಯುವುದರಿಂದ ದೇಹದಲ್ಲಿನ ಸಕ್ಕರೆಯ ಮಟ್ಟವನ್ನು ತ್ವರಿತವಾಗಿ ಏರಿಕೆಯಾಗುತ್ತದೆ. ಮಧುಮೇಹಿಗಳಿಗೆ ಇದು ಸಮಸ್ಯೆ ಉಂಟು ಮಾಡಬಹುದು.ಇದು ಕಾಲಾನಂತರದಲ್ಲಿ ಅಸ್ಥಿರ ರಕ್ತದಲ್ಲಿನ ಸಕ್ಕರೆ ನಿಯಂತ್ರಣಕ್ಕೆ ಸಂಭಾವ್ಯ ಕೊಡುಗೆ ನೀಡುತ್ತದೆ.

ತೂಕ ಹೆಚ್ಚಳ:ಹಣ್ಣಿನ ರಸದಲ್ಲಿ ಕ್ಯಾಲೊರಿ ಅಂಶ ದಟ್ಟವಾಗಿರುತ್ತದೆ.ಕ್ಯಾಲೊರಿ ಅಂಶ ಪರಿಗಣಿಸದೇ ಹೆಚ್ಚಿನ ಪ್ರಮಾಣದಲ್ಲಿ ಹಣ್ಣಿನ ರಸವನ್ನು ಕುಡಿಯುವುದು ತೂಕ ಹೆಚ್ಚಾಗಲು ಕಾರಣವಾಗುವುದು ಮಾತ್ರವಲ್ಲ ತೂಕ ನಿರ್ವಹಣೆಗೂ ಕಷ್ಟವಾಗಬಹುದು.ಇದು ಒಟ್ಟಾರೆ ಕ್ಯಾಲೊರಿ ಸಂಖ್ಯೆ ಹೆಚ್ಚಲು ಕಾರಣವಾಗುತ್ತದೆ.

**ಹಲ್ಲಿನ ಸಮಸ್ಯೆಗಳು**: ಸಕ್ಕರೆ ಸೇರಿಸಿದ ಹಣ್ಣಿನ ರಸವನ್ನು ಆಗಾಗ್ಗೆ ಕುಡಿಯುವುದರಿಂದ ಹಲ್ಲು ಹುಳುಕುಗಾವುದು,ದಂತಕ್ಷಯ ಮತ್ತು ದಂತಕವಚದ ಸವೆತದ ಅಪಾಯನ್ನು ಹೆಚ್ಚಿಸುತ್ತದೆ.ಹಣ್ಣಿನ ಜ್ಯೂಸ್‌ನಲ್ಲಿರುವ ನೈಸರ್ಗಿಕ ಸಕ್ಕರೆ ಹಾಗೂ ಆಮ್ಲಗಳು ಬಾಯಲ್ಲಿ ಹಾನಿಕಾರಣ ಬ್ಯಾಕ್ಟೀರಿಯಾಗಳ ಬೆಳವಣಿಗೆಯನ್ನು ಉತ್ತೇಜಿಸುತ್ತದೆ. ಕಾಲಾನಂತರದಲ್ಲಿ ಇದು ಬಾಯಿಯ ಆರೋಗ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಹೆಚ್ಚಿಸಬಹುದು.

**ಪೌಷ್ಟಿಕಾಂಶ ಅಸಮತೋಲನ**: ಪೌಷ್ಟಿಕಾಂಶಗಳ ಮೂಲವಾಗಿ ಹಣ್ಣಿನ ರಸವನ್ನು ಹೆಚ್ಚು ಸೇವಿಸುವುದ–ರಿಂದ ಪೌಷ್ಟಿಕಾಂಶ ಸೇವನೆಯ ಅಸಮತೋಲನಕ್ಕೆ ಕಾರಣವಾಗಬಹುದು.ಇದು ಪ್ರೋಟೀನ್,ಫೈಬರ್,ಜೀವಸತ್ವಗಳು ಮತ್ತು ಖನಿಜಗಳಂತಹ ಅಗತ್ಯ ಪೋಷಕಾಂಶಗಳ ಕೊರತೆಗೆ ಕಾರಣವಾಗಬಹುದು

ಈ ಅಡ್ಡಪರಿಣಾಮಗಳನ್ನು ಕಡಿಮೆ ಮಾಡಲು ಹಣ್ಣಿನ ರಸವನ್ನು ಮಿತವಾಗಿ ಸೇವಿಸುವುದು,ಸಕ್ಕರೆ ಸೇ–ರಿಸದೇ ತಯಾರಿಸಬಹುದಾದ ಹಣ್ಣುಗಳಿಂದ ಜ್ಯೂಸ್ ಮಾಡುವುದು,ಹಣ್ಣನ್ನು ನೇರವಾಗಿ ಸೇವಿಸುವುದಕ್ಕೆ ಆಧ್ಯತೆ ನೀಡಬಹುದು.

ಕರುನಾಡ ಕಂದ
ಸಂಪುಟ 3 । ಸಂಚಿಕೆ 12
ದಿನಾಂಕ: 16-04-2024 ಪುಟಗಳು:16

# ಕೇಂದ್ರದಲ್ಲಿ ಕಾಂಗ್ರೇಸ್ ಪಕ್ಷ ಆಡಳಿತ ಹಿಡಿದರೆ, ಕ್ಷೇತ್ರದ ಅಭಿವೃದ್ಧಿ ಸಾಧ್ಯ: ಶಾಸಕ ಬಿ.ಕೆ.ಸಂಗಮೇಶ್ವರ

## ಕಾಂಗ್ರೆಸ್ ಬೃಹತ್ ಬಹಿರಂಗ ಸಭೆಯಲ್ಲಿ ಶಾಸಕ ಸಂಗಮೇಶ್ ಹೇಳಿಕೆ



**ಭದ್ರಾವತಿ:** ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ಕ್ಷೇತ್ರದ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ಶಾಸಕ ಬಿ.ಕೆ.ಸಂಗಮೇಶ್ ಹೇಳಿದರು.

ತಾಲ್ಲೂಕಿನ ಅಂತರಗಂಗೆ,ಬಾರಂದೂರು,ಹಿರಿಯೂರು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರ ಬೃಹತ್ ಬಹಿರಂಗ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಆಡಳಿತ ನಡೆಸುತ್ತಿದೆ. ಅದೇ ರೀತಿ ಕೇಂದ್ರದಲ್ಲಿಯೂ ಕಾಂಗ್ರೆಸ್ ಆಡಳಿತಕ್ಕೆ ಬಂದರೆ,ಕ್ಷೇತ್ರದಲ್ಲಿ ತ್ವರಿತಗತಿಯ ಅಭಿವೃದ್ಧಿ ಸಾಧ್ಯವಾಗಲಿದೆ ಎಂದರು.

ಶಿವಮೊಗ್ಗ ಜಿಲ್ಲೆಗೆ ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪ ಅವರು ಅಪಾರ ಕೊಡುಗೆ ನೀಡಿದ್ದಾರೆ.ಭದ್ರಾವತಿಯಲ್ಲಿ ನನ್ನನ್ನು 4 ಬಾರಿ ಶಾಸಕನಾಗಿ ಸೇವೆ ಸಲ್ಲಿಸಲು ಅವಕಾಶ ಮಾಡಿಕೊಟ್ಟಿದ್ದೀರ.ಅದೇ ರೀತಿ,ಕಾಂಗ್ರೆಸ್ ಅಭ್ಯರ್ಥಿ ಗೀತಾ ಶಿವರಾಜಕುಮಾರ್ ಅವರಿಗೂ ಶಿವಮೊಗ್ಗ ಕ್ಷೇತ್ರದಿಂದ ಲೋಕಸಭೆಗೆ ಪ್ರವೇಶಿಸಲು ಅವಕಾಶ ಮಾಡಿಕೊಡಿ ಎಂದು ಕೋರಿದರು.

ಕೆಪಿಸಿಸಿ ವಕ್ತಾರ ಆಯನೂರು ಮಂಜುನಾಥ ಮಾತನಾಡಿ,ಅಯೋಧ್ಯೆಯ ರಾಮ ಮಂದಿರವನ್ನು ನಾವೆಲ್ಲರೂ ಸೇರಿ ಕಟ್ಟಿದ್ದೇವೆ.ಬಿಜೆಪಿಯವರು ಅಲ್ಲ. ಬಿಜೆಪಿಯವರು ಮೇಸ್ತ್ರಿ ಕೆಲಸ ಮಾಡಿದ್ದಾರೆ ಅಷ್ಟೇ. ಆದರೆ,ಇಲ್ಲಿ ಬಿಜೆಪಿ ನಾಯಕರು ದೇವರ ಹೆಸರಲ್ಲಿ ಮತಯಾಚನೆಗೆ ಮುಂದಾಗಿದ್ದಾರೆ ಇದು ತಪ್ಪು ಎಂದರು.

ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪ ಅವರು ರೈತರ ಕೃಷಿ ಪಂಪ್ ಸೆಟ್ ಗಳಿಗೆ ಉಚಿತ ವಿದ್ಯುತ್ ನೀಡುವ ಮೂಲಕ,ಸಾಮಾನ್ಯ ಜನರು ಉಸಿರಾಡುಂತಹ ವಾತಾವರಣ ಸೃಷ್ಟಿಸಿ ಹೋಗಿದ್ದಾರೆ. ಅದರ ಋಣ ತೀರಿಸಲು ಕಾಂಗ್ರೆಸ್ ಅಭ್ಯರ್ಥಿ ಗೀತಾ ಶಿವರಾಜಕುಮಾರ್ ಅವರಿಗೆ ಮತ ನೀಡಿ ಆಶೀರ್ವದಿಸಬೇಕು ಎಂದು ಕೋರಿದರು.

ಅಂತರಗಂಗೆ ಗ್ರಾಮ ಪಂಚಾಯಿತಿ ಅಧ್ಯಕ್ಷ ನಾಗೇಶ್ ಮಾತನಾಡಿ,ದೇಶಕ್ಕೆ ಸ್ವಾತಂತ್ರ್ಯ ಬಂದು 70 ವರ್ಷ ಪೂರ್ಣಗೊಂಡಿದೆ.ಇಲ್ಲಿ ಕಾಂಗ್ರೆಸ್ ಸರ್ಕಾರದ ಯೋಜನೆಗಳು ಮಾತ್ರ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿವೆ.ಆದ-'ರೆ ಬಿಜೆಪಿ ಆಡಳಿತಕ್ಕೆ ಬಂದು ದಶಕ ಮಾತ್ರ ಕಳೆದಿವೆ.ಆದರೆ ಇಲ್ಲಿ ಬಿಜೆಪಿ ಆಡಳಿತದಿಂದ ದೇಶ ದುಸ್ಥಿತಿಗೆ ತಲುಪಿದೆ ಎಂದು ದೂರಿದರು.

ಜಿಲ್ಲೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೀತಾ ಶಿವರಾಜ-ಕುಮಾರ್ ಅವರಿಗೆ ಮತ ನೀಡಿ ಹರಸಬೇಕು. ಬಿಜೆಪಿ ಪಕ್ಷವನ್ನು ನಂಬಿಕೊಂಡರೆ,ಬಡವರಿಗೆ ಆಶಾಕಿರಣವಾಗಿರುವ ಅನೇಕ ಯೋಜನೆಗಳಿಗೆ ಬಿಜೆಪಿಯಿಂದ ಪೆಟ್ಟು ಬೀಳಲಿದೆ ಎಂದರು.

ಭದ್ರಾವತಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಸ್.ಕುಮಾರ್ ಮಾತನಾಡಿ,ಕಳೆದ ಲೋಕಸಭಾ ಚುನಾವಣೆಯಲ್ಲಿ ಸಂಸದ ಬಿ.ವೈ.ರಾಘವೇಂದ್ರ ಅವರಿಗೆ ಮತ ಹಾಕಿ ಗೆಲ್ಲಿಸಿದ್ದೇವೆ.ಆದ-'ರೆ,ತಾಲ್ಲೂಕಿಗೆ ಅವರ ಕೊಡುಗೆ ಶೂನ್ಯ.ಭದ್ರಾವತಿ ತಾಲ್ಲೂಕಿಗೆ ಮಲತಾಯಿ ಧೋರಣೆ ಮಾಡಿದ್ದಾರೆ.ಚುನಾವಣೆ ಸಮಯದಲ್ಲಿ ಮಾತ್ರ ಬಿ.ವೈ ರಾಘವೇಂದ್ರ ಅವರು ಮತದಾರರ ಎದುರು ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ.ಇದಕ್ಕೆ ಜನರು ಕರಗಬಾರದು ಎಂದರು.

ಲೋಕಸಭಾ ಚುನಾವಣೆ ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಅನಿಲ್ ಕುಮಾರ್ ತಡಕಲ್,ನಟ ಶಿವರಾಜಕುಮಾರ್,ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಮಣಿಶೇಖರ್,ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎನ್.ರಮೇಶ್,ಕೆಪಿಸಿಸಿ ಸದಸ್ಯ ವೈ.ಎಚ್.ನಾಗರಾಜ,ನಗರಸಭೆ ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯ ಬಿ.ಕೆ.ಮೋಹನ್,ಕಾಂಗ್ರೆಸ್ ಯುವ ಮುಖಂಡ ಬಿ.ಎಸ್.ಗಣೇಶ್,ಭದ್ರಾವತಿ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಷಡಾಕ್ಷ-ರಿ,ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಬಲ್ಕೀಷ್ ಬಾನು,ಜಿ.ಪಲ್ಲವಿ ಸೇರಿದಂತೆ ಕಾರ್ಯಕರ್ತರು ಇದ್ದರು.

ವರದಿ:ಕೆ ಆರ್ ಶಂಕರ್,ಭದ್ರಾವತಿ

### ವಿಐಎಸ್‌ಎಲ್ ಕಾರ್ಖಾನೆ ಮುಚ್ಚಲು ಬಿಡುವುದಿಲ್ಲ: ಗೀತಾ ಶಿವರಾಜಕುಮಾರ್

ಶಾಸಕ ಬಿ.ಕೆ.ಸಂಗಮೇಶ್ ರವರ ಬೆಂಬಲದಿಂದ ಚುನಾವಣೆ ಕಣಕ್ಕೆ ಆನೆ ಬಲ ಬಂದಂತಿದೆ. ಭದ್ರಾವತಿಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಗೆ ಜೀವ ತುಂಬಬೇಕು ಎನ್ನುವುದು ಸ್ಥಳೀಯರ ದಶಕದ ಆಗ್ರಹವಿದೆ.ವಿಐಎಸ್‌ಎಲ್ ಅಸಂಖ್ಯಾತ ಕಾರ್ಮಿಕರಿಗೆ ಉದ್ಯೋಗ ಹಾಗೂ ಲಕ್ಷಾಂತರ ಮಂದಿಗೆ ಅನ್ನಕೊಟ್ಟ ಸಂಸ್ಥೆ.ಇದನ್ನು ಯಾವುದೇ ಕಾರಣಕ್ಕೂ ಮುಚ್ಚಲು ಬಿಡುವುದಿಲ್ಲ ಎಂದು ಕಾಂಗ್ರೆಸ್ ಅಭ್ಯರ್ಥಿ ಗೀತಾ ಶಿವರಾಜ-ಕುಮಾರ್ ಭರವಸೆ ನೀಡಿದರು.

### ವಿಐಎಸ್ ಎಲ್ ಮುಚ್ಚಿಸಲು ಹೊರಟಿದ್ದೇ ಸಂಸದರ ಸಾಧನೆ: ಮಧು ಬಂಗಾರಪ್ಪ ಆರೋಪ

ಜಿಲ್ಲೆಯಲ್ಲಿ ಬಿಜೆಪಿ ಆಡಳಿತಕ್ಕೆ ಬಂದ ಬಳಿಕ ವಿಐಎಸ್ ಎಲ್ ಕಾರ್ಖಾನೆಯನ್ನು ಬಾಗಿಲು ಮುಚ್ಚುವ ಸ್ಥಿತಿಗೆ ತಂದಿದ್ದಾರೆ. ಇದು 15 ವರ್ಷದ ಆಡಳತ ನಡೆಸಿದ ಸಂಸದ ಬಿ.ವೈ. ರಾಘವೇಂದ್ರ ಅವರ ಕೊಡುಗೆ.ಇದಕ್ಕೆ ಉತ್ತರವಾಗಿ,ಮೇ.7 ರಂದು ನಡೆಯಲಿರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೀತಕ್ಕ ಅವರಿಗೆ ಮತ ನೀಡಿ ಆರಿಸಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ಮಧುಬಂಗಾರಪ್ಪ ಹೇಳಿದರು.

# 133 ನೇ ಅಂಬೇಡ್ಕರ್ ಜಯಂತಿ ಪ್ರಯುಕ್ತ ಪತ್ರಿಕಾಗೋಷ್ಠಿ



ಚಿಕ್ಕಬಳ್ಳಾಪುರ ಜಿಲ್ಲೆ ಗೌರಿಬಿದನೂರು ತಾಲೂಕಿನ ವ್ಯಾಪ್ತಿಯಲ್ಲಿ ಬರುವ ನಾಗಪ್ಪ ಬ್ಲಾಕ್ ಎದುರು ಭಾರತೀಯ ಜನತಾ ಪಾರ್ಟಿಯ ಲೋಕಸಭಾ ಕ್ಷೇತ್ರ ವಿಧಾನಸಭಾ ಕ್ಷೇತ್ರ ಎರಡನ್ನು ಒಳಗೊಂಡಂತಹ ಕಾರ್ಯಕರ್ತರು 14-04-2024 ರಂದು 133 ನೇ ಅಂಬೇಡ್ಕರ್ ಜಯಂತಿ ಪ್ರಯುಕ್ತ ಪತ್ರಿಕಾಗೋಷ್ಠಿಯನ್ನು ಏರ್ಪಡಿಸಿ ಮಾಧ್ಯಮದವರ ಮುಂದೆ ಈ ಸಮಾರಂಭದಲ್ಲಿ ಮಾರ್ಕೆಟ್ ಮೋಹನ್ ನಗರ ಘಟಕ ಅಧ್ಯಕ್ಷರು,ಡಾ.ಶಶಿಧರ್ ಬಿಜೆಪಿ ಮುಖಂಡರು ಇನ್ನಿತರರು ಭಾಗಿಯಾಗಿದ್ದರು.

ಡಾಕ್ಟರ್ ಬಿ ಆರ್ ಅಂಬೇಡ್ಕರ್ ಅವರು ಕಾಂಗ್ರೆಸ್ಸಿನ ಮುಖಾಂತರ ಎರಡು ಬಾರಿ ಸೋಲನ್ನು ಭಾವಿಸಿ ಅವಮಾನ ಪಟ್ಟಿದ್ದರು ಹಾಗೆ ಕಾಂಗ್ರೆಸ್ ಸರ್ಕಾರ ಈ ಈ ಬಾರಿ ಕಾಂಗ್ರೆಸ್ ಸರ್ಕಾರವನ್ನು ಯಾವುದೇ ಕಾರಣಕ್ಕೂ ಗೆಲ್ಲಿಸಬಾರದು ಎಂದು ಹೇಳಿದರು. ಮಾರ್ಕೆಟ್ ಮೋಹನ್ ರವರು ಈ ಸಂದರ್ಭದಲ್ಲಿ ನಾವು ಮತ್ತೆ ಪ್ರಧಾನಿ ಮೋದಿ ಅವರನ್ನೇ ಪ್ರಧಾನಿಯಾಗಿ ನೋಡಬೇಕು ಎಂದು ಹೇಳಿದರು.ನಮ್ಮ ಲೋಕಸಭಾ ಕ್ಷೇತ್ರದಲ್ಲಿ ಡಾಕ್ಟರ್ ಸುಧಾಕರ್ ರವರನ್ನು ಗೆಲ್ಲಿಸೋಣ ಹೇಳಿ ಭಾಷಣ ಮುಗಿಸಿದರು.

ರಮೇಶ್ ರವರು ಈ ಸಭೆಯನ್ನು ಉದ್ದೇಶಿಸಿ ಮಾತನಾಡಿ ಅವರು ಡಾ.ಬಿ.ಆರ್.ಅಂಬೇಡ್ಕರ್ ರವರ ಹುಟ್ಟು ಹಬ್ಬದ ಶುಭಾಶಯಗಳು ಕೋರಿ ಭಾಷಣ ಮಾಡಿ ಅಂಬೇಡ್ಕರ್ ರವರು ಸಂವಿಧಾನ ಶಿಲ್ಪಿ ಭಾರತ ರತ್ನ ಅವರು ಮಾಡಿರುವ ಸಾಧನೆ ಬಗ್ಗೆ ಹೇಳಿದರು.

ವರದಿ-ತುಳಸಿ ನಾಯ್ಕ್

ಕರುನಾಡ ಕಂದ
ಸಂಪುಟ 3 | ಸಂಚಿಕೆ 12
ದಿನಾಂಕ: 16-04-2024 ಪುಟಗಳು:16

# ಬೇಜವಬ್ದಾರಿ ಪಿಡಿಓ : ಯಲ್ಲಪ್ಪ ಜೇರಟಗಿ..!!



ಕಲಬುರಗಿ ಜಿಲ್ಲೆಯ ಜೇವರ್ಗಿ ನೇದಲಗಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಕುರನಳ್ಳಿ ಗ್ರಾಮಕ್ಕೆ ನೀರಿನ ತೊಂದರೆ ನೀಗಿಸದ ಪಿಡಿಓಗೆ ಮೇಲಾಧಿಕಾ-ರಿಗಳು ಈ ಕೂಡಲೇ ವಜಾ ಮಾಡಬೇಕು ಏಕೆಂದರೆ ಸುಡು ಬಿಸಿಲಿನಲ್ಲಿಯೂ ಗ್ರಾಮಸ್ಥರೆಲ್ಲರೂ ನೀರಿಗಾಗಿ ಅಲೆದಾಡುತ್ತಾ ಕಂಗಾಲಾಗಿ ನೀರಿನ ದಾಹ ತೀರದೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಯಲ್ಲಪ್ಪ ಜೇರಟಗಿಯವರಿಗೆ ಫೋನ್ ಕರೆ ಮಾಡಿದರೆ ಕರೆ ಸ್ವೀಕ-ರಿಸುತ್ತಿಲ್ಲ,ಪಂಚಾಯತಿಗೆ ಬರೋದಿಲ್ಲ,ಸಾರ್ವಜನಿಕರ ಕಷ್ಟಗಳನ್ನು ಕೇಳಲು ಸ್ಥಳಕ್ಕೂ ಆಗಮಿಸುವುದಿಲ್ಲ,ನೀರಿನ ವ್ಯವಸ್ಥೆ ಮಾಡುವುದು ಬಿಟ್ಟು ಅನುದಾನದ ನೆಪವೊಡ್ಡಿ ಪಂಚಾಯತಿಗೂ ಬರದೆ ಫೋನ್ ಸ್ವಿಚ್ ಆಫ್ ಮಾಡುತ್ತಾರೆ ತಮಗೆ ಬೇಕಾದಗೊಮ್ಮೆಆಗಾಗ ಫೋನ್ ಚಾಲೂ ಮಾಡಿ ಸಿಬ್ಬಂದಿಗೆ ಮಾತಾಡಿ ಯಾರಾದರೂ ಮೇಲಾಧಿಕಾರಿಗಳು ಬಂದಾರ ಏನ್ ಇಲ್ಲ ಅಂತಹ ಮಾಹಿತಿ ಪಡೆಯುತ್ತಾ ಸಾರ್ವಜನಿಕರಿಗೆ ಮೂಲಭೂತ ಸೌಕರ್ಯವನ್ನು ನೀಗಿಸದೆ ನಿರ್ಲಕ್ಷ್ಯ ತೋರಿಸಿ ಬೇಜವಾಬ್ದಾರಿ ಮಾತುಗಳನ್ನಾಡುತ್ತಾರೆ ಇಂಥ ಅಧಿಕಾರಿಗಳಿಗೆ ಮೇಲಾಧಿಕಾರಿಗಳು ಯಾರೂ ಹೇಳೋರು-ಕೇಳೋರಿಲ್ವ? ಗ್ರಾಮದಲ್ಲಿ ದವಲಮಲಿಕ ಜಾತ್ರಾ ಮಹೋತ್ಸವವಿದ್ದು ಬೇರೆ-ಬೇರೆ ಗ್ರಾಮದಿಂದ ಭಕ್ತಾಧಿಗಳು ಮತ್ತು ಪರಸ್ಥಳದಿಂದ ಬರುವ ಎಲ್ಲರಿಗೂ ಈ ನೀರಿನ ದಾಹ ತೀರಿಸುವವರು ಯಾರು ಸ್ವಾಮಿ..!!?

**ವರದಿ: ಚಂದ್ರಶಾಗೌಡ ಮಾಲಿ ಪಾಟೀಲ್**

**ಶುದ್ಧ ಕುಡಿಯುವ ನೀರಿನ ಘಟಕವಿಲ್ಲ ಮತ್ತು ಕೊಳವೆ ಬಾವಿಯಿಂದ ನೀರು ಬರುತ್ತಿಲ್ಲ ಅಂತರ್ಜಲ ಕುಸಿತವಾಗಿದೆ ಕೊಳವೆ ಬಾವಿಗೆ ಇನ್ನಷ್ಟು ಪೈಪುಗಳು ಹಾಕಿಸಿ ವ್ಯವಸ್ಥೆ ಕಲ್ಪಿಸಿ ಎಂದು ಗ್ರಾಮಸ್ಥರೆಲ್ಲರೂ ಕೇಳಿದರೂ ಕೇಳುತ್ತಿಲ್ಲ.**

**ಅತಿ ಶೀಘ್ರದಲ್ಲಿಯೇ ಮೇಲಾಧಿಕಾರಿಗಳು ಪಿಡಿಓ ಯಲ್ಲಪ್ಪ ಜೇರಟಗಿಯವರಿಗೆ ವಜಾಗೊಳಿಸದಿದ್ದರೆ ಮುಂದಿನ ದಿನ-ಮಾನಗಳಲ್ಲಿ ಉಗ್ರವಾದ ಹೋರಾಟ ಮಾಡಬೇಕಾಗುತ್ತೆ ಎಂದು ಈ ಮೂಲಕ ಪತ್ರಿಕಾ ಪ್ರಕಟಣೆಯಲ್ಲಿ ಗ್ರಾಮಸ್ಥರೆಲ್ಲರೂ ಆಕ್ರೋಶ ಹೊರ ಹಾಕುತ್ತಾ ಪ್ರತಿ ದಿನ ಉಪಯುಕ್ತವಾಗುವ ಶುದ್ಧ ಕುಡಿಯುವ ನೀರಿನ ಘಟಕದ ಒಂದೊಂದು ಸಾಮಾನುಗಳನ್ನು ಬಿಚ್ಚಿ ತೆಗೆದುಕೊಂಡು ಹೋಗಿ ಬೇರೆ ಊರಿನ ಘಟಕಗಳಿಗೆ ಬಳಸಲು ಸಿಬ್ಬಂದಿಗೆ ಹೇಳಿ ಎಲ್ಲಾ ನಮ್ಮ ಕುರನಳ್ಳಿ ಗ್ರಾಮದ ವ್ಯವಸ್ಥೆ ಮತ್ತಷ್ಟು ಹದಗೆಡಿಸಿ ಬಿಟ್ಟು ಕುರನಳ್ಳಿ ಗ್ರಾಮಕ್ಕೆ ನಿರ್ಲಕ್ಷ್ಯ ತೋರುತ್ತಿದ್ದಾರೆ ನಮ್ಮ ಊರು ಸಂಬಂಧವಿಲ್ಲದಂತೆ ವರ್ತಿಸುತ್ತಿರುವುದು ಗ್ರಾಮದ ಜನತೆಗೆ ನುಂಗಲಾರದ ಬಿಸಿ ತುಪ್ಪವಾಗಿ ಪರಿಣಮಿಸುತ್ತಿದೆ ಎಂದು ಗ್ರಾಮಸ್ಥರು ಹಾಗೂ ಗ್ರಾಮದ ನೊಂದ ಯುವಕ ಬಸವರಾಜ ಹಳಿಮನಿ ಕುರನಳ್ಳಿಯವರು "ಕರುನಾಡ ಕಂದ ಪತ್ರಿಕೆ"ಯ ಮುಂದೆ ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ.**

## ಮತದಾನ ಜಾಗೃತಿಗಾಗಿ ಮಹಿಳೆಯರಿಗೆ ಕ್ರೀಡಾಕೂಟ




**ಭದ್ರಾವತಿ:** ಭಾರತ ಚುನಾವಣಾ ಆಯೋಗ,ರಾಜ್ಯ ಚುನಾವಣಾ ಆಯೋಗ,ಜಿಲ್ಲಾ ಸ್ವೀಪ್ ಸಮಿತಿ ಶಿವಮೊಗ್ಗ,ತಾಲ್ಲೂಕು ಸ್ವೀಪ್ ಸಮಿತಿ ಭದ್ರಾವತಿ ಹಾಗೂ ನಗರಸಭಾ ಕಾರ್ಯಾಲಯ ಭದ್ರಾವತಿ ಇವರ ಸಹಯೋಗದಲ್ಲಿ ಮಹಿಳೆಯರ ಕ್ರೀಡಾಕೂಟದ ಮುಖಾಂತರ ಮತದಾನ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಭದ್ರಾವತಿಯ ಹಳೆ ನಗರದ ಕನಕ ಮಂಟಪ ಮೈದಾನದಲ್ಲಿ ನಗರ ಸಭೆಯ ಸಮುದಾಯ ಸಂಘಟನಾಧಿಕಾರಿ ಸುಹಾಸಿನಿ ರವರ ನೇತೃತ್ವದಲ್ಲಿ ಮತದಾನ ಜಾಗೃತಿ ಮೂಡಿಸಲಾಯಿತು.18 ವರ್ಷ ತುಂಬಿದ ಎಲ್ಲರೂ ಕಡ್ಡಾಯವಾಗಿ ಮತದಾನದಲ್ಲಿ ಪಾಲ್ಗೊಳ್ಳುವಂತೆ ಮಾಹಿತಿ ನೀಡಿದರು.

ಮಹಿಳೆಯರಿಗಾಗಿ ಬಾಂಬ್ ಇನ್ ದ ಸಿಟಿ,ಬುಕ್ ಬ್ಯಾಲೆನ್ಸ್,ಜಪ್ಪೆ,ಪಟೋಟ ರನ್ ಕ್ರೀಡೆಗಳನ್ನು ನಡೆಸಿ, ಕ್ರೀಡೆಗಳಲ್ಲಿ ವಿಜೇತರಾದ ಮಹಿಳೆಯರಿಗೆ ಬಹುಮಾನ ವಿತರಿಸಲಾಯಿತು.

ದೈಹಿಕ ಶಿಕ್ಷಕರುಗಳಾದ ಶಿವಲಿಂಗೇಗೌಡ, ರವಿಕುಮಾರ್,ಸಿಂಗ್,ಶ್ರೀಕಾಂತ್ ಹಾಗೂ ರೇವತಿ ರವರು ತೀರ್ಪುಗಾರರಾಗಿ ಭಾಗವಹಿಸಿದ್ದರು.ನಗರ ಸಭೆಯ ಸ್ವೀಪ್ ತಂಡದವರು ಪಾಲ್ಗೊಂಡಿದ್ದರು.

## ದ್ವಿತೀಯ ಪಿ.ಯು.ಸಿಯಲ್ಲಿ ಎಸ್.ಶ್ರೇಯ ಡಿಸ್ಟಿಂಕ್ಷನ್



**ಭದ್ರಾವತಿ:** ಅಥಣಿ ಕಾಂಪೋಸಿಟ್ ಪಿಯು ಕಾಲೇಜ್, ವಿದ್ವತ್ ಮೆಡಿಕಲ್ ಅಂಡ್ ಐಐಟಿ ಅಕಾಡೆಮಿ ಆಫ್ ಸೈನ್ಸಸ್ ದಾವಣಗೆರೆ ವಿದ್ಯಾರ್ಥಿನಿ ಎಸ್.ಶ್ರೇಯ ಮಾರ್ಚ್ 2024 ರ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆದು ಡಿಸ್ಟಿಂಕ್ಷನ್‌ನಲ್ಲಿ ತೇರ್ಗಡೆ ಹೊಂದಿದ್ದಾರೆ.

ವಿಜ್ಞಾನ ವಿಭಾಗದ ಪಿಸಿಎಂಬಿ ವಿಷಯದಲ್ಲಿ ಒಟ್ಟು 600 ಅಂಕಗಳಿಗೆ 566 ಅಂಕಗಳನ್ನು ಪಡೆದುಕೊಂಡಿದ್ದಾರೆ.ಎಸ್.ಶ್ರೇಯ ಭದ್ರಾವತಿ ತಾಲ್ಲೂಕಿನ ಶಂಕರಘಟ್ಟ ನಿವಾಸಿ ಸಿಂಗನಮನೆ ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ಅಶ್ವಿನಿ,ಮಾಜಿ ಸದಸ್ಯ ಟಿ.ಡಿ ಶಶಿಕುಮಾರ್ ದಂಪತಿಯ ಪುತ್ರಿಯಾಗಿದ್ದಾರೆ.


ಎಸ್.ಶ್ರೇಯ ಅವರ ಸಾಧನೆಯನ್ನು ಭದ್ರಾವತಿ ಬಲಿಜ ಸಮಾಜ,-ಜಯ ಕರ್ನಾಟಕ ಸಂಘಟನೆ ಸೇರಿದಂತೆ ವಿವಿಧ ಸಂಘ-ಸಂಸ್ಥೆಗಳು ಹಾಗೂ ಅನೇಕ ಗಣ್ಯರು ಅಭಿನಂದಿಸಿದ್ದಾರೆ.

**ವರದಿ: ಕೆ ಆರ್ ಶಂಕರ್ ಭದ್ರಾವತಿ**

## ಪರೋಪಕಾರದಲ್ಲಿ ಭಗವಂತನನ್ನು ಕಾಣುವ ಸೇವೆ ನಮ್ಮದಾಗಿರಲಿ:ಡಿ.ಪ್ರಭಾಕರ ಬೀರಯ್ಯ

**ಭದ್ರಾವತಿ:** ಪ್ರತಿಯೊಬ್ಬರಿಗೂ ಭಗವಂತನ ಅನುಗ್ರಹವಿರುತ್ತದೆ. ಆದರೆ ಆ ಅನುಗ್ರಹ ಪಡೆದುಕೊಳ್ಳಬೇಕೆಂದರೆ ನಾವೆಲ್ಲರೂ ಮನಃಪೂರ್ವಕವಾಗಿ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕೆಂದು ಶ್ರೀ ಸತ್ಯ ಸಾಯಿ ಸೇವಾ ಸಂಸ್ಥೆಗಳ ರಾಜ್ಯ ಸಂಯೋಜಕ ಡಿ.ಪ್ರಭಾಕರ ಬೀರಯ್ಯ ಹೇಳಿದರು.

ನ್ಯೂಟೌನ್ ಶ್ರೀ ಸತ್ಯ ಸಾಯಿ ಸೇವಾ ಸಂಸ್ಥೆ ಹಾಗೂ ಪ್ರಶಾಂತಿ ಸೇವಾ ಟ್ರಸ್ಟ್ ವತಿಯಿಂದ ನಗರದ ಕೆಎಸ್ಆರ್‌ಟಿಸಿ ಮುಖ್ಯ ಬಸ್ ನಿಲ್ದಾಣದಲ್ಲಿ ಉಚಿತ ಕುಡಿಯುವ ನೀರಿನ ಸೇವೆಗೆ ಚಾಲನೆ ನೀಡಿ ಮಾತನಾಡುತ್ತಾ ಪರೋಪಕಾರದಲ್ಲಿ ಭಗವಂತನನ್ನು




ಕಾಣುವಂತಹ ಸೇವೆ ನಮ್ಮದಾಗಿರಬೇಕು ಈ ನಿಟ್ಟಿನಲ್ಲಿ ಸೇವಾ ಕಾರ್ಯಗಳು ನಿರಂತರವಾಗಿ ನಡೆಯುತ್ತಿರಬೇಕು ಎಂದರು.

ಶ್ರೀ ಸತ್ಯ ಸಾಯಿ ಸೇವಾ ಸಮಿತಿ ಸಂಚಾಲಕ ಜಿ.ಪಿ.ಪರಮೇಶ್ವರಪ್ಪ,ಶ್ರೀ ಸತ್ಯ ಸಾಯಿ ಸಮಗ್ರ ಶಿಕ್ಷಣ ಸಂಸ್ಥೆ ಪ್ರಾಂಶುಪಾಲರು,ಉಪ ಪ್ರಾಂಶುಪಾಲರು,ಮುಖ್ಯೋಪಾಧ್ಯಾಯರು ಸೇರಿದಂತೆ ಶಿಕ್ಷಕ ವೃಂದ,ಸಿಬ್ಬಂದಿ ವರ್ಗದವರು,ಸೇವಾಕರ್ತರು ಉಪಸ್ಥಿತರಿದ್ದರು.ಶ್ರೀ ಸತ್ಯ ಸಾಯಿ ಸೇವಾ ಸಂಸ್ಥೆಗಳು ಹಾಗು ಪ್ರಶಾಂತಿ ಸೇವಾ ಟ್ರಸ್ಟ್ ವತಿಯಿಂದ ಪ್ರತಿ ವರ್ಷ ಬೇಸಿಗೆ ಅವಧಿಯಲ್ಲಿ ಉಚಿತ ಕುಡಿಯುವ ನೀರಿನ ಸೇವೆ ಹಮ್ಮಿಕೊಳ್ಳಲಾಗುತ್ತಿದ್ದು,ಸೇವಾ ಕಾರ್ಯಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ.

ಕರುನಾಡ ಕಂದ
ಸಂಪುಟ 3 । ಸಂಚಿಕೆ 12
ದಿನಾಂಕ: 16-04-2024 ಪುಟಗಳು:16

# ಹಸಿವು ಮುಕ್ತ ದೇಶ ನಿರ್ಮಾಣದಲ್ಲಿ ಬಾಬೂಜಿ ಅವರ ಪಾತ್ರ ಅಪಾರ:ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ



**ಚಿಕ್ಕಬಳ್ಳಾಪುರ:** ದೇಶ ಹಸಿವಿನ ಸಂಕಷ್ಟದಲ್ಲಿದ್ದಾಗ ಹಸಿರು ಕ್ರಾಂತಿಗೆ ನಾಂದಿ ಹಾಡುವ ಮೂಲಕ ದೇಶದಲ್ಲಿ ಆಹಾರ ಧಾನ್ಯಗಳು ಸಮೃದ್ಧವಾಗಿ ಸಿಗುವಂತೆ ಮಾಡಿದವರು ಮಾಜಿ ಉಪಪ್ರಧಾನಿ ಡಾ.ಬಾಬು ಜಗಜೀವನರಾಂ ಎಂದು ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ಅವರು ತಿಳಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಜಿಲ್ಲಾಡಳಿತ,ಜಿಲ್ಲಾ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಹಸಿರುಕ್ರಾಂತಿಯ ಹರಿಕಾರ,ಮಾಜಿ ಉಪಪ್ರಧಾನಿ ಡಾ.ಬಾಬು ಜಗಜೀವನರಾಮ್ ಅವರ 117 ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿ ದೀನ 'ದಲಿತರು,ರೈತರು,ಕಾರ್ಮಿಕರು,ಶೋಷಿತರ ಬಗ್ಗೆ ಅಪಾರ ಕಳಕಳಿಯನ್ನು ಹೊಂದಿದ್ದ ದೂರದೃಷ್ಟಿಯ ನಾಯಕ ಬಾಬು ಜಗಜೀವನರಾಮ್.ಕೇಂದ್ರದಲ್ಲಿ ಹಲವು ಮಹತ್ವದ ಸಚಿವ ಖಾತೆಗಳನ್ನು ಸಮರ್ಥವಾಗಿ ನಿರ್ವಹಿಸಿದ್ದ ಅವರು ದೇಶ ಹಸಿವಿನ ಸಂಕಷ್ಟದಲ್ಲಿದ್ದಾಗ ಹಸಿರು ಕ್ರಾಂತಿಗೆ ನಾಂದಿ ಹಾಡಿದರು.ಇಂದು ದೇಶ ಆಹಾರ ಸಮೃದ್ಧತೆಯಲ್ಲಿ ಸ್ವಾವಲಂಬನೆ ಸಾಧಿಸಿದೆ ಎಂದರೆ ಅದಕ್ಕೆ ಅವರ ಪರಿಶ್ರಮ ಮತ್ತು ದೂರದೃಷ್ಟಿಯೇ ಕಾರಣ.ಅವರ ಚಿಂತನೆಗಳ ಬೆಳಕಿನಲ್ಲಿ ವಿದ್ಯಾರ್ಥಿ ಯುವಜನರು ದೇಶವನ್ನು ಕೊಂಡೊಯ್ಯುವ ಅಗತ್ಯವಿದೆ ಎಂದರು.

ಭಾರತೀಯ ಸಮಾಜದ ಧೃವತಾರೆಗಳಾದ ಡಾ.ಬಾಬು ಜಗಜೀವನರಾಂ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ರವರು ಶೋಷಿತ ವರ್ಗದ ಏಳಿಗೆ,ಅಭಿವೃದ್ಧಿ, ಸಂಘಟನೆ,ಹೋರಾಟ,ಶಿಕ್ಷಣಕ್ಕಾಗಿ ಶ್ರಮಿಸಿ ಎಲ್ಲರ ಬದುಕಿಗೆ ಬೆಳಕಾಗಿದ್ದಾರೆ.ಅವರ ಜೀವನ ದಾರಿ ಮತ್ತು ಆದರ್ಶಗಳನ್ನು ನಾವೆಲ್ಲರೂ ಜೀವನದಲ್ಲಿ ರೂಡಿಸಿಕೊಂಡು ದೇಶದ ಭವಿಷ್ಯವನ್ನು ಉಜ್ವಲಗೊಳಿಸಲು ಶ್ರಮಿಸಬೇಕು.ನಮ್ಮ ಇಂದಿನ ಮತ್ತು ಮುಂದಿನ ಪೀಳಿಗೆಯ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕು ಎಂದು ಜಿಲ್ಲಾಧಿಕಾರಿ ಅವರು ತಿಳಿಸಿದರು.

ಡಾ.ಬಾಬು ಜಗಜೀವನರಾಂ ರವರು ಭಾರತದ ಮಾಜಿ ಉಪಪ್ರಧಾನಿಗಳಾಗಿ ಹಾಗೂ ಕೇಂದ್ರದ ವಿವಿಧ ಇಲಾಖೆಗಳ ಸಚಿವರಾಗಿ ದೇಶವನ್ನು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸಿ ದೇಶದ ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ ಎಂದು ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ಅವರು ತಿಳಿಸಿದರು.

ಉಪನ್ಯಾಸಕ ಮುನಿರಾಜು ಎಂ.ಅರಿಕೆರೆ ರವರು ಮಾತನಾಡಿ ಡಾ.ಬಾಬು ಜಗಜೀವನ್ ರಾಮ್ ಅವರು ಬಡತನ ಮತ್ತು ಅಸ್ಪೃಶ್ಯತೆಯ ಮಧ್ಯೆ ಮೂಡಿದ ಪರಿವರ್ತನೆಯ ಹಣ-ತೆಯಾಗಿದ್ದಾರೆ.ಕೆಳ ಸಮುದಾಯದಲ್ಲಿ ಜನಿಸಿ ಜಾತಿ ತಾರತಮ್ಯಕ್ಕೆ ಒಳಗಾಗಿದ್ದರು ಸಹ ತಮ್ಮ ಅಚಲ ಸಾಧನೆಯ ಮೂಲಕ ಭಾರತದ ರಾಜಕೀಯ ಚರಿತ್ರೆಯಲ್ಲಿ 50 ವರ್ಷಗಳ ಕಾಲ ಉತ್ತಮ ಸಂಸದೀಯಪಟುವಾಗಿ ಅಚ್ಚಳಿಯದ ಸಾಧನೆ ಮಾಡಿದ್ದರು ಎಂದರು.

ಕಾರ್ಮಿಕ ಖಾತೆ ಸಚಿವರಾಗಿ ಕಾರ್ಮಿಕರ ಸಂಕಷ್ಟಗಳಿಗೆ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಅನೇಕ ಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತಂದರು. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅಂಚೆ ಕಚೇರಿಗಳನ್ನು ತೆರೆಯುವ ಜೊತೆಗೆ ಎಸ್.ಸಿ.ಎಸ್.ಟಿ ಸಮುದಾಯದ ಅಭ್ಯರ್ಥಿಗಳ ನೇಮಕಾತಿಗೆ ಒತ್ತು ನೀಡಿದರು.ರೈಲ್ವೆ ಮಜ್ದೂರ್ ಯೂನಿಯನ್ ಸಂಘಟನೆ ಸ್ಥಾಪನೆ ಮಾಡಿ ಮೀಸಲಾತಿ ಅಡಿಯಲ್ಲಿ ಬರುವ ಖಾಲಿ ಹುದ್ದೆಗಳ ನೇಮಕದಲ್ಲಿ ಶೋಷಿತ ಸಮುದಾಯಗಳ ಪರ ಸೇವೆ ಸಲ್ಲಿಸಿದ್ದಾರೆ.ಕೃಷಿ ಸಚಿವರಾಗಿದ್ದ ಅವಧಿಯಲ್ಲಿ ಪಾರಂಪರಿಕ ಕೃಷಿಯ ಜತೆಗೆ ಭೂರಹಿತ ಸಾಗುವಳಿದಾರರಿಗೆ ಭೂಮಿ ಹಂಚಿಕೆ,ಸಹಕಾರಿ ಸೇವೆ ಪ್ರಾರಂಭ,ಉತ್ತಮ ಬೀಜ,ರಸಗೊಬ್ಬರ ವಿತರಣೆ ಯೋಜನೆ ಜಾರಿಗೊಳಿಸಿ ಹಸಿರು ಕ್ರಾಂತಿಗೆ ಕಾರಣ ಕರ್ತರಾಗಿದ್ದಾರೆ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆ ಹಾಗೂ ಡಾ.ಬಾಬು ಜಗಜೀವನರಾಂ ರವರ ಭಾವಚಿತ್ರಕ್ಕೆ ಗಣ್ಯರು ಪುಷ್ಪಾರ್ಚನೆ ಮಾಡಿದರು.

ಡಾ.ಬಾಬು ಜಗಜೀವನರಾಂ ರವರ 117ನೇ ಜನ್ಮ ದಿನಾಚರಣೆಯ ಜಯಂತಿಯ ಕಾರ್ಯಕ್ರಮದಲ್ಲಿ ಚಿಕ್ಕಬಳ್ಳಾಪುರ ಜಿಲ್ಲಾ ಮತ್ತು ತಾಲ್ಲೂಕು ಸ್ವೀಪ್ ಸಮಿತಿ ವತಿಯಿಂದ ಮತದಾನದ ಜಾಗೃತಿ ಕುರಿತು ಮತದಾರರ ಪ್ರತಿಜ್ಞಾವಿಧಿ ಬೋಧಿಸಲಾಯಿತು ಏಪ್ರಿಲ್ 26 ರಂದು ತಪ್ಪದೇ ಎಲ್ಲರೂ ಮತದಾನ ಮಾಡಲು ಮನವಿ ಮಾಡಲಾಯಿತು. ಕಾರ್ಯಕ್ರಮದ ಆರಂಭದಲ್ಲಿ ಸಂವಿಧಾನ ಪೀಠಿಕೆಯನ್ನು ಬೋಧಿಸಲಾಯಿತು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಕಾಶ್ ಜಿ.ಟಿ.ನಿಟ್ಟಾಲಿ,ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಿ.ಎಲ್.ನಾಗೇಶ್, ಉಪವಿಭಾಗಾಧಿಕಾರಿ ಡಿ.ಎಚ್.ಅಶ್ವಿನ್,ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ತೇಜಾನಂದ ರೆಡ್ಡಿ,ತಹಸೀಲ್ದಾರ್ ಅನಿಲ್,ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಸಂದೀಪ್ ಕುಮಾರ್,ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಶೇಷಾದ್ರಿ,ವಿವಿಧ ಸಮುದಾಯಗಳ ಮುಖಂಡರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

**ವರದಿ-ತುಳಸಿ ನಾಯ್ಕ್**

## ಶುದ್ಧ ಕುಡಿಯುವ ನೀರಿನ ಘಟಕ ಹಸ್ತಾಂತರ



**ಭದ್ರಾವತಿ:** ಲಯನ್ಸ್ ಕ್ಲಬ್ ಉಂಬಲೇಬೈಲು ರಸ್ತೆ ನ್ಯೂಟೌನ್ ಭದ್ರಾವತಿ ಪ್ರಾಂತ್ಯ 8 ಜಿಲ್ಲೆ 317 ಸಿ ವತಿಯಿಂದ ಖಾಸಗಿ ಬಸ್ ನಿಲ್ದಾಣದಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಜಿಲ್ಲಾ ಗವರ್ನರ್ ಜಿಲ್ಲೆ 317 ಎಂ ಜೆ ಎಫ್ ಲ.ಡಾಕ್ಟರ್ ನೇರಿ ಕರ್ನೇಲಿಯೋ ರವರಿಂದ ಹಸ್ತಾಂತ-ರಿಸಲಾಯಿತು.

ಈ ಸಂದರ್ಭದಲ್ಲಿ ಲಯನ್ಸ್ ಕ್ಲಬ್ ಕಾರ್ಯದರ್ಶಿ ಎಂ ದಿವಾಕರ್,ಖಜಾಂಚಿ ಎನ್ ಶ್ರೀನಿವಾಸ್ ಮತ್ತು ಪದಾಧಿಕಾರಿಗಳು, ಖಾಸಗಿ ಬಸ್ ನಿಲ್ದಾಣದ ಅಧ್ಯಕ್ಷ ಶ್ರೀನಿವಾಸ,ಉಪಾಧ್ಯಕ್ಷ ಕೆ.ಜಯಪ್ಪ ಹಾಗೂ ಪದಾಧಿಕಾರಿಗಳು ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಎ.ಐ.ಸಿ.ಸಿ ಹ್ಯೂಮನ್ ರೈಟ್ಸ್ ತಾಳಿಕೋಟೆ ತಾಲೂಕು ಉಪಾಧ್ಯಕ್ಷರಾಗಿ ಉಸ್ಮಾನ ಬಾಗವಾನ ಆಯ್ಕೆ



ವಿಜಯಪುರ ಜಿಲ್ಲೆಯ ತಾಳಿಕೋಟೆ ತಾಲೂಕಿನ ಬಳಗಾನೂರು ಗ್ರಾಮದ ಉಸ್ಮಾನ್ ಬಾಗವಾನ್ ಅವರನ್ನು ಎ.ಐ.ಸಿ.ಸಿ ಹ್ಯೂಮನ್ ರೈಟ್ಸ ವಿಭಾಗದ ತಾಳಿಕೋಟೆ ತಾಲೂಕು ಉಪಾಧ್ಯಕ್ಷರಾಗಿ ನೇಮಕ ಮಾಡಲಾಗಿದೆ ಎಂದು ರಾಜ್ಯಾಧ್ಯಕ್ಷರಾದ ಚಂದ್ರಕಾಂತ್ ಹಾಗೂ ವಿಜಯಪುರ ಜಿಲ್ಲೆಯ ಮತ್ತು ನಾಲ್ಕು ಜಿಲ್ಲೆಯ ಉಸ್ತುವಾರಿಯಾದ ಶಬ್ಬೀರ್ ಡಲಾಯತ್ ಹಾಗೂ ಮುದ್ದೇಬಿಹಾಳ ತಾಲೂಕಿನ ಅಧ್ಯಕ್ಷರು ಹುಸೇನ್ ಮುಲ್ಲಾ ಅವರು ಆದೇಶ ಪತ್ರವನ್ನು ನೀಡಿ ಪತ್ರಿಕಾ ಪ್ರಕಟಣೆ ನೀಡಿದ್ದಾರೆ.

ಈ ಕೂಡಲೇ ತಮಗೆ ನೀಡಿದ ಜವಾಬ್ದಾರಿಯನ್ನು ತೆಗೆದುಕೊಂಡು ಪಕ್ಷ ಸಂಘಟನೆಯ ಮತ್ತು ಸಮಾಜದಲ್ಲಿನ ನೊಂದ ಬಡ ಜನರ ಪರವಾಗಿ ಕೆಲಸ ಮಾಡಬೇಕು ಎಂದು ವಿಜಯಪುರ ಜಿಲ್ಲೆಯ ಹಾಗೂ ನಾಲ್ಕು ಜಿಲ್ಲೆಯ ಉಸ್ತುವಾರಿಯಾದ ಶಬ್ಬೀರ ಡಲಾಯತ ತಿಳಿಸಿದರು.ನನ್ನ ಮೇಲೆ ನಂಬಿಕೆ ಇಟ್ಟು ಉಪಾಧ್ಯಕ್ಷರಾಗಿ ಮಾಡಿದ ರಾಜ್ಯಾಧ್ಯಕ್ಷ,ಜಿಲ್ಲಾಧ್ಯಕ್ಷ, ಅಧ್ಯಕ್ಷ ಹಾಗೂ ಉಪಾಧ್ಯಕ್ಷರಿಗೆ ಸದಸ್ಯರಿಗೆ ಈ ಮೂಲಕ ಉಸ್ಮಾನ ಬಾಗವಾನ ಅವರು ಧನ್ಯವಾದಗಳನ್ನು ತಿಳಿಸಿದ್ದಾರೆ.

**ವರದಿ ಉಸ್ಮಾನ ಬಾಗವಾನ**

ಕರುನಾಡ ಕಂದ
ಸಂಪುಟ 3 । ಸಂಚಿಕೆ 12
ದಿನಾಂಕ: 16-04-2024 ಪುಟಗಳು:16

# ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರ: 16 ಅಭ್ಯರ್ಥಿಗಳಿಂದ 17 ನಾಮಪತ್ರ ಸಲ್ಲಿಕೆ

**ಚಿಕ್ಕಬಳ್ಳಾಪುರ:** ಲೋಕಸಭಾ ಕ್ಷೇತ್ರದ ಸಾರ್ವತ್ರಿಕ ಚುನಾವಣೆಗೆ ನಾಮಪತ್ರ ಸಲ್ಲಿಸಲು ಕೊನೆಯ ದಿನ ಒಟ್ಟು 16 ಅಭ್ಯರ್ಥಿಗಳಿಂದ ಒಟ್ಟು 17 ನಾಮಪತ್ರಗಳನ್ನ ಚುನಾವಣಾಧಿಕಾರಿ ಪಿ.ಎನ್ ರವೀಂದ್ರ ಅವರಿಗೆ ಜಿಲ್ಲಾಡಳಿತ ಭವನದ ಜಿಲ್ಲಾ ಚುನಾವಣಾಧಿಕಾರಿ ಕಚೇ-ರಿಯಲ್ಲಿ ಸಲ್ಲಿಸಿದರು.

ಭಾರತೀಯ ಜನತಾ ಪಾರ್ಟಿಯ ಅಭ್ಯರ್ಥಿಯಾಗಿ ಡಾ.ಕೆ.ಸುಧಾಕರ್ ಸಹ ಎರಡು ನಾಮಪತ್ರಗಳನ್ನು ಸಲ್ಲಿಸಿದ್ದಾರೆ.ಪಕ್ಷೇತರ ಅಭ್ಯರ್ಥಿಗಳಾದ ಹೆಚ್.ಸಿ.ಚಂದ್ರಶೇಖರ್,ರಾಮನಾಯ್ಕ ಅವರು ಸಹ ತಲಾ ಒಂದು ನಾಮಪತ್ರ ಸಲ್ಲಿಸಿದ್ದಾರೆ.

ಇಂಡಿಯನ್ ಲೇಬರ್ ಪಾರ್ಟಿ (ಅಂಬೇಡ್ಕರ್ ಪುಲೆ) ಅಭ್ಯರ್ಥಿಯಾಗಿ ಟಿ.ಆರ್.ನಾರಾಯಣರಾವ್, ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಅಭ್ಯರ್ಥಿಯಾಗಿ ಡಾ.ಡಿ.ಇ.ಮಾರುತಿ ಪ್ರಸನ್ನ ಕುಮಾರ್,ಕರ್ನಾಟಕ ಪ್ರಜ್ಞಾವಂತ ಜನತಾ ಪಾರ್ಟಿ ವತಿಯಿಂದ ನಾರಾಯಣಸ್ವಾಮಿ ಬಿ.ಎಂ.ಅಖಿಲ ಭಾರತ ಹಿಂದೂ ಮಹಾ ಸಭಾ ಪಕ್ಷದಿಂದ ರಾಜಾರೆಡ್ಡಿ,ಇಂಡಿಂ-ಯನ್ ಮೂವ್ ಮೆಂಟ್ ಪಾರ್ಟಿ ಯಿಂದ ಜಿ.ಎನ್. ಕೋದಂಡರೆಡ್ಡಿ,ಉತ್ತಮ ಪ್ರಜಾಕೀಯ ಪಕ್ಷದಿಂದ ವೆಂಕಟೇಶ ಮೂರ್ತಿ ವಿ ರವರು ನಾಮಪತ್ರ ಸಲ್ಲಿಸಿದ್ದಾರೆ.
ಪಕ್ಷೇತರ ಅಭ್ಯರ್ಥಿಗಳಾಗಿ ಸಂದೇಶ್ ಜಿ, ಟಿ.ವೆಂಕಟಶಿವುಡು,ಸಿ.ವಿ ಲೋಕೇಶ್ ಗೌಡ,ನರಸಿಂಹಮೂರ್ತಿ



ವಿ.ಎನ್.,ವೆಂಕಟೇಶಪ್ಪ.ಎನ್.,ವಲಸಪಲ್ಲಿ ಉತ್ತಪ್ಪ,ರಾಮಯ್ಯ ಅವರು ನಾಮಪತ್ರ ಸಲ್ಲಿಸಿದ್ದಾರೆ.

ಈ ಸಂದರ್ಭದಲ್ಲಿ ಅಪರ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಅಪರ ಜಿಲ್ಲಾಧಿಕಾರಿ ಡಾ. ಎನ್ ತಿಪ್ಪೇಸ್ವಾಮಿ ಅವರು ಇದ್ದರು.

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಇದುವರೆಗೆ ಒಟ್ಟು 36 ಅಭ್ಯರ್ಥಿಗಳಿಂದ 43 ನಾಮಪತ್ರ ಸಲ್ಲಿಕೆಯಾಗಿದೆ.ಅಭ್ಯರ್ಥಿಗಳ ನಾಮಪತ್ರದೊಂದಿಗೆ ಸಲ್ಲಿಸಿರುವ ಅಫಿಡವಿಟ್ ಪ್ರತಿಯನ್ನು ಭಾರತ ಚುನಾವಣಾ ಆಯೋಗದ ಪೋರ್ಟಲ್ ನಲ್ಲಿ ಆಪ್ ಲೋಡ್ ಮಾಡಲಾಗಿದೆ ಮತ್ತು ಚುನಾವಣಾಧಿಕಾ-ರಿಗಳ ಕಾರ್ಯಾಲಯದ ಸೂಚನ ಫಲಕದಲ್ಲಿ ನಾಮಪತ್ರದ ನಕಲು ಪ್ರತಿ ಮತ್ತು ಅಫಿಡವಿಟ್ ಅನ್ನು ಪ್ರಚುರಪಡಿಸಲಾಗಿದೆ ಎಂದು ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಪಿ.ಎನ್ ರವೀಂದ್ರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ವರದಿ-ತುಳಸಿ ನಾಯ್ಕ್**

# ಸಂಭ್ರಮದ ಹಬ್ಬ ಈದ ವುಲ್ ಫಿತರ್ ಆಚರಣೆ, ಮತದಾನ ಮಾಡುವುದು ಪ್ರತಿಯೊಬ್ಬರ ಹಕ್ಕು: ಮೌಲಾನಾ ಮೊಹಮ್ಮದ್ ಝುಬೇರ್ ನಾಯಕ್ ವಾಡಿ

**ಬಾಗಲಕೋಟೆ/ರಬಕವಿ ಬನಹಟ್ಟಿ:** ಮುಸ್ಲಿಮರ ಪವಿತ್ರ ತಿಂಗಳುಗಳಲ್ಲಿ ರಂಜಾನ್ ತಿಂಗಳು ಬಹಳ ಮುಖ್ಯವಾದದ್ದು ವಿಶ್ವಾದ್ಯಂತ ಇಡೀ ತಿಂಗಳು ರೋಜಾ ಉಪವಾಸ,ಸೂರ್ಯ ಮುಳುಗಿದ ಮೇಲೆ ಆಹಾರ ಸೇವನೆ,ದಾನ ಧರ್ಮ ಈ ಪವಿತ್ರ ತಿಂಗಳಲ್ಲಿ ವಿಶೇಷವಾಗಿರುತ್ತದೆ.ಈ ಪವಿತ್ರ ತಿಂಗಳಲ್ಲಿ 30 ದಿನ ರೋಜೆ ಉಪವಾಸ ಮುಗಿದ ಮರು ದಿನವೇ ಈದ್ ಉಲ್ ಫಿತರ್ ಹಬ್ಬ ಇವತ್ತು ಗುರುವಾರ ಇಡೀ ರಾಜ್ಯದ್ಯಂತ ಸಂಭ್ರಮ ಸಡಗರದೊಂದಿಗೆ ಬಾಗಲಕೋಟೆ ಜಿಲ್ಲೆಯ ರಬಕವಿ ಬನಹಟ್ಟಿ ತಾಲೂಕಿನ ಬನಹಟ್ಟಿ ನಗರದ ಲಕ್ಷ್ಮೀನಗರದ ಅರೇಬಿಕ್ ಶಾಲಾ ಅವರಣದ ಈದ್ಗಾ ಮೈದಾನದಲ್ಲಿ ಅತಿ ಸಂಭ್ರಮದಿಂದ ಹಬ್ಬವನ್ನು ಆಚ-ರಿಸಿದರು.



ಈ ಸಂದರ್ಭದಲ್ಲಿ ಮಾತನಾಡಿದ ಮೌಲಾನ ಮೊಹಮ್ಮದ್ ಜುಬೇರ್ ನಾಯಕ್ ವಾಡಿ ಜಗತ್ತು ಹಾಗೂ ಈಗಿನ ಪರಿಸ್ಥಿತಿಯೂ ನಮಗೆ ಕೈಬೀಸಿ ಕರೆತಾ ಇದೆ ಮುಸ್ಲಿಮರೇ ನಿಮಗೆ ಬೇಕಾಗಿರುವುದು ನಿಮ್ಮ ದಿನನಿತ್ಯ ಜೀವನ ಶೈಲಿಗಳನ್ನು ಬದಲಿಸಬೇಕು ಮುಸ್ಲಿಮರಿಗೆ ಬೇಕಾಗಿರುವುದು ಅಲ್ಲಾಹನ ಆಜ್ಞೆ ಹಾಗೂ ಪೈಗಂಬರರ ತತ್ವ ಸಿದ್ಧಾಂತಗಳನ್ನು ಅವಳಿಸಿಕೊಂಡು ನಿಜವಾದ ಮುಸ್ಲಿಮರು ಆಗಬೇಕು ಹಾಗೂ ಈಗಿನ ಪರಿಸ್ಥಿತಿಯ ಸಂದರ್ಭದಲ್ಲಿ ನಮಗೆ ಅವಕಾಶ ಕೊಡಿ ಬಂದಿದೆ ನಿಜವಾದ ಮುಸ್ಲಿಮನಾಗಬೇಕೆಂದರೆ ನಮ್ಮ ನಡವಳಿಕೆ ನಮ್ಮ ಚಲನವನ,ವ್ಯವಹಾರ,ದಿನನಿತ್ಯದ ಜೀವನ ಶೈಲಿಗಳನ್ನು ಬದಲಿಸಬೇಕಾಗಿದೆ.ಇವತ್ತಿನ ದಿನಮಾನಗಳಲ್ಲಿ ಜಗತ್ತು ಇಸ್ಲಾಂ ಹಾಗೂ ಮುಸ್ಲಿಮರನ್ನು ಕೆಂಗಣ್ಣಿನ ಮೂಲಕ ನೋಡುತ್ತಿದೆ. ಮುಸ್ಲಿಮರ ವಿರುದ್ಧ ಇಡೀ ಜಗತ್ತಿನಲ್ಲಿ ನಾಲ್ಕು ದಿಕ್ಕುಗಳಲ್ಲಿ ಇಸ್ಲಾಂ ಧರ್ಮವು ರಕ್ತಪಾತ , ಭಯೋತ್ಪಾದನೆ,ಕೊಲ್ಲುವುದು,ಬಡಿಯುವುದು ಕೇವಲ ಅಷ್ಟೇ ಬಯಸುತ್ತಿದೆ ಎಂದು ಸುಳ್ಳಿನ ಪ್ರೊಪಗೊಂಡ ಮೂಲಕ

**ಹಬ್ಬದ ಸಂಭ್ರಮದ ನಡುವೆ ಮತ ಚಲಾವಣೆಯ ಕರೆ ಕೊಟ್ಟ ಮೌಲಾನ ಮಹಮ್ಮದ್ ಝುಬೇರ್ ನಾಯಕ್ ವಾಡಿ:**
**ಭಾರತ ದೇಶದ ಸಂವಿಧಾನದಲ್ಲಿ ಪ್ರತಿಯೊಬ್ಬರಿಗೂ ಮತದಾನ ಮಾಡುವುದು ಅವಕಾಶ ಮಾಡಕೊಟ್ಟಿದ್ದು ಸಂವಿಧಾನ ನಿಜವಾದ,ಸತ್ಯವಾದ, ಸಾಮಾಜಿಕ ಸೇವೆಯನ್ನು ಮಾಡುವಂತಹ ವ್ಯಕ್ತಿಯನ್ನು ಸಾಕ್ಷಿ ಹಾಗೂ ಆಯ್ಕೆ ಮೂಲಕ ಮತದಾನ ಮಾಡುವುದು ಪ್ರತಿಯೊಬ್ಬರ ಕರ್ತವ್ಯ ವಾಗಿದೆ ಎಂದು ಒತ್ತಿ ಹೇಳಿದರು.**

ಜಗತ್ತಿನ ಪ್ರತಿಯೊಬ್ಬ ಮನುಷ್ಯನ ಮೆದುಳಿನಲ್ಲಿ ಇಸ್ಲಾಂ ಧರ್ಮದ ವಿರುದ್ಧ ಹಾಗೂ ಮುಸ್ಲಿಮರ ವಿರುದ್ಧ ತಲೆಯಲ್ಲಿ ತುಂಬುತ್ತಿದ್ದಾರೆ ಇಸ್ಲಾಂ ಮತ್ತು ಮುಸ್ಲಿಮರು ಯಾವುದೇ ರೀತಿಯಲ್ಲಿ ಇಸ್ಲಾಂ ಧರ್ಮವು ಅಂತ್ಯವಾಗಬೇಕೆಂದು ಷಡ್ಯಂತ್ರ ಮಾಡಲಾಗುತ್ತಿದೆ . ಇವೆಲ್ಲವೂ ಇಸ್ಲಾಂ ಧರ್ಮದ ವಿರುದ್ಧ ಸುಳ್ಳಿನ ಪ್ರೊಪಗೊಂಡ ಮೂಲಕ ದ್ವೇಷ ಹರಡುಸ್ತಾ ಇದ್ದಾರೆ . ಆದರೆ ಇದಕ್ಕೆಲ್ಲ ಕಾರಣಗಳು ಮುಸ್ಲಿಮರು ನಾವು ಏಕೆಂದರೆ ಸತ್ಯವಾದ ನಿಜವಾದ ಇಸ್ಲಾಂ ಧರ್ಮದ ತತ್ವ ಸಿದ್ಧಾಂತಗಳನ್ನು ಇಡೀ ಜಗತ್ತಿಗೆ ತೋರಿಸಲು ನಾವು ವಿಫಲರಾಗಿದ್ದೇವೆ ಎಂದು ಹೇಳಿದರು.

**ವರದಿ:ಮಹಿಬೂಬ್ ಬಾರಿಗಡ್ಡಿ**

# ಜಿಲ್ಲಾ ಅಧ್ಯಕ್ಷರಾಗಿ ಪರಶುರಾಮ ಪಾರಪ್ಪ ಬಂಡಿ ಆಯ್ಕೆ

**ಬಾಗಲಕೋಟೆ:** ವಿಜಯ ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಅಧ್ಯಕ್ಷರಾಗಿ ಪರಶುರಾಮ ಪಾರಪ್ಪ ಬಂಡಿ ಆಯ್ಕೆ ವಿಜಯ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯ ಅಧ್ಯಕ್ಷರಾದ ಎಂ ಬಿ ಮಹೇಶ್ ಕುಮಾರ್ ಅವರ ಆದ-ೇಶದ ಮೇರೆಗೆ ಪರಶುರಾಮ ಪಾರಪ್ಪ ಬಂಡಿ ಅವರನ್ನು ಬಾಗಲಕೋಟೆ ಜಿಲ್ಲಾ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದಾರೆ.ಈ ಸಂದರ್ಭದಲ್ಲಿ ವಿಜಯ ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯ ಅಧ್ಯಕ್ಷ-ರಿಗೆ ಹಾಗೂ ರಾಜ್ಯ ಕಮಿಟಿಯ ಎಲ್ಲಾ ಪದಾಧಿಕಾರಿಗಳಿಗೆ ನೂತನ ಜಿಲ್ಲಾಧ್ಯಕ್ಷರು ತುಂಬು ಹೃದಯದ ಧನ್ಯವಾದಗಳನ್ನು ತಿಳಿಸಿದ್ದಾರೆ.




# ಶಿವಮೊಗ್ಗ ಜಿಲ್ಲಾ ಬೀದಿಬದಿ ವ್ಯಾಪಾರಸ್ಥರಿಂದ ಅಂಬೇಡ್ಕರ್ ಜಯಂತಿ ಆಚರಣೆ



ಶಿವಮೊಗ್ಗ:ನಗರದ ಮೈನ್ ಮಿಡ್ಲ್ ಸ್ಕೂಲ್ ಆವರಣದಲ್ಲಿ, ಶಿವಮೊಗ್ಗ ಜಿಲ್ಲಾ ಬೀದಿಬದಿ ವ್ಯಾಪಾರಸ್ಥರ ಸಂಘದಿಂದ ಡಾ.ಬಿ.ಆರ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ, ಪುಷ್ಪಾರ್ಚನೆ ಮಾಡುವುದರ ಮೂಲಕ 133ನೇ ಜಯಂತೋತ್ಸವ ಆಚ-ರಿಸಲಾಯಿತು. ಈ ವೇಳೆ ಶಿವಮೊಗ್ಗ ಜಿಲ್ಲಾ ಬೀದಿಬದಿ ವ್ಯಾಪಾರಸ್ಥರ ಸಂಘದ ಜಿಲ್ಲಾಧ್ಯಕ್ಷ ಚನ್ನವೀರಪ್ಪ ಗಾಮನಗಟ್ಟಿ, ಮತ್ತು ಸಂಘದ ಸದಸ್ಯರು ಸತ್ಯಮೂರ್ತಿ,ನವೀನ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕರುನಾಡ ಕಂದ
ಸಂಪುಟ 3 | ಸಂಚಿಕೆ 12
ದಿನಾಂಕ: 16-04-2024 ಪುಟಗಳು:16

# ಮಹನೀಯರ ಆದರ್ಶಗಳನ್ನು ಸರ್ವರೂ ಅಳವಡಿಸಿಕೊಳ್ಳಬೇಕು: ತಹಶೀಲ್ದಾರ್ ಕೆ.ಆರ್.ನಾಗರಾಜ್



**ಭದ್ರಾವತಿ:** ತಾಲ್ಲೂಕು ಆಡಳಿತ,ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ವಿವಿಧ ಸಂಘಟನೆಗಳ ಸಹಯೋಗದಲ್ಲಿ ಹಸಿರು ಕ್ರಾಂತಿಯ ಹರಿಕಾರ ಹಾಗೂ ಮಾಜಿ ಉಪ ಪ್ರಧಾನಿ ಬಾಬು ಜಗಜೀವನ ರಾಂ ರವರ 117 ನೇ ಜಯಂತಿಯನ್ನು ತಾಲ್ಲೂಕು ಕಚೇರಿಯ ಸಭಾಂಗಣದಲ್ಲಿ ಸರಳವಾಗಿ ಆಚರಿಸಲಾಯಿತು.

ತಹಶೀಲ್ದಾರ್ ಕೆ.ಆರ್.ನಾಗರಾಜ್ ರವರು ಬಾಬು ಜಗಜೀವನ್ ರಾಮ್ ರವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿ,ಹಸಿರು ಕ್ರಾಂತಿಯ ಹರಿಕಾರ ಬಾಬೂಜಿ ಸಮಾಜದ ಕಟ್ಟಕಡೆಯ ವ್ಯಕ್ತಿಯ ಜೀವನಕ್ಕೂ ಆದ್ಯತೆ ಕೊಟ್ಟಿದ್ದರಿಂದ ಇಂದು ಸಮಾಜದಲ್ಲಿ ಆಹಾರ ಪದಾರ್ಥಗಳ ಕೊರತೆಯಿಲ್ಲ. ಇಂತಹ ಮಹನೀಯರ ಆದರ್ಶಗಳನ್ನೂ ಎಲ್ಲರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಕರೆ ನೀಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಎ.ಕೆ.ನಾಗೇಂದ್ರಪ್ಪ ಮಾತನಾಡಿ, ಬಾಬು ಜಗಜೀವನರಾಂ ಕೇವಲ ಹಸಿರು ಕ್ರಾಂತಿಯ ಹರಿಕಾರರು ಮಾತ್ರವಲ್ಲ.ಸಂವಿಧಾನ ಮತ್ತು ಅಂಬೇಡ್ಕರ್ ಆಶಯಗಳನ್ನು ಸಂವಿಧಾನದಲ್ಲಿ ಜಾರಿಗೆ ತಂದ ಮೇರು ರಾಜಕಾರಣಿ ಎಂದು ಹೇಳಿದರು.

ವಕೀಲ ಎಂ ಶಿವಕುಮಾರ್ ಮಾತನಾಡಿ,ಭಾರತ ದೇಶದ ಇಬ್ಬರು ಪ್ರಮುಖ ನಾಯಕರೆಂದರೆ ಅಂಬೇಡ್ಕರ್ ಮತ್ತು ಬಾಬು ಜಗಜೀವನರಾಂ. ಅಂಬೇಡ್ಕರ್ ಅಕ್ಷರ ಜ್ಞಾನದ ಮಹತ್ವ ತಿಳಿಸಿದರೆ, ಬಾಬು ಜಗಜೀವನರಾಂ ಅಹಾರದ ಮಹತ್ವವನ್ನು ತಿಳಿಸಿದವರು.ಇವರಿಬ್ಬರೂ ಸಹ ಬಡತನದಲ್ಲಿಯೇ ಬೆಳೆದರೂ ಬಡತನಕ್ಕೆ ಸೀಮಿತವಾಗದೆ ಜ್ಞಾನದ ಮೂಲಕ ಅಧಿಕಾರ ಪಡೆದವರು.ಬಾಬೂಜಿ ಸೃಷ್ಟಿಸಿದ ಹಸಿರು ಕ್ರಾಂತಿಯಿಂದ ದೇಶದಲ್ಲಿ ಬಡವರಿಗೆ ಆಹಾರದ ಕೊರತೆ ದೂರವಾಯಿತು.ಪರಿಶಿಷ್ಟ ಜಾತಿಗಳಂತಹ ತುಳಿತಕ್ಕೊಳಗಾದ ವರ್ಗಗಳ ಹಕ್ಕುಗಳಿಗಾಗಿ ಹೋರಾಡಿದ ಗಮನಾರ್ಹ ಭಾರತೀಯ ರಾಜಕಾರಣಿ. ಅವರು 1936 ರಿಂದ ಸಂಸದರಾದರು ಮತ್ತು 1986 ರವರೆಗೆ ಸೇವೆ ಸಲ್ಲಿಸಿದರು.ಇದು 50 ವರ್ಷಗಳ ನಿರಂತರ ಸಂಸದೀಯ ಸೇವೆಯ ದಾಖಲೆಯಾಗಿದೆ ಎಂದರು.

ದಲಿತ ಸಂಘರ್ಷ ಸಮಿತಿಯ ಹಿರಿಯ ಮುಖಂಡ ಈಶ್ವರಪ್ಪ ಮಾತನಾಡಿ,ಭಾರತದ ಬಡವರ ಕಷ್ಟಗಳನ್ನುಆಲಿಸಿ,ದೇಶದ ಪ್ರಮುಖ ಸಂರಕ್ಷಣೆಗಳಾದ ಜಲ ಸಂರಕ್ಷಣೆ ಮತ್ತು ಆಹಾರ ಸಂರಕ್ಷಣೆಗೆ ಆದ್ಯತೆ ನೀಡಿದ ಪ್ರಮುಖ ರಾಜಕಾರಣಿ ಬಾಬು ಜಗಜೀವನರಾಂ.ಜನರ ಬದುಕಿಗೆ ಯೋಜನೆಗಳ ಮೂಲಕ ದಾರಿತೋರಿದ ಇಂಥ ಮಹಾನೀಯರನ್ನು ಪ್ರತಿ ದಿನವೂ ಸ್ಮರಿಸಬೇಕಿರುವುದು ಪ್ರತಿಯೊಬ್ಬರ ಜವಾಬ್ದಾರಿ ಎಂದರು.

ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಗಂಗಣ್ಣ, ನಗರಸಭೆ ಪೌರಾಯುಕ್ತ ಪ್ರಕಾಶ್ ಎಂ ಚನ್ನಪ್ಪನವರ್,ಸಮಾಜ ಕಲ್ಯಾಣಾಧಿಕಾರಿ ಕೆ.ಗೋಪಾಲಪ್ಪ,ಉಪ ತಹಶೀಲ್ದಾರ್ ರವಾರುಗಳಾದ ಮಂಜಾನಾಯ್ಕ್,ಎ.ರಾಜ್ ಅರಸ್, ಬಸವರಾಜು,ಗಿರಿರಾಜ್,ಡಿ ಗ್ರೂಪ್ ನೌಕರರ ಸಂಘದ ಜಿಲ್ಲಾಧ್ಯಕ್ಷ,ಕಂದಾಯ ನಿರೀಕ್ಷಕ ಸತೀಶ್,ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯ ಕಾರ್ಯಕ್ರಮ ನಿರ್ವಾಹಕ ಅಲೆಕ್ಸ್, ದಲಿತ ಸಂಘಟನೆಗಳ ಮುಖಂಡರಾದ ಟಿ.ಎಂ. ಮಂಜುನಾಥ್,ತಮ್ಮಣ್ಣ,ನಾಗರಾಜು,ರಾಜಶೇಖರ,ಶ್ರೀನಿವಾಸ್ ಬೊಮ್ಮನಹಳ್ಳಿ ಹಾಗೂ ತಾಲ್ಲೂಕು ಕಚೇರಿ ಸಿಬ್ಬಂದಿ ಪಾಲ್ಗೊಂಡಿದ್ದರು.

# ಪಿಯುಸಿ ಪರೀಕ್ಷೆ: ಸಪ್ತಗಿರಿ ಕಾಲೇಜಿಗೆ ಶೇ 100 ಫಲಿತಾಂಶ







**ಬೀದರ್:** ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಇಲ್ಲಿಯ ಶ್ರೀ ವೆಂಕಟೇಶ್ವರ ಶಿಕ್ಷಣ ಸಂಸ್ಥೆ ಸಂಚಾಲಿತ ಸಪ್ತಗಿರಿ ಪದವಿಪೂರ್ವ ವಿಜ್ಞಾನ ಕಾಲೇಜು ಶೇ 100ಕ್ಕೆ 100 ರಷ್ಟು ಫಲಿತಾಂಶ ಪಡೆದು ಗಮನ ಸೆಳೆದಿದೆ.

ಪರೀಕ್ಷೆ ಬರೆದ ಕಾಲೇಜಿನ ಎಲ್ಲಾ 179 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 80 ಅಗ್ರಶ್ರೇಣಿ ಹಾಗೂ 99 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಪಾಸಾಗಿದ್ದಾರೆ.

ವಿಕಾಸ ರಾಚಣ್ಣ ಶೇ 97, ರಂಜಿತಾ ಕುಶಾಲರಾವ್ ಶೇ 96, ಅಭಿಷೇಕ ವಿಠ್ಠಲ ಶೇ 96, ಸೌಮ್ಯ ಕಲ್ಲಪ್ಪ ಶೇ 96, ಸಂದೀಪ್ ರಮೇಶ ಶೇ 95, ಸಾಯಿನಾಥ ಗೋಪಾಲ್ ಶೇ 95, ನವಿನಾ ಬಕ್ಕಪ್ಪ ಶೇ 95, ಮಹಮ್ಮದ್ ಖುತಬುದ್ದೀನ್ ಎಂ.ಡಿ.ಗಫರ್ ಶೇ 95 ರಷ್ಟು ಅಂಕ ಗಳಿಸಿ ಸಾಧನೆ ಮಾಡಿದ್ದಾರೆ. ಅನೇಕ ವಿದ್ಯಾರ್ಥಿಗಳು ಭೌತಶಾಸ್ತ್ರ,ರಸಾಯನಶಾಸ್ತ್ರ,ಗಣಿತ ಹಾಗೂ ಜೀವಶಾಸ್ತ್ರದಲ್ಲಿ ಗರಿಷ್ಠ 100ಕ್ಕೆ 100ಕ್ಕೆ ಅಂಕ ಪಡೆದಿದ್ದಾರೆ.

ಕಾಲೇಜಿನಲ್ಲಿ ಪ್ರಾಚಾರ್ಯರಾದ ಶ್ರೀ ಗೋವಿಂದ ಡಿ.ತಾಂದಳೆ, ಸಂಸ್ಥೆಯ ಅಧ್ಯಕ್ಷ ಶ್ರೀನಿವಾಸ್ ಡಿ.ತಾಂದಳೆ, ಕಾರ್ಯದರ್ಶಿ ಶ್ರೀ ಗೋಪಾಲ್ ಡಿ.ತಾಂದಳೆ, ವಿದ್ಯಾರ್ಥಿಗಳಿಗೆ ಸಿಹಿ ತಿನ್ನಿಸಿ ಅಭಿನಂದಿಸಿದರು.

ಉಪನ್ಯಾಸಕರಾದ ಶ್ರೀ ಸಲಾಉದ್ದಿನ,ಶ್ರೀ ಬಿರೇಶ ಯಾತನೂರ,ಜೀವಶಾಸ್ತ್ರ ಉಪನ್ಯಾಸಕರಾದ ಶ್ರೀ ಡಾ॥ಆಸಿಫ್,ಭೌತಶಾಸ್ತ್ರ ಉಪನ್ಯಸಕರಾದ ಶ್ರೀ ಆಸಿಫ್ ಅಲಿ,ಜೀವಶಾಸ್ತ್ರದ ಉಪನ್ಯಾಸಕರಾದ ಶ್ರೀ ಅನೀಲ ಜಾಧವ,ಆಂಗ್ಲ ಭಾಷಾ ಉಪನ್ಯಾಸಕರಾದ ಶ್ರೀ ಸಾಗರ ಪಡಸಲೆ,ಗಣಿತ ಉಪನ್ಯಾಸಕರಾದ ಶ್ರೀ ಚಂದ್ರಕಾಂತ ಝುಬಾಡೆ,ಜೀವಶಾಸ್ತ್ರ ಉಪನ್ಯಾಸಕರಾದ ಶ್ರೀ ಸಂತೋಷ ಗಿರಿ,ಶ್ರೀ ಗಣೇಶ ರೆಡ್ಡಿ,ಸೈಯದ ಜಾಫರ್ ಅಲಿ,ಕು.ಪ್ರಾಜಕ್ತಾ,ಶ್ರೀ ನಾಗರಾಜ,ಶ್ರೀ ಪ್ರೇಮಕುಮಾರ,ಕು.ದಿವ್ಯ,,ಕು.ಸೀಮಾ,ಶ್ರೀ ಮಂಜುನಾಥ,ಇತರ ಉಪನ್ಯಾಸಕರು ಹರ್ಷ ವ್ಯಕ್ತಪಡಿಸಿದ್ದಾರೆ.

ವರದಿ–ಸಾಗರ ಪಡಸಲೆ


ಕರುನಾಡ ಕಂದ
ಸಂಪುಟ 3 | ಸಂಚಿಕೆ 12
ದಿನಾಂಕ: 16-04-2024 ಪುಟಗಳು:16

# ಕೋಟೆ ನಾಡಿನ ಜನತೆ ಲೋಕ ಸಮರದಲ್ಲಿ ಹಿರಿಯರನ್ನು ಉಳಿಸಿಕೊಳ್ತಾರಾ/ಹೊಸ ಮುಖಕ್ಕೆ ಅವಕಾಶ ಕೊಡ್ತಾರಾ?...

**ಬಾಗಲಕೋಟೆ:** ಹಾಲಿ ಸಂಸದ ಪಿ.ಸಿ.ಗದ್ದಿಗೌಡರ ಅವರಿಗೆ ಮತ್ತೊಮ್ಮೆ ಟಿಕೇಟ್ ಘೋಷಣೆಯಾಗಿದೆ. ಬಾಗಲಕೋಟೆಯಿಂದ ಅಚ್ಚರಿಯ ಬೇರೆ ಹೊಸ ಅಭ್ಯರ್ಥಿ ಕಣಕ್ಕಿಳಿಯಬಹುದು ಎಂಬ ಲೆಕ್ಕಾಚಾರಗಳು ತೀವ್ರಗೊಂಡ ಬೆನ್ನಲ್ಲೇ ಬಿಜೆಪಿ ಹೈಕಮಾಂಡ್ ಯಾವ ಪ್ರಯೋಗಕ್ಕೂ ಮುಂದಾಗದೇ ಕೋಟೆ ನಾಡಿನಿಂದ ಹಾಲಿ ಸಂಸದ ಪಿ.ಸಿ.ಗದ್ದಿಗೌಡರ ಅವರನ್ನೇ ಕಣಕ್ಕಿಳಿಸಿದೆ.

ಕಳೆದ ನಾಲ್ಕು ಅವಧಿಯಲ್ಲಿಯೂ ಬಿಜೆಪಿ ಇಲ್ಲಿ ಗೆಲುವಿನ ನಗೆ ಬೀರಿದೆ.ಈಗ ಐದನೇಯ ಬಾರಿಗೆ ಪಿ.ಸಿ. ಗದ್ದಿಗೌಡರ ಲೋಕಸಭಾ ಅಖಾಡಕ್ಕೆ ಇಳಿದಿದ್ದಾರೆ. ಸರಳತೆ,ಸಾತ್ವಿಕತೆಯಿಂದ ಕೂಡಿದ ರಾಜಕಾರಣಿ ಎಂದೇ ಹೆಸರಾಗಿರುವ ಗದ್ದಿಗೌಡರ ಅವರ ಹೆಸರು ಪರ್ವತಗೌಡ ಆದರೆ ಪಿ.ಸಿ.ಗದ್ದಿಗೌಡರ ಎಂದೇ ಪ್ರಸಿದ್ಧಿ.

ಸಂಸದ ಪಿ ಸಿ ಗದ್ದಿಗೌಡರ 20 ವರ್ಷದ ಅವಧಿಯಲ್ಲಿ ಕ್ಷೇತ್ರದ ಅಭಿವೃದ್ಧಿ ಕಡಿಮೆ ಅಂತಲೇ ಹೇಳಬಹುದು ಹತ್ತು ವರ್ಷದ ಹಿಂದೆ ರೈಲ್ವೆ ಬಾಗಲಕೋಟೆ ಟು ಕುಡಚಿ ರೈಲ್ವೆ ಮಾರ್ಗ ಈಗ ಲೋಕಾಪುರದವರಿಗೆ ಮಾತ್ರ ಕೆಲಸ ಭರದಿಂದ ಸಾಗುತ್ತಿದೆ ಆದರೆ ಮುಧೋಳ್ ಜಮಖಂಡಿ ರಬಕವಿ ಬನಹಟ್ಟಿ ತೇರದಾಳ್ ಈ ಭಾಗದ ಜನರಿಗೆ ಸಂಸದರ ನಿರ್ಲಕ್ಷತನದಿಂದ ಜನರಿಗೆ ಭಾರೀ ನಿರಾಶಾದಾಯಕವಾಗಿದೆ ಅಂತ ಹೇಳಬಹುದು. ಬಾಗಲಕೋಟೆ ಮತಕ್ಷೇತ್ರದ ಸಂಸದ ಪಿ ಸಿ ಗದ್ದಿಗೌಡರು ಕೇವಲ ಆಯಾ ಊರುಗಳ ಜಾತ್ರೆ ಸಮಾರಂಭಗಳಲ್ಲಿ ಆಗಮಿಸುತ್ತಿದ್ದು ಬಿಟ್ರೆ ಯಾವುದೇ ಕ್ಷೇತ್ರದ ಅಭಿವೃದ್ಧಿಗಾಗಿ ಕ್ಷೇತ್ರದಲ್ಲಿ ಪ್ರವಾಸ ಮಾಡಿರುವುದು ಅಪರೂಪ ಇದೇ ಕಾರಣದಿಂದ 5ನೇ ಬಾರಿಗೆ ಅವಕಾಶ ಕೇಳುತ್ತಿರುವ ಹಾಲಿ ಸಂಸದರಿಗೆ ಈ ಬಾರಿ ಗೆಲವು ಅಸಾಧ್ಯ ಅಂತ ಹೇಳಬಹುದು.





ಇನ್ನೊಂದು ಕಡೆ ಕಾಂಗ್ರೆಸ್ ಪಕ್ಷವು ಹೊಸ ಮುಖಕ್ಕೆ ಗಾಳ ಹಾಕಿದ್ದಾರೆ ಮೂಲತಂ ವಿಜಯಪುರ ಜಿಲ್ಲೆಯ ಇವರು ಸಂಯುಕ್ತಾ ಪಾಟೀಲ್ ಅಧಿಕೃತ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡಿದ್ದಾರೆ ಕಳೆದ ಬಾರಿ ಕ್ಷೇತ್ರದಲ್ಲಿ ವೀಣಾ ಕಾಶಪ್ಪ ನವರಿಗೆ ಕಾಂಗ್ರೆಸ್ ಹೈಕಮಾಂಡ್ ಟಿಕೆಟ್ ಬಿ ಫಾರಂ ಕೊಟ್ಟರೂ ಕೂಡ ಅವರು 2 ಲಕ್ಷ ಮತದಿಂದ ಪರಾಭವಗೊಂಡಿದ್ದರು ಈ ಬಾರಿಯೂ ಕೂಡಾ ವೀಣಾ ಕಾಶಪ್ಪನವರಿಗೆ ಬಿ ಫಾರ್ಮ್ ಕಟ್ಟಿಟ್ಟ ಬುತ್ತಿ ಎಂದು ಇಡೀ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರಲ್ಲಿ ವಿಶ್ವಾಸ ಇದೆ ಅನ್ನುವಷ್ಟರಲ್ಲಿ ಹೊಸ ಮುಖಕ್ಕೆ ಗಾಳ ಹಾಕಿಬಿಟ್ಟರು ಇನ್ನೇನು ವೀಣಾ ಕಾಶಪ್ಪನವರು ಕ್ಷೇತ್ರದಲ್ಲಿ ಬಂಡಾಯ ಸ್ಪರ್ಧೆ ಮಾಡ್ತಾರೆ ಅನ್ನುವಷ್ಟರಲ್ಲಿ ಕಾಂಗ್ರೆಸ್ ಹೈಕಮಾಂಡ್ ಮುಖ್ಯಮಂತ್ರಿ ಸಿದ್ದರಾಮಯ್ಯ ಮಧ್ಯ ಪ್ರವೇಶಿಸಿ ಬಂಡಾಯ ಶಮನಗೊಳಿಸುವಲ್ಲಿ ಯಶಸ್ವಿಯಾದರು. ಕೋಟೆ ನಾಡಿನ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಿಗೆ ವೀಣಾ ಕಾಶಪ್ಪನವರ್ ಅವರಿಗೆ ಕಾಂಗ್ರೆಸ್ ಪಕ್ಷದ ಟಿಕೆಟ್ ದೊರೆಯದ ಕಾರಣದಿಂದ ಸ್ವಲ್ಪ ಮಟ್ಟಿಗೆ ನಿರಾಶದಾಯಕವಾಗಿದೆ ಅಂತ ಹೇಳಬಹುದು . ಹೊಸಮುಖ ಯುವತಿ ಸಂಯುಕ್ತ ಪಾಟೀಲ್ ಅವರು ಕ್ಷೇತ್ರಾದ್ಯಂತ ಭರ್ಜರಿ ಪ್ರಚಾರದಲ್ಲಿ ತೊಡಗಿಕೊಂಡಿದ್ದಾರೆ . ಬಾಗಲಕೋಟೆ ನಾಡಿನ ಜನತೆ ಹಿರಿಯ ಸಂಸದ ಪಿ ಸಿ ಗದ್ದಿಗೌಡರಿಗೆ ಸಾತ್ ನೀಡ್ತಾರ ಅಥವಾ ಹೊಸಮುಖ ಸಂಯುಕ್ತ ಪಾಟೀಲ್ ಅವರಿಗೆ ಮಣೆ ಹಾಕ್ತಾರಾ ಅಂತ ಕಾದು ನೋಡಬೇಕಾಗಿದೆ...

ಲೇಖನ-ಮೆಹಬೂಬ್ ಎಂ ಬಾರಿಗಡ್ಡಿ

# ಆದೇಶ ಉಲ್ಲಂಘನೆ: ಮಾಂಸದ ಹೋಟೇಲ್‌ಗೆ ಬೀಗ ಜಡಿದ ನ್ಯೂಟೌನ್ ಪೋಲಿಸರು






ಭದ್ರಾವತಿ ನಗರಸಭೆ ವ್ಯಾಪ್ತಿಯ ಬಿ.ಹೆಚ್.ರಸ್ತೆ ಬಸ್ ನಿಲ್ದಾಣ ಸಮೀಪ ನಗರಸಭೆ ಮಾಲಿಕತ್ವದ ಮಳಿಗೆಯಲ್ಲಿ ನಡೆಯುತ್ತಿರುವ ಗೋಮಾಂಸ ಮಾರಾಟದ ಹೋಟೆಲ್ ವೊಂದಕ್ಕೆ ಭದ್ರಾವತಿಯ ನ್ಯೂಟೌನ್ ಪೊಲೀಸರು ಬೀಗ ಜಡಿದಿದ್ದಾರೆ.

ಹಿಂದೂ ಜಾಗರಣ ವೇದಿಕೆ ಜಿಲ್ಲಾ ಸಂಯೋಜ-ಕರಾದ ದೇವರಾಜ ಅರಳಿಹಳ್ಳಿ ರವರ ದೂರಿನ ಆಧಾರದ ಮೇರೆಗೆ ನ್ಯೂ ಟೌನ್ ಪೊಲೀಸರು ಹೋಟೆಲ್ ಮೇಲೆ ದಾಳಿ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸಂವಿಧಾನ ಶಿಲ್ಪಿ ಡಾ.ಬಿ.ಆರ್ ಅಂಬೇಡ್ಕರ್ ಅವರ ಜನ್ಮ ದಿನಾಚರಣೆಯ ಪ್ರಯುಕ್ತ ಸರ್ಕಾರದ ಆದೇಶದಂತೆ ಇಂದು ಮಾಂಸ ಮಾರಾಟ ಕೇಂದ್ರಗಳನ್ನ ಬಂದ್ ಮಾಡಲು ಸೂಚಿಸಲಾಗಿತ್ತು.ಅದರಂತೆ ಎಲ್ಲಾ ಮಾಂಸದಂಗಡಿಗಳು ಬಂದ್ ಮಾಡಿದ್ದರೂ ಸಹ ಗೋಮಾಂಸ ಮಾರಾಟದ ಹೋಟೆಲ್ ಬಾಗಿಲು ತೆರದು ಬಿಂದಾಸ್ ಆಗಿ ಹೋಟೆಲ್ ನಡೆಸಲಾಗುತ್ತಿದೆ ಎಂದು ಹಿಂದೂ ಜಾಗರಣ ವೇದಿಕೆಯ ಜಿಲ್ಲಾ ಸಂಚಾಲಕ ಅರಳಿಹಳ್ಳಿ ದೇವರಾಜ್ ಆಕ್ಷೇಪಿಸಿದ್ದಾರೆ. ಗೋ ಹತ್ಯೆ ಕಾನೂನು ಉಲ್ಲಂಘನೆ ಮಾಡುತ್ತಿರುವುದು ಕಾನೂನಿನ ಭಯವಿಲ್ಲದಂತಾಗಿದೆ ಎಂಬುದು ಎದ್ದು ಕಾಣುತ್ತಿದೆ. ಇದೇ ರೀತಿ ಮುಂದುವರೆದರೆ ಮುಂದಿನ ದಿನಗಳಲ್ಲಿ ಜಾಗೃತ ಹಿಂದೂ ಸಮಾಜ ದೊಡ್ಡ ಮಟ್ಟದಲ್ಲಿ ಗೋ ಹತ್ಯೆ ವಿರುದ್ಧ ಜನಜಾಗೃತಿ ಜನಂದೋಲನ ಚಳುವಳಿಯನ್ನು ನಡೆಸಬೇಕಾಗುತ್ತದೆ.

ಗೋ ಹಂತಕರ ವಿರುದ್ಧ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳಬೇಕು.ಇಲ್ಲವಾದಲ್ಲಿ ಭದ್ರಾವತಿಯಲ್ಲಿ ನಡೆಯುತ್ತಿರುವ ಅಕ್ರಮ ಗೋಹತ್ಯೆ,ಗೋ ಮಾಂಸದ ಹೋಟೆಲ್ಗಳ ಹೊಣೆಯನ್ನು ಭದ್ರಾವತಿ ನಗರಸಭೆ ಹೊರಬೇಕಾಗುತ್ತದೆ ಎಂದು ಎಚ್ಚರಿಸಿದರು. ಈ ಸಂದರ್ಭದಲ್ಲಿ ನಗರಸಭೆ ಆರೋಗ್ಯಾಧಿಕಾರಿಗಳು, ನ್ಯೂಟೌನ್ ಠಾಣೆ ಪಿಎಸ್ಐ ಮತ್ತು ಸಿಬ್ಬಂದಿ ಹಾಜರಿದ್ದರು.

# ಅಂಬೇಡ್ಕರ್ ಜಯಂತಿ

**ಭದ್ರಾವತಿ:** ನಗರಸಭೆ ವತಿಯಿಂದ ಡಾ.ಬಿ.ಆರ್ ಅಂಬೇಡ್ಕರ್ ಅವರ 133 ನೇ ಜಯಂತಿ ಅಂಗವಾಗಿ ಅಂಡರ್ ಬ್ರಿಡ್ಜ್ ಅಂಬೇಡ್ಕರ್ ವೃತ್ತದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಪೌರಾಯುಕ್ತ ಪ್ರಕಾಶ್ ಎಂ ಚನ್ನಪ್ಪನವರ್ ಮಾಲಾರ್ಪಣೆ ಮಾಡಿದರು.

ಈ ಸಂದರ್ಭದಲ್ಲಿ ಪರಿಸರ ಅಭಿಯಂತರ ಪ್ರಭಾಕರ್, ಪೌರ ಕಾರ್ಮಿಕರ ಸಂಘದ ಚೇತನ್, ಹಿರಿಯ ಆರೋಗ್ಯ ಅಧಿಕಾರಿ ಸತೀಶ್, ಅಕೌಂಟೆಂಟ್ ಪವನ್ ಕುಮಾರ್,ವಾಲಿ ಮಹೇಶ್ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.



# ಛಲವಾದಿ ಮಹಾಸಭಾದಿಂದ ಅಂಬೇಡ್ಕರ್ ಜಯಂತಿ



ಭದ್ರಾವತಿ:ತಾಲ್ಲೂಕು ಛಲವಾದಿ ಮಹಾಸಭಾ ವತಿಯಿಂದ ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಜಯಂತಿಯನ್ನು ಆಚ-ರಿಸಲಾಯಿತು.ಅಂಡರ್ ಬ್ರಿಡ್ಜ್ ಬಳಿ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಛಲವಾದಿ ಮಹಾಸಭಾ ಅಧ್ಯಕ್ಷ ಚನ್ನಪ್ಪ ನೇತೃತ್ವದಲ್ಲಿ ಮಾಜಿ ಅಧ್ಯಕ್ಷ ಭೈರಪ್ಪಗೌಡ,ನರಸಿಂಹಯ್ಯ ಸೇರಿದಂತೆ ಸಮಾಜದ ಪ್ರಮುಖರು ಉಪಸ್ಥಿತರಿದ್ದರು.

ಕರುನಾಡ ಕಂದ
ಸಂಪುಟ 3 । ಸಂಚಿಕೆ 12
ದಿನಾಂಕ: 16-04-2024 ಪುಟಗಳು:16

# ಪ್ರಪ್ರಥಮ ವಚನಕಾರ ಶಿವಶರಣ ದೇವರ ದಾಸಿಮಯ್ಯ



ಬಸವಾದಿ ಪ್ರಥಮರ 12ನೇ ಶತಮಾನದ ವಚನ ಸಾಹಿತ್ಯ,ವಿಶ್ವ ಪ್ರಜಾ ಪ್ರಭುತ್ವಕ್ಕೆ ಅಡಿಗಲ್ಲು ಹಾಕಿದ ಐತಿಹಾಸಿಕ,ಕ್ರಾಂತಿಕಾರಿ,ಜನಪರ ಸಾಹಿತ್ಯವಾಗಿದೆ. ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿದ ಶ್ರೇಷ್ಠ ಸಾಹಿತ್ಯವೂ ಹೌದು.ವಚನ ವಾಙ್ಮಯದ ಜನಪ್ರಿಯತೆಗೆ ಕಾರಣಗಳು ಹಲವಾರು ಇವೆ. ಮುಖ್ಯವಾಗಿ ಸಮಾನತೆ,ಸಹೋದರತ್ವ,ಸಹಬಾಳ್ವೆ, ಸೌಹಾರ್ದತೆ,ಮಾನವೀಯತೆ,ದಯೆ,ಕರುಣೆ,ಪ್ರೀತಿ, ಸ್ನೇಹ ಸೇರಿದಂತೆ ಲಕ್ಷಾಂತರ ವಿಚಾರಗಳ ಸಂಗಮವೇ ಈ ಸಾಹಿತ್ಯದಲ್ಲಿ ದೊರೆಯುತ್ತದೆ.ಇಲ್ಲಿ ಜಗತ್ತಿನ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಕಂಡುಕೊಳ್ಳಬಹುದು.

ವಚನಗಳು ಕ್ಲಿಷ್ಟವಾಗಿರದೆ ಸರಳವಾಗಿವೆ ಇಲ್ಲಿಯ ಭಾಷೆ,ಶೈಲಿ,ಲಲಿತವಾಗಿ ಸುಲಭವಾಗಿ ಉಚ್ಚರಿಸಲು ಸಾಧ್ಯವಿದೆ. ಸೂಕ್ಷ್ಮವಾಗಿ ವಿಚಾರಿಸಿದರೆ ವಚನಗಳು ಗದ್ಯ- ಪದ್ಯದ ಒಂದು ಅಪರೂಪದಲ್ಲಿ ಅಪರೂಪದ ಸಾಹಿತ್ಯವೆಂದೇ ಹೇಳಬಹುದು.

ಅಂದಿನ ಪ್ರತಿಯೊಬ್ಬ ಶರಣರು ಅವರ ಕಾಯಕದ ಮಹತ್ವವನ್ನು ಸಾರಿ,ವಚನಗಳು ರಚಿಸಿ,ಮಾನವೀಯತೆಯ ಮೌಲ್ಯಾಧಾರಿತ ಸಿದ್ದಾಂತವನ್ನು ಸರ್ವರಿಗೂ ಉಣಬಡಿಸಿದ್ದಾರೆ. ಇವರಲ್ಲಿ ಅಗ್ರಗಣ್ಯ ಶರಣರೆಂದರೆ ಜೇಡರ ದಾಸಿಮಯ್ಯ ಶಿವಶರಣರು ಸಹ ಒಬ್ಬರು ಇವರ ಕುರಿತು ಬರೆಯುವ ಸಣ್ಣ ಪ್ರಯತ್ನ ಇಲ್ಲಿ ಮಾಡಲಾಗಿದೆ.

ಜೇಡರ ದಾಸಿಮಯ್ಯ ಶರಣರು,ಹನ್ನೆರಡನೇಯ ಶತಮಾನದ ಆರಂಭದಲ್ಲಿ ಬಂದಂತಹ ಪ್ರಮುಖ ಶರಣರು.ಆದರೆ ಇಲ್ಲಿ ದೇವರ ದಾಸಿಮಯ್ಯ,ಜೇಡರ ದಾಸಿಮಯ್ಯ ಎಂದು ಎರಡು ರೀತಿಯಲ್ಲಿ ಆದ್ಯಪ್ರವರ್ತಕನೆಂದು ಗುರುತಿಸಲಾಗುತ್ತದೆಯಾದರೂ,ಈ ಇಬ್ಬರೂ ಬೇರೆಯೇ ಎಂಬ ಅಭಿಪ್ರಾಯ,ಚರ್ಚೆಯನ್ನು ಸಾಕಷ್ಟು ಚಿಂತಕರು ವ್ಯಕ್ತಪಡಿಸಿರುವರಾದರೂ,ಈ ಎರಡೂ ಹೆಸರುಗಳ ಕುರಿತು ಸಂಶೋಧನೆ ಮಾಡುವುದು ಅಗತ್ಯವಾಗಿದೆ.ಕಾಯಕ ಯೋಗಿಯಾಗಿ ಕಾಯಕ ಮಾಡಿ,ವಚನಗಳನ್ನು ರಚಿಸಿದವರು ದಾಸಿಮಯ್ಯ ಶರಣರು ಎಂಬುದು ಅಧ್ಯಯನದ ಮೂಲಕ ತಿಳಿದು ಬರುತ್ತದೆ.

ದುಗ್ಗಲೆಯೆಂಬ ಶರಣೆಯೊಂದಿಗೆ ಸಂಸಾರಿಯೂ ಆಗಿದ್ದ ಜೇಡರ ದಾಸಿಮಯ್ಯರನ್ನೇ ಮೊದಲ ವಚನಕಾರರೆಂದು ಗುರುತಿಸಲಾಗುತ್ತದೆ.ಸುರಪುರ ತಾಲೂಕಿನ ಮುದನೂರು ಗ್ರಾಮದವರಾದ ಶರಣ ದಾಸಿಮಯ್ಯ ತನ್ನ ಸತಿ ದುಗ್ಗಲೆಯೊಂದಿಗೆ ಕಾಯಕವನ್ನೇ ಕೈಲಾಸವಾಗಿಸಿಕೊಂಡ ಮಹಾ ಸಾಧಕ ಶರಣರು.

ದಾಸಿಮಯ್ಯನವರು ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಮುದನೂರು ಬಿ ಗ್ರಾಮದಲ್ಲಿ ರಾಮಯ್ಯ ಮತ್ತು ಶಂಕರಿ ದಂಪತಿಯ ಪುತ್ರನಾಗಿ ಜನಿಸಿದರು.ಉತ್ತಮ ಸಂಸ್ಕಾರ ಪಡೆದ ಜ್ಞಾನವಂತರಾದವರು.ದಾಸಿಮಯ್ಯನವರು ಯಾವಾಗಲೂ,ಯಾವುದನ್ನೂ ಪ್ರಶ್ನಿಸದೆ ಸ್ವೀಕರಿಸುವ ಮನೋಭಾವದವರಾಗಿರಲಿಲ್ಲ.ಪ್ರಖರ ವೈಚಾರಿಕ,ವೈಜ್ಞಾನಿಕ ನೆಲೆಗಟ್ಟಿನ ವ್ಯಕ್ತಿತ್ವವನ್ನು ಹೊಂದಿದವರಾಗಿದ್ದರು ಎಂಬುದು ತಿಳಿದುಬರುತ್ತದೆ. ಈ ದಿಸೆಯಲ್ಲಿಯೂ ಹೆಚ್ಚಿನ ಸಂಶೋಧನೆ ಮಾಡುವುದು ಸಹ ಅಗತ್ಯವಾಗಿದೆ.

ಹಾಗೆಯೇ ವರ್ಗ,ವರ್ಣ,ಲಿಂಗ ಅಸಮಾನತೆ ಹೋಗಲಾಡಿಸಿ,ಸಮಾನತೆ ತಂದವರು.ಬಸವಣ್ಣ ಸೇರಿದಂತೆ ಇತರೆ ವಚನಕಾರರಿಗೆ ದಾಸಿಮಯ್ಯ ಶರಣರೇ ಸ್ಫೂರ್ತಿ ಮತ್ತು ಪ್ರೇರಕ ಶಕ್ತಿ ಆಗಿದ್ದರು. ಇವರ ವಚನಗಳು ಸಮಾಜಕ್ಕೆ ಅತ್ಯಂತ ಪ್ರೇರಣದಾಯಕವಾಗಿವೆ.

ಅಂದಹಾಗೆ ಜೇಡರ್ ದಾಸಿಮಯ್ಯ ಶರಣರ ವಚನಗಳಲ್ಲಿ ಹೆಚ್ಚಾಗಿ ಆದ್ಯಾತ್ಮ ಸಿರಿವಂತಿಕೆಯಿಂದ ಮೆರೆದಿದ್ದು ನೋಡಬಹುದು.ದಾಸಿಮಯ್ಯನವರು ಅಸಮಾನ್ಯ ವ್ಯಕ್ತಿತ್ವವನ್ನು ಬೆಳೆಸಿಕೊಂಡವರು. ಷಟ್‌ಸ್ಥಲಾಚರಣೆ ಹಾಗೂ ಶಿವಯೋಗ ಸಾಧನೆಗೆ ಅನುಸಂಧಾನ ಮೊದಲ ಮೆಟ್ಟಿಲು ಹತ್ತಿದವರು. ವ್ಯಕ್ತಿಗೆ ಸಮ್ಯಕ್ ಜ್ಞಾನೋದಯ ಉಂಟಾದ ಕೂಡಲೇ ಅಂತರಂಗ ಬಹಿರಂಗಗಳ ಸೂಕ್ಷ್ಮ ನಿರೀಕ್ಷಣೆಯ ವಿಮರ್ಶೆ ನಡೆಯಬೇಕೆಂದವರು. ಅವರು ತಮ್ಮ ಅಂತರಂಗವನ್ನು ಪರಿಶೋಧಿಸಿ,ಇರುವ ಕಲ್ಮಶವನ್ನು ದೂರೀಕರಿಸಿ ಅಂತರಂಗಶುದ್ಧಿಯನ್ನು ಪಡೆದವರು. ಇಂತಹ ಅನೇಕ ವೈಜ್ಞಾನಿಕ ಚಿಂತನೆಗಳು ದಾಸಿಮಯ್ಯನವರ ಜೀವನದಲ್ಲಿ ವಿಮರ್ಶೆ ಮತ್ತು ಶೋಧನೆಗಳು ನಡೆದುದು ಕಂಡುಬರುತ್ತದೆ. ಇದರಲ್ಲಿ ಇವರ ಒಂದು ವಚನ ಗಮನಿಸಬಹುದು.

**ಮೊಲೆ ಮೂಡಿ ಬಂದರೆ ಹೆಣ್ಣೆಂಬರು**
**ಗಡ್ಡ ಮೀಸೆ ಬಂದರೆ ಗಂಡೆಂಬರು**
**ನಡುವೆ ಸುಳಿಯುವಾತ್ಮನು**
**ಹೆಣ್ಣೂ ಅಲ್ಲ,ಗಂಡೂ ಅಲ್ಲ ರಾಮನಾಥ.**

ಎನ್ನುವ ವಚನ ಸೇರಿದಂತೆ ಅವರ ಇನ್ನಿತರ ವಚನಗಳಲ್ಲಿ ಯೋಗ್ಯ ಗುರುವಿನ ಲಕ್ಷಣ,ಭಕ್ತಾಭಿಮಾನ,ದಾಸ್ಯಭಾವ,ಸಮರ್ಪಣಾಭಾವ,ಲಿಂಗಾಯತ ಧರ್ಮ ನಿಷ್ಠೆ, ವೈಚಾರಿಕ ನೀತಿ ಮೊದಲಾದ ವಿಷಯಗಳು ದಾಸಿಮಯ್ಯುನರ ವಚನಗಳಲ್ಲಿ ಕಾಣಬಹುದಾಗಿದೆ.

ಇನ್ನು ತನ್ನ ಅನುಭವಕ್ಕೆ ನಿಲುಕದ ಯಾವುದೇ ಸಂಗತಿಯನ್ನು ಅವರು ಹೇಳುವುದಕ್ಕೆ ಹೋಗಿಲ್ಲ. ಅನುಭವವು ಸಹೃದಯರಿಗೆ ತಲುಪುವಂತೆ ಮಾಡಿದ್ದಾರೆ.ಭಾಷೆಯಲ್ಲಿ ಸರಳತೆ ಕಂಡುಬಂದರೂ ಭಾವದಲ್ಲಿ ಅರ್ಥ ಶ್ರೀಮಂತಿಕೆ ಎದ್ದುಕಾಣುತ್ತದೆ ಇವರ ವಚನಗಳಲ್ಲಿ ಸತ್ಯವನ್ನು ನೇರವಾಗಿ ಪ್ರತಿಪಾದಿಸಿದ್ದಾರೆ. ಅಂದರೆ ಯಾವುದೇ ಮುಲಾಜಿಲ್ಲದೆ ಇದ್ದಿದ್ದು ಇದ್ದ ಹಾಗೆ ಹೇಳಿದಾರೆ.ಕಟುವಾಗಿ ವಿಮರ್ಶಿಸಿ, ವಿಡಂಬನಾತ್ಮಕವಾಗಿ ಚಿತ್ರಿಸಿ,ಸಮಾಜಕ್ಕೆ ಎಚ್ಚರಿಸಿ, ಸಮಾಜವನ್ನು ಸರಿದಾರಿಗೆ ತರುವ ಕೆಲಸ ಪ್ರಾಮಾಣಿಕವಾಗಿ ಮಾಡಿದ್ದಾರೆ.

ಶರಣ ದಾಸಿಮಯ್ಯನವರು ತನ್ನ ಬುದ್ಧಿಯ ಮಿಂಚಿಗೆ, ಭಾವದ ಬೆಳಕಿಗೆ ಅನುಭಾವದ ಉಸಿರಿಗೆ ಆಕಾರವನ್ನು ನೀಡುವಾಗ ಆಡು ನುಡಿಯನ್ನು ಬಳಸಿ ಕೊಂಡುದುದರಿಂದ ಅವರ ಭಾಷೆಯಲ್ಲಿ ಕಸುವಿದೆ, ಕಾವಿದೆ, ಹೊಸತನವಿದೆ,ಜೀವಂತಿಕೆಯಿದೆ.ಸಾಹಿತ್ಯ, ಭಾವ,ಕಾವ್ಯ,ಭಾಷೆ,ಸೌಂದರ್ಯ ಎಲ್ಲಾ ದೃಷ್ಟಿಯಿಂದಲು ದಾಸಿಮಯ್ಯನ ವಚನಗಳು ತುಂಬ ಎತ್ತರಕ್ಕೆ ನಿಲ್ಲುತ್ತವೆ. ದಾಸಿಮಯ್ಯನ ವಚನಗಳಲ್ಲಿ ತತ್ವದ ಶುಷ್ಕವಾದ ನಿರೂಪಣೆಯಿಲ್ಲ. ಉದಾತ್ತವಾದ ಭಾವಗಳನ್ನು ಬಹು ಚಮತ್ಕಾರವಾಗಿ ಸುಲಭವಾದ ಮಾತುಗಳಲ್ಲಿ ಓದಿದೊಡನೆಯೇ ಮನಸ್ಸಿಗೆ ಹಿಡಿಯುವ ಹಾಗೆ ಒಂದೊಂದು ಅರ್ಥಗರ್ಭವಾದ ಉಪಮಾನದಿಂದ ಒಂದೊಂದು ದೊಡ್ಡ ಚಿತ್ರವೇ ಕಣ್ಣಮುಂದೆ ನಿಂತ ಹಾಗೆ ಕಾಣುತ್ತವೆ.ಜೊತೆಗೆ ನವಸಮಾಜದ ದೃಷ್ಟಿಯಿಂದ ದಾಸಿಮಯ್ಯನವರು ಪ್ರಾರಂಭಿಸಿದ ವೈಚಾರಿಕ ಧರ್ಮದ ಸಾಮಾಜಿಕ ಸುಧಾರಣೆಗಳು ಮುಂದುವರಿದು ಬಸವಣ್ಣನವರ ಮತ್ತು ಸಮಕಾಲೀನ ಶರಣರ ಕಾಲದಲ್ಲಿ ಸಮ ಸಮಾಜದ ನಿರ್ಮಾಣಕ್ಕೆ ಅಡಿಪಾಯವಾಗಿಯೇ ಲಿಂಗಾಯತ ಧರ್ಮ ಉಗಮಕ್ಕೆ ಕಾರಣವಾಗಿತ್ತು. ಉತ್ಕಟವಾದ ಲಿಂಗಾಯತ ಧರ್ಮ ನಿಷ್ಠೆ ಹೊಂದಿದ ಇವರು,ನಿಷ್ಠುರವಾದ ಸ್ಪಷ್ಟ ವಾಕ್ಯತೆ,ಮಾರ್ಮಿಕವಾದ ಸಂಕ್ಷಿಪ್ತ ಶೈಲಿ,ಔಚಿತ್ಯಪೂರ್ಣವಾದ ದೃಷ್ಟಾಂತಗಳ ಸೈದ್ಧಾಂತಿಕ,ಪ್ರಗತಿಪರ ಗುಣಗಳು ಇವರ ವಚನಗಳಲ್ಲಿ ಎದ್ದು ಕಾಣುತ್ತವೆ.ಅದಕ್ಕಾಗಿಯೇ ಸ್ವತಂತ್ರ ವಿಚಾರ ವ್ಯಕ್ತಿತ್ವದಿಂದ ಘನತೆಯನ್ನು ಪಡೆದಿರುವ ದಾಸಿಮಯ್ಯ ಶರಣರು ಇಂದಿನ ಸಮಾಜಕ್ಕೆ ಆದರ್ಶಪ್ರಾಯವಾಗಿ ನಿಲ್ಲುತ್ತಾರೆ.

ಗೌರವದ ನುಡಿ:ಶರಣ ದಾಸಿಮಯ್ಯನವರು ಹನ್ನೆರಡನೇ ಶತಮಾನದಲ್ಲಿ ಮೊಟ್ಟ ಮೊದಲು ಶರಣರ ಚಳವಳಿ ಕಟ್ಟಿ,ಮಾನವೀಯ ಮೌಲ್ಯ ಬಿತ್ತಿದ ಶ್ರೇಷ್ಠ ವಚನಕಾರರು. ಇವರ ಆದರ್ಶ ವ್ಯಕ್ತಿತ್ವ ಬಸವಣ್ಣ ಹಾಗೂ ಇತರ ಶರಣರ ಮೇಲೆ ಪ್ರಭಾವ ಬೀರಿವೆ. ಬಸವಣ್ಣನವರ ಸಮಗ್ರ ಜನಪರ ಕಾರ್ಯಗಳಿಗೆ ದಾಸಿಮಯ್ಯನವರೇ ಪ್ರೇರಕ ಶಕ್ತಿ ಎಂದರೆ ಖಂಡಿತವಾಗಿಯೂ ತಪ್ಪಾಗಲಾರದು. ನ್ಯಾಯಬದ್ಧವಾದ ವಿಚಾರ ಮತ್ತು ಸೌಜನ್ಯದಿಂದಲೇ ಇಡೀ ಶರಣರ ಸಂಕುಲಕ್ಕೆ ಇವರೇ ಮಾರ್ಗದರ್ಶಕರಾಗಿದ್ದರು.ರಾಮನಾಥ ಎಂಬ ಅಂಕಿತನಾಮವನ್ನು ಬಳಸಿಕೊಂಡು ಸುಮಾರು 176 ಕ್ಕೂ ಹೆಚ್ಚು ವಚನಗಳನ್ನು ರಚಿಸಿದ್ದಾರೆ.

ಆಶಯ ಮಾತು:ಲಿಂಗಾಯತ ಧರ್ಮದ ಸಿದ್ಧಾಂತವನ್ನು ಪ್ರತಿಪಾದಿಸಿ,ಭೋದಿಸಿರುವ ಬಸವಾದಿ ಶರಣರ ಹಾಗೂ ದಾಸಿಮಯ್ಯ ಶರಣರ ಆಶಯದಂತೆ ನಾವೆಲ್ಲರೂ ಅವರ ದಾರಿಯಲ್ಲಿ ಸಾಗುವಂತಹ ಕೆಲಸ ಮಾಡಲೇಬೇಕು.ಅಂದಾಗಲೇ ಮಾತ್ರ ಈ ಶರಣರ ವಾರಸುದಾರರಾಗಲು ಸಾಧ್ಯ ಮತ್ತು ಇವರ ಜಯಂತಿ ಆಚರಣೆ ಮಾಡಿದಕ್ಕೂ ಸ್ವಾರ್ಥಕವಾಗಲಿದೆ.

–ಸಂಗಮೇಶ ಎನ್ ಜವಾದಿ
**ಬರಹಗಾರರು,ಚಿಂತಕರು,ಹೋರಾಟಗಾರರು.**

# ಮರಾಠ ಸಮುದಾಯದ ಬೃಹತ್ ಜಾಗೃತಿ ಸಮಾವೇಶ



ಬೀದರ್ ಜಿಲ್ಲೆಯ ಭಾಲ್ಕಿ ತಾಲೂಕಿನಲ್ಲಿ ಮರಾಠ ಸಮುದಾಯದ ಬೃಹತ್ ಜಾಗೃತಿ ಸಮಾವೇಶ ನಡೆಯಿತು. ದೇಶದ ಸಮಸ್ತ ಮರಾಠಾ ಜನಾಂಗದ ಸಶಕ್ತ ಕ್ರಿಯಾಶೀಲ ನಾಯಕರೆಂದೆ ಪ್ರಸಿದ್ಧರಾಗಿರುವ ಪುರ ಮರಾಠ ಸಮಾಜರ ಕ್ರಾಂತಿ ಸೂರ್ಯ ಸನ್ಮಾನ್ಯ ಶ್ರೀ ಮನೋಜ್ ದಾದಾ ಜರಾಂಗೆ ಪಾಟೀಲ್ ಅವರ ಉಪಸ್ಥಿತಿಯಲ್ಲಿ ಮರಾಠ ಸಮುದಾಯದ ಬೃಹತ್ ಜಾಗೃತಿ ಸಮಾವೇಶ ನೆರವೇರಿತು. ಶ್ರೀ ಮಾನ್ಯ ಶ್ರೀ ಜಗದ್ಗುರುಗಳ ದಿವ್ಯ ಸಾನಿಧ್ಯದಲ್ಲಿ ಸಮಾಜದ ಗಣ್ಯರು ಹಾಗೂ ಸಮಾಜದ ಎಲ್ಲಾ ಜನರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ,ಶೈಕ್ಷಣಿಕವಾಗಿ ಸಾಮಾಜಿಕವಾಗಿ ರಾಜಕೀಯವಾಗಿ ಆರ್ಥಿಕವಾಗಿ ಹಿಂದುಳಿದಿರುವ ಮರಾಠ ಸಮುದಾಯದಲ್ಲಿ ಜಾಗೃತಿ ಮೂಡಿಸುವುದಲ್ಲದೆ ರಾಜ್ಯದ ಸಮಸ್ತ ಮರಾಠ ಜನಾಂಗವನ್ನು ಒಗ್ಗೂಡಿಸಿ ಅದನ್ನು ಮತ್ತೆ ವೈಭವದಡೆಗೆ ಕರೆದೊಯ್ಯುವ ನಿಟ್ಟಿನಲ್ಲಿ ರಾಜ್ಯದಲ್ಲಿ ಮರಾಠ ಜನಾಂಗವನ್ನು ಸಶಕ್ತಗೊಳಿಸುವ ದಿಶೆಯಲ್ಲಿ ಪಣತೊಟ್ಟಿರುವ ಸನ್ಮಾನ್ಯ ಶ್ರೀ ಮನೋಜ ದಾದಾ ಜಾರಂಗೆ ಪಾಟೀಲ್ ಅವರು ಸಮಾವೇಶವನ್ನು ಕುರಿತು ಮಾತನಾಡಿದರು. ಈ ಸಂದರ್ಭದಲ್ಲಿ ಮರಾಠ ಸಮಾಜರ ಕ್ರಾಂತಿ ಸೂರ್ಯ ಸನ್ಮಾನ್ಯ ಶ್ರೀ ಮನೋಜ್ ದಾದಾ ಜರಾಂಗೆ ಪಾಟೀಲ್ ಹಾಗೂ ಮರಾಠ ಸಮಾಜದ ಸಮಸ್ತ ಬಾಂಧವರು,ಹಿರಿಯರು,ಶಿಕ್ಷಣ ಚಿಂತಕರು,ತಾಯಂದಿರು,ಸಹೋದರ ಸಹೋದರಿಯರು ಭಾಗವಹಿಸಿದರು.

**ವರದಿ:ರೋಹನ್**

ಕರುನಾಡ ಕಂದ
ಸಂಪುಟ 3 । ಸಂಚಿಕೆ 12
ದಿನಾಂಕ: 16-04-2024 ಪುಟಗಳು:16

# ಗೋ ರಕ್ಷಕರ ಹೆಸರಿನಲ್ಲಿ ನೈತಿಕ ಪೊಲೀಸ್‌ಗಿರಿ ನಿಲ್ಲಿಸಲು ಆಗ್ರಹ:ವಿನಾಕಾರಣ ಕಿರುಕುಳ ನೀಡಬೇಡಿ, ತಪ್ಪು ಮಾಡಿರುವವರ ವಿರುದ್ಧ ಕ್ರಮ ಕೈಗೊಳ್ಳಿ




**ಭದ್ರಾವತಿ:** ಕೆಲವರು ಗೋ ರಕ್ಷಕರ ಹೆಸರಿನಲ್ಲಿ ನೈತಿಕ ಪೊಲೀಸ್‌ಗಿರಿ ನಡೆಸುತ್ತಿದ್ದು,ಇದರಿಂದಾಗಿ ರೈತರು ಸಾಕಷ್ಟು ಕಿರುಕುಳ ಅನುಭವಿಸುವಂತಾಗಿದೆ ಎಂದು ಜಾನುವಾರು ವ್ಯಾಪಾರಸ್ಥರ ಸಂಘ ಆರೋಪಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಗಜೇಂದ್ರ,ಪ್ರಸ್ತುತ ಜಾನುವಾರಗಳ ಸಾಕಾಣಿಕೆ ಕಷ್ಟಕರವಾಗಿದೆ.ಇಂತಹ ಸಂದರ್ಭದಲ್ಲಿ ವಿನಾಕಾರಣ ಗೋ ರಕ್ಷಕರ ಹೆಸರಿನಲ್ಲಿ ನೈತಿಕ ಪೊಲೀಸ್‌ಗಿರಿ ನಡೆಸಲಾಗುತ್ತಿದೆ. ತಕ್ಷಣ ಜಿಲ್ಲಾ ರಕ್ಷಣಾಧಿಕಾರಿಗಳು ಹಾಗೂ ಜಿಲ್ಲಾಡಳಿತ ಎಚ್ಚೆತ್ತುಕೊಂಡು ಇದರ ವಿರುದ್ಧ ಕ್ರಮ ಕೈಗೊಳ್ಳಬೇಕು.ನೈತಿಕ ಪೊಲೀಸ್‌ಗಿರಿ ನಡೆಸುತ್ತಿರುವವರನ್ನು ಬಂಧಿಸಿ ಗೂಂಡಾ ಕಾಯ್ದೆಯಡಿ ಗಡಿಪಾರು ಮಾಡಬೇಕೆಂದು ಆಗ್ರಹಿಸಿದರು.

ಕಾನೂನಿನ ಪ್ರಕಾರ ತಪ್ಪು ಮಾಡಿರುವವರ ವಿರುದ್ಧ ಕ್ರಮ ಕೈಗೊಳ್ಳಲಿ ಇದಕ್ಕೆ ಸಂಘದ ವಿರೋಧವಿಲ್ಲ. ಯಾವುದನ್ನೂ ಸಹ ಪರಿಶೀಲನೆ ಮಾಡದೆ ವಿನಾಕಾರಣ ರೈತರಿಗೆ ಕಿರುಕುಳ ನೀಡಬಾರದು. ಒಂದು ವೇಳೆ ಮುಂದಿನ ದಿನಗಳಲ್ಲಿ ಈ ರೀತಿ ಪ್ರಕರಣಗಳು ಮರುಕಳುಹಿಸಿದ್ದಲ್ಲಿ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ರೈತರ ಹಿತರಕ್ಷಣೆಗಾಗಿ ಸಂಘ ಅಸ್ತಿತ್ವಕ್ಕೆ ಬಂದಿದ್ದು, ಸುಮಾರು ಒಂದೂವರೆ ವರ್ಷದ ಹಿಂದೆ ನೋಂದಣಿಯಾಗಿದೆ. ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ ಯಾವುದೇ ರಾಜಕೀಯ ದುರುದ್ದೇಶ ಹೊಂದಿಲ್ಲ ಸಂಘದ ಬೆಳವಣಿಗೆಗೆ ಪೂರಕವಾಗುವಂತೆ ಯುವ ಮುಖಂಡ ಬಿ.ಎಸ್ ಬಸವೇಶ್ ಅವರನ್ನು ಗೌರವಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಸಂಘದ ಗೌರವಾಧ್ಯಕ್ಷ ಬಿ.ಎಸ್. ಬಸವೇಶ್,ಕಾರ್ಯದರ್ಶಿ ಲೋಕೇಶ್,ನಿರ್ದೇಶಕರಾದ ಧನಂಜಯ,ಶ್ರೀನಿವಾಸ್,ಚಂದ್ರು, ಕಡದಕಟ್ಟೆ ವೆಂಕಟೇಶ್,ರೇಣುಕುಮಾರ್, ಗಿರೀಶ್ ಸೇ-ರಿದಂತೆ ರೈತ ಮುಖಂಡರು ಉಪಸ್ಥಿತರಿದ್ದರು.

## ಏಪ್ರಿಲ್ 24 ರಂದು ಶ್ರೀ ನಂಜುಂಡೇಶ್ವರ ಜಾತ್ರಾ ಮಹೋತ್ಸವ

**ಭದ್ರಾವತಿ:** ತಾಲ್ಲೂಕಿನ ನಾಗತಿ ಬೆಳಗಲು ಗ್ರಾಮದ ಶ್ರೀ ನಂಜುಂಡೇಶ್ವರ ಸ್ವಾಮಿ ಜಾತ್ರಾ ಮಹೋತ್ಸವವು ಏ.24 ರಂದು ವಿಜೃಂಭಣೆಯಿಂದ ನಡೆಯಲಿದೆ.

ಭದ್ರಾವತಿ ತಾಲ್ಲೂಕಿನ ನಾಗತಿ ಬೆಳಗಲು ಗ್ರಾಮದ ಶ್ರೀ ನಂಜುಂಡೇಶ್ವರ ಸ್ವಾಮಿ ದೇವಾಲಯದಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಸಹ ಸ್ವಸ್ತಿ ಶ್ರೀ ಶಾಲಿವಾಹನ ಶಕೆ 1946 ನೇ ಶ್ರೀ ಕ್ರೋಧಿನಾಮ ಸಂವತ್ಸರದ ಬುಧವಾರ ಏಪ್ರಿಲ್ 24ರಂದು ಬೆಳಗ್ಗೆ 10 ಗಂಟೆಗೆ ಕೆಂಡಾರ್ಚನೆ ಹಾಗೂ ಸಂಜೆ ಶ್ರೀ ನಂಜುಂಡೇಶ್ವರ ಸ್ವಾಮಿಯ ರಥೋತ್ಸವವು ನೆರವೇರಲಿದೆ. ಭಕ್ತ ಮಹಾಶಯರು ರಥೋತ್ಸವ ಸೇರಿದಂತೆ ಎಲ್ಲಾ ಪೂಜಾ ಕಾರ್ಯಗಳಲ್ಲಿ ಭಾಗವಹಿಸಿ ಶ್ರೀ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಹಾಗೂ ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 8105264357 ಮತ್ತು 9901318161 ಸಂಖ್ಯೆಗೆ ಸಂಪರ್ಕಿಸಿ ಪೂಜಾ ಕಾರ್ಯಗಳ ಬಗ್ಗೆ ಮಾಹಿತಿ ಪಡೆಯಬಹುದು ಎಂದು ದೇವಾಲಯದ ಸೇವಾ ಸಮಿತಿಯವರು ಹಾಗೂ ಗ್ರಾಮಸ್ಥರು ಕೋರಿದ್ದಾರೆ.

## ತಾಲ್ಲೂಕು ಆಡಳಿತದಿಂದ ಡಾ.ಬಿ.ಆರ್. ಅಂಬೇಡ್ಕರ್ ರವರ 133ನೇ ಜಯಂತಿ ಆಚರಣೆ



**ಭದ್ರಾವತಿ:** ತಾಲ್ಲೂಕು ಆಡಳಿತ, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ದಲಿತ ಸಂಘಟನೆಗಳು ಸೇರಿದಂತೆ ವಿವಿಧ ಸಂಘಟನೆಗಳ ಸಹಯೋಗದೊಂದಿಗೆ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್ ಅಂಬೇಡ್ಕರ್ ರವರ 133 ನೇ ಜಯಂತಿಯನ್ನು ನೀತಿ ಸಂಹಿತೆ ಹಿನ್ನೆಲೆಯಲ್ಲಿ ಸರಳವಾಗಿ ಆಚರಿಸಲಾಯಿತು.

ತಹಶೀಲ್ದಾರ್ ಕೆ ಆರ್ ನಾಗರಾಜ್ ಅಂಬೇಡ್ಕರ್ ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು. ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿ ಗಂಗಣ್ಣ,ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ ಎಂ.ಗೋಪಾಲಪ್ಪ,ನಗರಸಭೆ ಪೌರಾಯುಕ್ತ ಪ್ರಕಾಶ್ ಎಂ.ಚನ್ನಪ್ಪನವರ್,ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿದ್ದಬಸಪ್ಪ, ಪೊಲೀಸ್ ನಗರ ವೃತ್ತ ನಿರೀಕ್ಷಕ ಶ್ರೀಶೈಲ ಕುಮಾರ್, ವಿವಿಧ ಸಂಘಟನೆಗಳ ಮುಖಂಡರುಗಳಾದ ಈಶ್ವರಪ್ಪ, ಶಿವಬಸಪ್ಪ,ಬಿ.ಎನ್.ರಾಜು, ಎಂ.ಶಿವಕುಮಾರ್,ಟಿ.ಎಂ ಮಂಜುನಾಥ್, ಪುಟ್ಟರಾಜು ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು,ಹಲವು ಇಲಾಖೆಗಳ ಅಧಿಕಾರಿಗಳು, ತಹಶೀಲ್ದಾರ್ ಕಚೇರಿಯ ಸಿಬ್ಬಂದಿಗಳು ಪಾಲ್ಗೊಂಡಿದ್ದರು.ಇದಕ್ಕೂ ಮೊದಲು ತಹಶೀಲ್ದಾರ್ ಕೆ ಆರ್ ನಾಗರಾಜ್ ಅವರು ಅಂಡರ್ ಬ್ರಿಡ್ಜ್ ಬಳಿ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ತಾ.ಪಂ.ಕಾರ್ಯ ನಿರ್ವಹಣಾಧಿಕಾರಿ ಗಂಗಣ್ಣ, ಪೌರಾಯುಕ್ತ ಪ್ರಕಾಶ್ ಚನ್ನಪ್ಪನವರ್ ಪಾಲ್ಗೊಂಡಿದ್ದರು.

## ಸಂವಿಧಾನ ಶಿಲ್ಪಿ ಅಂಬೇಡ್ಕರ್ ಜಯಂತಿ ಆಚರಣೆ



ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲೂಕಿನ ಅಂಬೇಡ್ಕರ್ ಸರ್ಕಲ್ ನಲ್ಲಿ ದಿನಾಂಕ 14-04-2024 ರ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ರವರ ಜಯಂತಿಯ ಪ್ರಯುಕ್ತ ನಗರದ ಮಾಜಿ ಶಾಸಕರು ಎಂ ಎಸ್ ಸೋಮಲಿಂಗಪ್ಪ ಶುಭಾಶಯಗಳನ್ನು ಕೋರಿದರು.ಈ ಸಂದರ್ಭದಲ್ಲಿ ಎಂ ಎಸ್ ಸೋಮಲಿಂಗಪ್ಪ ಅವರು ಮಾತನಾಡುತ್ತಾ ಡಾ.ಬಿ.ಆರ್.ಅಂಬೇಡ್ಕರ್ ರವರು ಈ ದೇಶದ ಸಂವಿಧಾನ ರಚನೆಯನ್ನು ಮಾಡಿ ದೀನ ದಲಿತರ,ಶೋಷಿತರ ಧ್ವನಿಯಾಗಿ ಸಮಾಜದಲ್ಲಿಯ ಬೇದ-ಭಾವ ತೊಲಗಿಸಲು ಬಹಳ ಪ್ರಾಮಾಣಿಕ ಕೆಲಸ ಮಾಡಿದ ಮಹಾನ್ ಚೈತನ್ಯವಾಗಿದ್ದಾರೆ ಎಂದು ಹೇಳಿದರು.ಈ ಸಂದರ್ಭದಲ್ಲಿ ಧರಪ್ಪ ನಾಯಕ್, ತಾಲೂಕು ಬಿಜೆಪಿ ಅಧ್ಯಕ್ಷ ಕುಂತ್ನಲ್ ಸ್ವಾಮಿ,ಎಸ್ ಸಿ ಮೋರ್ಚಾ ಜಿಲ್ಲಾ ಅಧ್ಯಕ್ಷರಾದ ಮೇಕಲಿ ವೀರೇಶ್,ಡಿ ಎಸ್ ಎಸ್ ಜಿಲ್ಲಾ ಅಧ್ಯಕ್ಷರಾದ ಸಿ ಗಂಗಪ್ಪ,ನಗರ ಸಭೆ ಸದಸ್ಯರಾದ ಮಹದೇವ,ರಾಮಕೃಷ್ಣ,ವಿಕ್ರಂ ಜೈನ ಮತ್ತು ಇನ್ನೂ ಇತರರು ಉಪಸ್ಥಿತರಿದ್ದರು.

**ವರದಿಗಾರ:ಎಸ್.ಎ.ನಿಜಾಮ್**

## ದುರ್ವಾಸನೆ ಮುಕ್ತಿಗೆ ಗ್ರಾ.ಪಂ ಮುಂದಾಗಲಿ: ಸಾರ್ವಜನಿಕರ ಮನವಿ



ಬಳ್ಳಾರಿ ಜಿಲ್ಲೆ ಸಿರುಗುಪ್ಪ ತಾಲ್ಲೂಕು 16 ನೇ ವಾರ್ಡ್ ಆಶ್ರಯ ಮನೆಗಳ ದಾರಿಯಲ್ಲಿ ಶಾಲಾ ಕಾಲೇಜಿಗೆ ಶಾಲೆಗೆ ಹೋಗುವ ಮಕ್ಕಳು ಹಾಗೂ ಸಾರ್ವಜನಿಕರು ರಸ್ತೆಯಲ್ಲಿರುವ ತಿಪ್ಪೆಗುಂಡಿ,ಮಲ ಮೂತ್ರಗಳ ವಾಸನೆಯಿಂದ ತಿರುಗಾಡಲು ಆಗದಂಥ ಸ್ಥಿತಿ ನಿರ್ಮಾಣವಾಗಿದೆ.

ತಿಪ್ಪೆಗುಂಡಿಗಳಲ್ಲಿ ನೀರು ನಿಂತು ರೋಗರುಜಿನ ಬರುವ ಸಾಧ್ಯತೆಯಿದೆ.ಆದಷ್ಟು ಬೇಗ ದುರ್ವಾಸನೆ ಮುಕ್ತಿಗೆ ಗ್ರಾಪಂ ಮುಂದಾಗಲಿ ಎಂದು ಸಾರ್ವಜನಿಕರು ಮನವಿ ಮಾಡಿದ್ದಾರೆ.

**ವರದಿ-ಎಸ್.ಎ.ನಿಜಾಮ್**

ಕರುನಾಡ ಕಂದ
ಸಂಪುಟ 3 | ಸಂಚಿಕೆ 12
ದಿನಾಂಕ: 16-04-2024 ಪುಟಗಳು:16

# ಸಾರ್ವತ್ರಿಕ ಲೋಕಸಭಾ ಚುನಾವಣೆ

# ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಮಾತುಗಳು

## ಸಾರ್ವತ್ರಿಕ ಲೋಕಸಭಾ ಚುನಾವಣೆ, ಪ್ರಜೆಗಳ ಮತದಾನ ಹಬ್ಬ

ಆಗಸ್ಟ್ 15,1947 ರ ಮುಂಚೆ 600 ಸ್ಥಾನಗಳು,6000 ಜಾತಿ, ಉಪಜಾತಿಗಳು,7 ಧರ್ಮಗಳು,600 ಭಾಷೆಗಳು ಒಳಗೊಂಡಿರುವ ದೇಶ ನಮ್ಮ ಭಾರತ,ಇಷ್ಟು ಜಾತಿ, ಉಪಜಾತಿ,ಧರ್ಮ,ಭಾಷೆ,ಸಾಸ್ಕೃತಿ ಹೊಂದಿರುವ ನಮ್ಮ ದೇಶದಂತೆ ವಿಶ್ವದಲ್ಲಿ ಬೇರೊಂದು ದೇಶವಿಲ್ಲ. ಇದ್ದರೆ ಆದುವೇ ನಮ್ಮ ಭಾರತ,ಭಾರತವನ್ನು ಅಖಂಡವಾಗಿ ಹಿಡಿದಿಟ್ಟರುವುದು,ಸರಿದಾರಿಯಲ್ಲಿ ಮುನ್ನಡೆಸಲು ಪ್ರತಿದಿನ ಆಡಳಿತ ಪಾಠವನ್ನು ಹೇಳಿಕೊಟ್ಟಿರುವುದು,ನಮ್ಮ ದೇಶದ ಭಾರತ ರತ್ನ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ರವರ ಸಂವಿಧಾನ,ಭಾರತ ಒಂದು ಸ್ವಾತಂತ್ರ್ಯವಾದ ಸಾರ್ವಭೌಮ ರಾಷ್ಟ್ರ ಸಮಾಜವಾದಿ,ಜಾತ್ಯಾತೀತ, ಪ್ರಜಾಸತ್ತಾತ್ಮಕವಾದ ಗಣರಾಜ್ಯ ದೇಶವಾಗಿದೆ.ನಮ್ಮ ದೇಶದ ಎಲ್ಲಾ ಪ್ರಜೆಗಳಿಗೆ ಸಾಮಾಜಿಕ,ಆರ್ಥಿಕ ಹಾಗೂ ರಾಜಕೀಯ ನ್ಯಾಯವನ್ನು ದೊರಕಿಸಿ ಕೊಡುವುದು ಸಂವಿಧಾನದ ಗುರಿಯಾಗಿದೆ.ಈ ದೇಶದ ಜನರೇ ಅಧಿಕಾರದ ಮೂಲ ವಿಚಾರ ಅಭಿವ್ಯಕ್ತ,ವ್ಯಕ್ತಿ ಗೌರವ, ಸಹೋದರತೆಯನ್ನು,ಬೆಳೆಸುವುದು ರಾಷ್ಟ್ರದ ಏಕತೆ ಮತ್ತು ಸಮಗ್ರತೆಯನ್ನು ಕಾಪಾಡುವುದು ದೇಶದ ಎಲ್ಲಾ ಪ್ರಜೆಗಳ,ಜನಪ್ರತಿನಿಧಿಗಳ ಕರ್ತವ್ಯವಾಗಿದೆ. ಸಂವಿಧಾನದ 5 ರಿಂದ 11 ವರೆಗಿನ ಅನುಚ್ಛೇದಗಳು ದೇಶದ ಪ್ರಜೆಗಳಿಗೆ ನಾಗರಿಕತ್ವ,ಪ್ರಜಾಪ್ರಭುತ್ವದ ದೀಕ್ಷೆಯನ್ನು ನೀಡಿದೆ.ಸರ್ವರೂ ಸಮಾನರು ಸರ್ವರಿಗೂ ಸಮಾನ ಪ್ರಗತಿ,ಸರ್ವರಿಗೂ ಸಮಾನ ರಕ್ಷಣೆ ನೀಡಿದೆ ಧರ್ಮ ನಿರಪೇಕ್ಷ ಮತ್ತು ಜಾತ್ಯಾತೀತವೆಂದರೆ ಧರ್ಮವನ್ನು ರಾಜಕಾರಣ ದಿಂದ ಬೇರ್ಪಡಿಸುವುದು ಸರ್ಕಾರ ಯಾವುದೇ ಧರ್ಮದ ಜೊತೆಗೆ ಗುರು ತೋರಿಸಿಕೊಳ್ಳಬಾರದು,ಯಾವುದೇ ಧರ್ಮವನ್ನು ಘೋಷಿಸಬಾರದು,ಯಾವುದೇ ಧರ್ಮದ ಬಗ್ಗೆ ತಾರತಮ್ಯವನ್ನು ಮಾಡಬಾರದು, ಸರ್ಕಾರದ ನೀತಿಗಳು,ಯಾವುದೇ ಧರ್ಮ ಪ್ರೇರಿತ ವಾಗಬಾರದೆಂದು ನಮ್ಮ ಸಂವಿಧಾನ ಹೇಳಿಕೊಟ್ಟ ಪಾಠವಾಗಿದೆ.

ಕಲ್ಯಾಣ ರಾಷ್ಟವನ್ನು,ರಾಜ್ಯವನ್ನು ನಿರ್ಮಾಣ ಮಾಡಲು ದೇಶದ ಎಲ್ಲಾ ಪ್ರಜೆಗಳ ಜೀವನ ನಿರ್ವಹಣೆಗೆ ಸೌಕರ್ಯಗಳು ಲಭ್ಯವಿರುವಂತೆ ನೋಡಿಕೊಳ್ಳುವುದು,ಗಂಡು-ಹೆಣ್ಣು ಎನ್ನುವ ಭೇದ-ಭಾವ ಮಾಡಿದೆ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ನೀಡುವುದು,ಸಂಪತ್ತು ಕೆಲವೇ ಜನರ ಸ್ವತ್ತಾಗಿರದೆ,ಎಲ್ಲರಿಗೂ ಲಭ್ಯವಾಗುವಂತೆ ಅರ್ಥವ್ಯವಸ್ಥೆ ರೂಪಿಸುವುದು ಗ್ರಾಮ,ನಗರ,ಮಹಾನಗರ,ಸ್ಥಳೀಯ ಅಭಿವೃದ್ಧಿಯನ್ನು ಮಾಡುವುದು ಎಲ್ಲಾ ಪ್ರಜೆಗಳಿಗೆ ಒಂದೇ ರೀತಿ ನಿಯಮಗಳನ್ನು ರೂಪಿಸುವುದು ಹದಿನಾಲ್ಕು ವರ್ಷದ ಎಲ್ಲಾ ಮಕ್ಕಳಿಗೆ ಉಚಿತವಾಗಿ, ಕಡ್ಡಾಯವಾಗಿ ಗುಣ ಮಟ್ಟದ ಶಿಕ್ಷಣವನ್ನು ಕೊಡಿಸುವುದು,ಪರಿಶಿಷ್ಟ ಜಾತಿ,ಪರಿಶಿಷ್ಟ ಪಂಗಡ, ಸಾಮಾಜಿಕವಾಗಿ ದುರ್ಬಲ ವರ್ಗಗಳ ಸ್ಥಿತಿಗತಿಯನ್ನು ಸುಧಾರಿಸುವುದು,ಜನರ ಜೀವನ ಮಟ್ಟ ಜನರ ಆರೋಗ್ಯ,ಆಹಾರ,ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸುವುದು,ಕೃಷಿ ಹೈನುಗಾರಿಕೆ, ಯುವಕರಿಗೆ ಮಹಿಳೆಯರಿಗೆ ಸ್ವಯಂ ಉದ್ಯೋಗ ಕೊಡಿಸುವುದು,ರಾಷ್ಟ್ರೀಯ ಪ್ರಾಮುಖ್ಯತೆಯನ್ನು ಪಡೆದ ಸ್ಮಾರಕಗಳನ್ನು ರಕ್ಷಣೆ ಮಾಡುವುದು, ಅಂತರಾಷ್ಟ್ರೀಯ ಶಾಂತಿ ಮತ್ತು ದೇಶದ ಭದ್ರತೆಯನ್ನು ಕಾಪಾಡುವುದು ರಾಷ್ಟ್ರಗೀತೆ, ರಾಷ್ಟ್ರಧ್ವಜ, ಸಂವಿಧಾನದ ಆದರ್ಶಗಳನ್ನು ಗೌರವಿಸುವುದು.ಒಬ್ಬ ವ್ಯಕ್ತಿ ಒಂದು ಮೌಲ್ಯ ಒಂದು ಮತ ಒಂದು ಮೌಲ್ಯದ ಅಡಿಯಲ್ಲಿ ಶ್ರೀಮಂತ-ಬಡವ, ಗಂಡು-ಹೆಣ್ಣು,ಜಾತಿ ಧರ್ಮ ಎನ್ನದೆ ದೇಶದ ಎಲ್ಲಾ ಪ್ರಜೆಗಳಿಗೆ ಓಟಿನ ಹಕ್ಕು ನೀಡಲಾಗಿದೆ.1947ರ ಮುಂಚೆ ರಾಜರ ಮಕ್ಕಳು ಮಾತ್ರವೇ ರಾಜರಾಗಬೇಕಿತ್ತು ಬೇರೆಯವರಿಗೆ ರಾಜರಾಗಲು ಅವಕಾಶ ಇರಲಿಲ್ಲ ರಾಜ್ಯಕ್ಕಾಗಿ ಮತ್ತು ರಾಜರಾಗಲು ಯುದ್ಧಗಳಾಗಿ ಲಕ್ಷಾಂತರ ಜನರು ಪ್ರಾಣವನ್ನು ಕಳೆದುಕೊಳ್ಳುತ್ತಿದ್ದರು.ರಕ್ತದ ಹೊಳೆ ಹರಿಯುತ್ತಿತ್ತು. ಆದರೆ ಭಾರತದ ಸಂವಿಧಾನ ಶಿಲ್ಪಿ ವಿಶ್ವ ಜ್ಞಾನಿ ಆಧುನಿಕ ಭಾರತ ನಿರ್ಮಾತೃ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಸಂವಿಧಾನ ನಿರ್ಮಿಸಿ ಕೊಟ್ಟ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜಾತಿ,ಧರ್ಮ,ಲಿಂಗ,ಮೇಲು-ಕೀಳು,ಬಡವ-ಶ್ರೀಮಂತ, ಅಕ್ಷರಸ್ಥ-ಅನಕರಸ್ಥ ಎಂಬ ಯಾವುದೇ ಭೇದ ಭಾವಗಳಿಲ್ಲದೆ,ಪ್ರಜೆಗಳು ಬಯಸುವ ಜನ ಬೆಂಬಲವಿರುವ ಯಾವುದೇ ಭಾರತೀಯ ವ್ಯಕ್ತಿ ಭಾರತೀಯ ಚುನಾವಣೆ ಆಯೋಗ ನಡೆಸುವ ಮುಕ್ತ ನಿರ್ಭೀತ ಮತ್ತು ನ್ಯಾಯಸಮ್ಮತ ಚುನಾವಣೆ ಮೂಲಕ ಒಂದೇ ಒಂದು ಹನಿ ರಕ್ತ ಕೆಳಗೆ ಬೀಳದಂತೆ ಪ್ರಜಾ ಪ್ರತಿನಿಧಿಯಾಗಿ ಆಯ್ಕೆಗೊಂಡು ಸರ್ಕಾರ ರಚಿಸಿ ಆಡಳಿತ ನಡೆಸುವ ಶ್ರೇಷ್ಠ ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ನಿರ್ಮಾಣ ಮಾಡಿದವರು ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಸ್ವಾತಂತ್ರ್ಯ ಸಮಾನತೆ ಮತ್ತು ಸಹೋದರತೆಯ ತತ್ವಗಳ ತಳಹದಿಯ ಮೇಲೆ ಮಾತ್ರ ಒಂದು ಸುಸಂಸ್ಕೃತ ಆದರ್ಶ ಸಮಾಜವನ್ನು ನಿರ್ಮಿಸಲು ರಕ್ತ ಪಾತ ರಹಿತ ಸಾಮಾಜಿಕ ಆರ್ಥಿಕ ರಾಜಕೀಯ ಕ್ರಾಂತಿಯನ್ನು ತಂದುಕೊಟ್ಟವರು ವಿಶ್ವದ ಮಹಾನ್ ನಾಯಕ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಯಾವುದೇ ಜಾತಿ,ಪಂಥ,ಧರ್ಮ,ಭಾಷೆ, ಪ್ರದೇಶ ರಾಜ್ಯ ರಾಜಕೀಯ ಪಕ್ಷ ಮತ್ತು ಮಹಾನ್ ವ್ಯಕ್ತಿಗಿಂತ ದೇಶ ದೊಡ್ಡದು ನಮ್ಮ ರಕ್ತದ ಕಟ್ಟಕಡೆಯ ಹನಿಯನ್ನು ಹರಿಸಿಯಾದರೂ ನಾವುಗಳು ನಮ್ಮ ದೇಶದ ಸ್ವಾತಂತ್ರ್ಯದ ರಕ್ಷಣೆಯನ್ನು ಮಾಡುತ್ತೇವೆಂದು ದೃಢ ಪ್ರತಿಜ್ಞೆ ಮಾಡಬೇಕು.





**ಶ್ರೀ ಪರಶುರಾಮ ಬೋವಿ**
**ವಡ್ಡರ್ ಸಮಾಜದ ತಾಲೂಕ ಅಧ್ಯಕ್ಷರು**
**ಹಳಸಗರ,ಶಹಾಪುರ,ಯಾದಗಿರಿ ಜಿಲ್ಲೆ**




# ಅಭಿನಂದನೆಗಳು



**ದಾವಣಗೆರೆ/ ಚನ್ನಗಿರಿ:** 2024-25 ನೇ ಸಾಲಿಗೆ ಜವಾಹರ್ ನವೋದಯ ವಿದ್ಯಾಲಯ ದೇವರಹಳ್ಳಿ ಶಾಲೆಗೆ ಆಯ್ಕೆಯಾಗಿರುವ ಶ್ರೀಮತಿ ವಿದ್ಯಾಶ್ರೀ ಶ್ರೀ ನಾಗರಾಜ್ ಅವರ ಮಗಳಾದ ಕುಮಾರಿ ಶ್ರೇಷ್ಠ ಇವರಿಗೆ ಸ ಹಿ ಪ್ರಾ ಶಾಲೆ ಕೊಂಡದ ಹಳ್ಳಿಯ ಎಸ್ ಡಿ ಎಂ ಸಿ ಅಧ್ಯಕ್ಷರಾದ ಶ್ರೀಯುತ ರಂಗಸ್ವಾಮಿ ಹಾಗೂ ಮುಖ್ಯೋಪಾಧ್ಯಾಯರಾದ ಶ್ರೀ ರಂಗಸ್ವಾಮಿ ಹಾಗೂ ಶಿಕ್ಷಕ ವರ್ಗದವರು ಅಭಿನಂದನೆ ಸಲ್ಲಿಸಿರುತ್ತಾರೆ.

**ವರದಿ-ವೆಂಕಟೇಶ.ಬಿ.ಪಿ**

ಕರುನಾಡ ಕಂದ
ಸಂಪುಟ 3 | ಸಂಚಿಕೆ 12
ದಿನಾಂಕ: 16-04-2024 ಪುಟಗಳು:16

# ಸಂಶಿ ಜಾತ್ರಾ ಪ್ರೀಮಿಯರ್ ಲೀಗ್ ಸೀಸನ್ 2ರ ಕ್ರಿಕೆಟ್ ಟೂರ್ನಮೆಂಟ್



ಗದಗ/ಸಂಶಿ:ಇತ್ತೀಚೆಗೆ ನಡೆದ ಐಪಿಎಲ್ ಮಾದರಿಯ 7 ತಂಡಗಳ ಸಂಶಿ ಜಾತ್ರಾ ಪ್ರೀಮಿಯರ್ ಲೀಗ್(ಖಎಕಖ) ಸೀಸನ್ 2 ರ ಕ್ರಿಕೆಟ್ ಟೂರ್ನಮೆಂಟ್ ನಲ್ಲಿ ಶ್ರೀ ಮೈಲಾರಲಿಂಗೇಶ್ವರ ಸಿಸಿ ತಂಡ ಬಲಿಷ್ಠ ಭಗತ್ ಸಿಂಗ್ ತಂಡವನ್ನು ಮಣಿಸಿ ಚಾಂಪಿಯನ್ ಕಿರೀಟ ಮುಡಿಗೇ–ರಿಸಿಕೊಂಡ ವಿಜೇತ ತಂಡಕ್ಕೆ ಇಂದು ಬಹುಮಾನ ವಿತರಿಸಲಾಯಿತು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗ್ರಾಂ.ಪಂ. ಅಧ್ಯಕ್ಷ ಶ್ರೀ ರಾಜು ಪುಟ್ಟಣವರ ವಹಿಸಿ ಮಾತನಾಡಿ ವಿಜೇತ ತಂಡಕ್ಕೆ ಶುಭಹಾರೈಸಿದರು.ಶ್ರೀ ಮೈಲಾರಲಿಂಗೇಶ್ವರ ತಂಡದಲ್ಲಿ ಮಂಜು ಗೊಂದಿ,ಸಂಜು ಗೋಮಪ್ಪನವರ,ಈರಪ್ಪ ರಾಟಿ ಮಲ್ಲು ಕಲ್ಲೂರ,ರಾಜು ಕೋಳಿವಾಡ ಹಾಗೂ ಸಹ ಆಟಗಾರರು ಟೂರ್ನಿಯುದ್ದಕ್ಕೂ ಅತ್ಯುತ್ತಮ ಪ್ರದರ್ಶನ ನೀಡಿ ತಮ್ಮ ತಂಡದ ಗೆಲುವಿಗೆ ಪ್ರಮುಖ ಪಾತ್ರ ವಹಿಸಿದರು.ತಂಡದ ಮಾಲೀಕರು ನಾಗರಾಜ ಕರೆಣ್ಣವರ ಆದರೆ ತಂಡದ ಮಾರ್ಗದರ್ಶಕರಾಗಿ ಶ್ರೀ ಮಂಜುನಾಥ ಹಾದಿಮನಿ ಕರವೇ ಅಧ್ಯಕ್ಷರು ಸಂಶಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

**ವರದಿ–ಸದಾಶಿವ ಭೀ ಮುಡೆಮ್ಮನವರ**

# ಮೈಸೂರು ಲೋಕಸಭಾ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಒಡೆಯರ್ ಅವರಿಂದ ಮತಯಾಚನೆ



ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲೂಕಿನ ಹಂಡಿತವಳ್ಳಿ ಗ್ರಾಮದಲ್ಲಿ ಬಿಜೆಪಿ ಮತ್ತು ಜಾತ್ಯಾತೀತ ಜನತಾದಳದ ಮೈತ್ರಿ ಅಭ್ಯರ್ಥಿಯಾದ ಯದುವೀರ್ ಕೃಷ್ಣದತ್ತ ಒಡೆಯರ್ ರವರು ಪಿರಿಯಾಪಟ್ಟಣ ತಾಲೂಕಿನ ವಿವಿಧ ಗ್ರಾಮದಲ್ಲಿ ಮತಯಾಚನೆ ಮಾಡಿ ಮಾತನಾಡುತ್ತಾ "ಭಾರತ ದೇಶ ಸುಭದ್ರವಾಗಿರಲು ಮತ್ತೊಮ್ಮೆ ನರೇಂದ್ರ ಮೋದಿಯವರನ್ನು ಪ್ರಧಾನಮಂತ್ರಿಯಾಗಿ ಮಾಡಲು ಬಿಜೆಪಿ ಮತ್ತು ಜಾತ್ಯಾತೀತ ಜನತಾದಳದ ಮೈತ್ರಿ ಅಭ್ಯರ್ಥಿಯಾದ ನಾನು ಈ ಗ್ರಾಮದಲ್ಲಿ ಮತ ಕೇಳಲು ಬಂದಿದ್ದು ನಿಮ್ಮೆಲ್ಲರ ಆಶೀರ್ವಾದ ಲೋಕಸಭಾ ಚುನಾವಣೆಯಲ್ಲಿ ನನ್ನ ಗುರುತಾದ ಕಮಲದ ಗುರುತಿಗೆ ಮತ ಹಾಕುವುದರ ಮೂಲಕ ಜಯಶೀಲರನ್ನಾಗಿ ಮಾಡಬೇಕು ಮಾಡಿದರೆ ಮೈಸೂರು ಲೋಕಸಭಾ ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿ ಮಾಡುತ್ತೇನೆ ಮತ್ತು ಈ ಭಾಗದಲ್ಲಿ ತಂಬಾಕು ಹೆಚ್ಚಾಗಿ ಬೆಳೆಯುವ ರೈತರ ಕಷ್ಟಕ್ಕೆ ನಾನು ಸ್ಪಂದಿಸುತ್ತೇನೆ"ಎಂದು ತಿಳಿಸಿದರು.

ನನ್ನ ಮೇಲೆ ಇಲ್ಲಸಲ್ಲದ ಅಪವಾದವನ್ನು ಕಾಂಗ್ರೆಸ್ ಅಭ್ಯರ್ಥಿಗಳು ನಡೆಸುತ್ತಿದ್ದು ನಾನು ರಾಜನಾದರೂ ಸಹ ಸಾಮಾನ್ಯ ಜನರ ಕೈಗೆ ಸಿಕ್ಕುತ್ತೇನೆ ಅವರ ಅಪವಾದಕ್ಕೆ ದೂರವಾಗುತ್ತೇನೆ ಅದರಿಂದ ನನ್ನನ್ನು ಗೆಲ್ಲಿಸಿ ಎಂದು ಕೇಳಿಕೊಂಡರು ಇದೇ ಸಂದರ್ಭದಲ್ಲಿ ಮಾಜಿ ಶಾಸಕರಾದ ಕೆ ಮಾದೇವ ಅವರು,ಜೆಡಿ–ಎಸ್ ತಾಲೂಕು ಘಟಕದ ಅಧ್ಯಕ್ಷರಾದ ಅಣ್ಣಯ್ಯ ಶೆಟ್ಟಿ ರವರು,ಮಾಜಿ ಶಾಸಕರಾದ ಹೆಚ್ ಸಿ ಬಸವರಾಜ್ ರವರು,ತಾಲೂಕು ಬಿಜೆಪಿ ಘಟಕದ ಅಧ್ಯಕ್ಷರಾದ ರಾಜೇಂದ್ರ ಅವರು,ದೇವರಾಜ್ ಅರಸು ರವರ ಮೊಮ್ಮಗ ಮಂಜುನಾಥ್ ಅರಸರವರು,ಬಿಜೆಪಿ ಮುಖಂಡರಾದ ಆರ್ ಟಿ ಸತೀಶ್ ರವರು, ರಾಜೇಗೌಡರು ಎಚ್ ಎ ರಾಮಚಂದ್ರರವರು,–ಎಚ್ ಡಿ ಶ್ರೀನಿವಾಸ್ ಹೆರ್ ದೀಪು ರವರು,ಗ್ರಾಮ ಪಂಚಾಯತಿ ಸದಸ್ಯರು,ಯುವಕರು,ಮಹಿಳೆ ಯರು ಹಾಗೂ ಹಂಡಿತವಳ್ಳಿ ಗ್ರಾಮಸ್ಥರು ಸಂದರ್ಭದಲ್ಲಿ ಹಾಜರಿದ್ದರು.

**ವರದಿ–ಹೆಚ್.ಆರ್.ಶಂಕರ್,ಹಂಡಿತವಳ್ಳಿ**

# ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ



ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲೂಕಿನ ಅಂಬೇಡ್ಕರ್ ಸರ್ಕಲ್ ನಲ್ಲಿ ದಿನಾಂಕ 14–04–2024 ರಂದು ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 133 ನೇ ಜಯಂತಿಯ ನಿಮಿತ್ತ ಸಿರುಗುಪ್ಪ ವಿಧಾನಸಭಾ ಕ್ಷೇತ್ರದ ಶಾಸಕರಾದ ಬಿ.ಎಂ.ನಾಗರಾಜ ಅವರು ನಗರದ ಅಂಬೇಡ್ಕರ್ ಸರ್ಕಲ್ ನಲ್ಲಿ ಇರುವ ಡಾ.ಬಿ.ಅರ್.ಅಂಬೇಡ್ಕರ್ ಅವರ ಮೂರ್ತಿಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

ಈ ಸಂದರ್ಭದಲ್ಲಿ ತಾಲೂಕು ಗ್ಯಾರಂಟಿ ಯೋಜನೆಯ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಎಂ.ಮಾರುತಿ ಪ್ರಸಾದ್ ರೆಡ್ಡಿ,ನಗರಸಭಾ ಸದಸ್ಯರಾದ ಬಿ ವೆಂಕಟೇಶ್, ಹೆಚ್.ಗಣೇಶ್ ಜಾಜಿ ರಾಮ್ ಮೀರ್ ಹುಸೇನ್ ತೆಕ್ಕಲಕೋಟೆ ಪ.ಪಂ.ಮಾಜಿ ಅಧ್ಯಕ್ಷರಾದ ದೇವರಮನೆ ನಾಗಪ್ಪ ದಲಿತ ಸಂಘಟನೆಯ ಮುಖಂಡರು ಹಾಗೂ ಪಕ್ಷದ ಕಾರ್ಯಕರ್ತರು ಉಪಸ್ಥಿತ–ರಿದ್ದರು.

**ವರದಿ:ಎಸ್.ಎ.ನಿಜಾಮ್**

# ಅರಣ್ಯ ಇಲಾಖೆ ಜಮೀನು ಮತ್ತು ರಾಜ್ಯ ಹೆದ್ದಾರಿ ರಸ್ತೆಯನ್ನು ಅತಿಕ್ರಮಣ ಮಾಡಿದ ಲೂಟಿಕೋರರಿಗೆ ಕಾನೂನು ಕ್ರಮ ಯಾವಾಗ? ಶಿವಣ್ಣ ಪರಂಗಿ



ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲೂಕಿನ ಕಸಬಾ ಲಿಂಗಸೂಗೂರು ಗ್ರಾಮದ ಸರ್ವೆ ನಂಬರ್ 502–5,3,7 ಜಮೀನನ್ನು ವಾಸದ ಉದ್ದೇಶಕ್ಕಾಗಿ ಬಿನ್ ಶೇತ್ಕಿ ಜಮೀನನಾಗಿ ಭೂ ಪರಿವರ್ತನೆ ಮಾಡುತ್ತಿದ್ದು, ಸದರಿ ಜಮೀನಿನ ಸುತ್ತಮುತ್ತ ಇರುವ ಅರಣ್ಯ ಇಲಾಖೆಯ ಜಮೀನನ್ನು ಮತ್ತು ರಾಜ್ಯ ಹೆದ್ದಾರಿಯ ರಸ್ತೆ ಮತ್ತು ರಾಂಪುರ್ ಗ್ರಾಮಕ್ಕೆ ಹೋಗುವ ರಸ್ತೆಯನ್ನು ಅತಿಕ್ರಮಿಸಿಕೊಂಡು ಲೇಔಟ್ ಮಾಡುತ್ತಿರುವುದರಿಂದ ಬಿನ್ ಶೇತ್ಕಿ ಆದೇಶವನ್ನು ರದ್ದುಪಡಿಸಬೇಕೆಂದು ದಲಿತ ಸಂಘರ್ಷ ಸಮಿತಿ ತಾಲೂಕು ಪ್ರಧಾನ ಕಾರ್ಯದರ್ಶಿ ಶಿವಣ್ಣ ಪರಂಗಿಯವರು 01–12–2023 ರಂದು ಮಾನ್ಯ ತಹಸೀಲ್ದಾರ್ ಅವರಿಗೆ ಮನವಿ ಸಲ್ಲಿಸಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಮಾನ್ಯ ತಹಶೀಲ್ದಾರರು 25–02–2024 ಕ್ಕೆ ತಾಲೂಕು ಭೂಮಾಪಕರು ಲಿಂಗಸುಗೂರು,ಕಂದಾಯ ನಿರೀಕ್ಷಕರು ಲಿಂಗಸಗೂರು/ ಗ್ರಾಮ ಆಡಳಿತ ಅಧಿಕಾರಿಗಳು ಲಿಂಗಸುಗೂರು ಇವ–ರಿಗೆ ಒಂದು ಮೆಮೋವನ್ನು ಕಳಿಸಿರುತ್ತಾರೆ.ಸದರಿ ಪ್ರಕರಣವನ್ನು ತುರ್ತಾಗಿ ವಿಲೇ ಮಾಡಿ ಮಾನ್ಯ ಸಹಾಯಕ ಆಯುಕ್ತರು ಲಿಂಗಸ್ಗೂರು ರವರಿಗೆ ವರದಿಯನ್ನು ಸಲ್ಲಿಸಬೇಕಾಗಿರುವುದರಿಂದ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕಸಬಾ ಲಿಂಗಸೂಗೂರು ಗ್ರಾಮದ ಸರ್ವೆ ನಂಬರ್ 502–5,3,7 ಜಮೀನುಗಳ ಹಾಗೂ ಸದರಿ ಜಮೀನುಗಳಿಗೆ ಹೊಂದಿಕೊಂಡಿರುವ ಅರಣ್ಯ ಇಲಾಖೆಯ ಜಾಗ,ಲೋಕೋಪಯೋಗಿ ಇಲಾಖೆ ಮತ್ತು ಸರಕಾರದ ಜಾಗಗಳ ಅಳತೆ ಬಗ್ಗೆ ಜಂಟಿಯಾಗಿ ಸರ್ವೆ ಮಾಡಿ ಒತ್ತುವರಿಯಾಗಿರುವ ಬಗ್ಗೆ ಸ್ಪಷ್ಟವಾದ ವರದಿಯನ್ನು ಮೂರು ದಿನಗಳ ಒಳಗೆ ಸಲ್ಲಿಸಲು ತಹಶೀಲ್ದಾರರು ಮೆಮೋ ಕೊಟ್ಟರೂ ಕೂಡಾ ತಹಶೀಲ್ದಾರರು ಹಾಗೂ ನಮಗೂ ಯಾವುದೇ ರೀತಿಯ ಸಂಬಂಧವಿಲ್ಲವೆಂದು ವರ್ತಿಸುವುದು ಕಾನೂನು ಉಲ್ಲಂಘನೆಯಾಗಿದೆ.ಈ ಕೂಡಲೇ ಮಾನ್ಯ ತಹಶೀಲ್ದಾರರು ಹಾಗೂ ಮಾನ್ಯ ಸಹಾಯಕ ಆಯುಕ್ತರು ಲಿಂಗಸ್ಗೂರು ಅರಣ್ಯ,ರಾಜ್ಯ ಹೆದ್ದಾ–ರಿ,ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿಕೊಂಡಿರುವ ಭೂ ಮಾಫಿಯಾಗಳಿಗೆ ಹಾಗೂ ಮಾಫಿಯಾಗಳ ಜೊತೆ ಸಹಕರಿಸಿದ ಕೆಲವು ಅಧಿಕಾರಿ ಗಳಿಗೂ ಯಾವ ರೀತಿ ಕಾನೂನು ಕ್ರಮ ಕೈಗೊಳ್ಳುತ್ತಾರೆ ಎಂಬುದು ಮುಂದಿನ ದಿನಗಳಲ್ಲಿ ತಿಳಿಯುತ್ತದೆ.

**ವರದಿ ಬಸವರಾಜ್ ಬಡಿಗೇರ್**

# ಬಾಗಲಕೋಟ ಜಿಲ್ಲೆಯ ಸಮಾಜ ಸೇವಕರು ಶಂಕರ ಹಡಪದ ಮತ್ತು ಮುತ್ತಪ್ಪ ಹಡಪದ

ಬಾಗಲಕೋಟೆ ಜಿಲ್ಲೆ ಗುಳೇದಗುಡ್ಡ ತಾಲೂಕಿನ ಕೊಂಕಣ ಕೊಪ್ಪ ಕಟಗೇರಿ ಗ್ರಾಮದ ಶಂಕರ ಹಡಪದ, ಮುತ್ತಪ್ಪ ಹಡಪದ ಬಾಗಲಕೋಟೆ ಜಿಲ್ಲೆ ಬಾಗಲಕೋಟೆ ತಾಲೂಕಿನ ನೀರಲಕೇರಿ ಗ್ರಾಮದ ಮುನಿ ವೃದ್ಧಾಶ್ರಮದಲ್ಲಿ ಡಾಕ್ಟರ್ ಬಿ ಆರ್ ಅಂಬೇಡ್ಕರ್ ಅವರ ಜನ್ಮದಿನದ ನಿಮಿತ್ತವಾಗಿ ಉಚಿತವಾಗಿ ಕಟಿಂಗ್,ಶೇವಿಂಗ್ ಸೇವೆಯನ್ನು ಮಾಡಿದ್ದಾರೆ.ಇವರ ಸೇವೆಯನ್ನು ಕಂಡು ಆಶ್ರಮದ ವೃದ್ಧರು ಇವ–ರಿಗೆ ಹೆಚ್ಚು ಆಯುಷ್ಯ ಆರೋಗ್ಯ ದಯಪಾಲಿಸಲಿ ಎಂದು ದೇವರಲ್ಲಿ ಪ್ರಾರ್ಥನೆ ಮಾಡಿದರು.

**ವರದಿ–ಪರಶುರಾಮ ಬಂಡಿ**





ಕರುನಾಡ ಕಂದ
ಸಂಪುಟ 3 । ಸಂಚಿಕೆ 12
ದಿನಾಂಕ: 16-04-2024 ಪುಟಗಳು:16

# "ರಂಜಾನ್ ರಂಗು:ಅಗರಖೇಡ ಗ್ರಾಮದಲ್ಲಿ ಹಬ್ಬದ ಕಳೆ"

ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಅಗರಖೇಡ ಗ್ರಾಮದಲ್ಲಿ ಹಿಂದೂ ಮತ್ತು ಮುಸ್ಲಿಂ ಬಾಂಧವರು ಶಾಂತಿಯುತವಾಗಿ ರಂಜಾನ್ ಹಬ್ಬವನ್ನು ಆಚರಿಸಿದರು.ಮುಸ್ಲಿಮರ ಪವಿತ್ರ ಹಾಗೂ ದೊಡ್ಡ ಹಬ್ಬಗಳಲ್ಲಿ ರಂಜಾನ್ ಮೊದಲನೆಯದು. ಇಂದು ರಂಜಾನ್ ಹಬ್ಬದ ಪ್ರಯುಕ್ತ ಎಲ್ಲಾ ಮುಸ್ಲಿಂ ಬಾಂಧವರು ಹೊಸ ಹೊಸ ಬಟ್ಟೆಗಳನ್ನು ಧರಿಸಿ ಸುಗಂಧ ದ್ರವ್ಯಗಳನ್ನು ಹಚ್ಚಿಕೊಂಡು ಎಲ್ಲ ಹಿರಿಯರು ಹಾಗೂ ಯುವಕರು ಈದ್ಗಾ ಬಳಿ ಎಲ್ಲರೂ ಒಟ್ಟಿಗೆ ಸೇರಿ ಪ್ರಾರ್ಥನೆಯನ್ನು ಸಲ್ಲಿಸಿದರು. ತಿಂಗಳು ಉಪವಾಸದ ಅಂತ್ಯದ ದಿನವಾದ ಇಂದು ಪ್ರಾಥ-ರ್ನೆ ಸಲ್ಲಿಸಿದ ಬಳಿಕ ಮೌಲಾನ ಆದ ಫಿರೋಜಿ ಮೌಲಾನ ಮಕಂದಾರ್ ಇವರು ಧರ್ಮೋಪದೇಶವನ್ನು ನೀಡಿದರು. ರಂಜಾನ್ ತಿಂಗಳು ಪ್ರಾರಂಭವಾದಾಗ ಸ್ವರ್ಗದ ದ್ವಾರಗಳು ತೆಗೆಯಲ್ಪಡುತ್ತವೆ ಮತ್ತು ನರಕದ ಬಾಗಿಲುಗಳು ಮುಚ್ಚಲ್ಪಡುತ್ತವೆ ಮತ್ತು ದೆವ್ವಗಳನ್ನು ಸರಪಳಿಗಳಲ್ಲಿ ಬಂಧಿಸಲಾಗುತ್ತದೆ.ಆದ್ದರಿಂದ ನಮಾಜ್ ಪ್ರತಿಯೊಬ್ಬರ ಆರಾಧಕನ ಕರ್ತವ್ಯವಾಗಿದೆ.

ಅದನ್ನು ಅವನು ಶುದ್ಧ ಹೃದಯದಿಂದ ಮಾಡಬೇಕು ಎಂದು ಹೇಳಿದರು.ನಂತರ ಮಾತನಾಡಿದ ಅಗರಖೇಡ ಗ್ರಾಮದ ಹೊರ ಪೊಲೀಸ್ ಠಾಣೆಯ ಎ.ಎಸ್.ಐ ಅವರಾದ ಶ್ರೀ ದೇವೇಂದ್ರ.ಎಲ್.ರಾಥೋಡ್ ಇವರು ಮಾತನಾಡಿ ಅಲ್ಲಾಹು ನಿಮಗೂ,ನಿಮ್ಮ ಕುಟುಂಬಕ್ಕೂ,ಆರೋಗ್ಯ,ದೀರ್ಘಾಯುಷ್ಯ ಮತ್ತು ಸಂಪತ್ ಭರಿತ ಜೀವನವನ್ನು ಕೊಟ್ಟು ಕಾಪಾಡಲಿ ಎಂದು ಹಾರೈಸಿ,ರಂಜಾನ್ ಹಬ್ಬದ ಶುಭಾಶಯಗಳನ್ನು ಕೋ-ರಿದರು.ಅದೇ ತರನಾಗಿ ಶ್ರೀ ಅಶೋಕ್ ಕಂಡೆಕರ್, ವಿಠಲಗೌಡ ಪಾಟೀಲ್,ಬಾಬುಗೌಡ ಪಾಟೀಲ್,ಸೋಮಣ್ಣ ರೂಗಿ ಇವರೆಲ್ಲರೂ ಮಾತನಾಡಿ ಅಲ್ಲಾಹುವಿನ ಆಶೀರ್ವಾದ ನಿಮ್ಮ ಮನೆ, ಮನ ತುಂಬಲಿ,ನಿಮ್ಮ ಜೀವನ ಸಂತೋಷದಿಂದ ಕೂಡಿರಲಿ ಎಂದು



ಹಾರೈಸಿ ರಂಜಾನ ಹಬ್ಬದ ಶುಭಾಶಯಗಳು ಕೋರಿದರು.ಈ ಸಂದರ್ಭದಲ್ಲಿ

ಪೀರು ಮೌಲಾನ ಮಕಂದಾರ,ಇಮಾಮ್ ಸಾಬ್ ಕೊರಬು,ಹುಸೇನಿ ಪೈಲ್ವಾನ್ ಕಾಣೆ,ಅಪ್ಪಾಲಾಲ್ ಮುಲ್ಲಾ,ಮುಬಾರಕ್ ಅತ್ತಾರ್,ಹೈದರ್ ಭಾಗವಾನ್, ಚಾಂದಸಾಬ್ ಅತ್ತಾರ್,ಸೈಪನ್ ಜಲಾಲ್,ಪೀರು ಮಾಸ್ತರ್ ಬಡಿಗೇರ್,ಅಲ್ಲಿಸಾ ಜಲಾಲ್,ಶಾಹಿದ್ ಮುಲ್ಲಾ,ಜಾಕಿರ್ ವಾಲಿಕಾರ್,ಅಪ್ಪಾ ಲಾಲ್,ಸಬ್ಜಲಿ ಮುಲ್ಲಾ,ಇಮಾಮ್ ಸಾಬ್,ಮೌಲಾ ಬಿಜಲಿ,ಅಷ್ಪಕ್ ಮುಲ್ಲಾ,ರಫೀಕ್ ಮನೂರ್,ಶಫೀಕ್ ಪಟೇಲ್, ಹುಸೇನಿ ಅತ್ತಾರ್,ಗ್ರಾಮ ಪಂಚಾಯತಿಯ ಅಧ್ಯಕ್ಷರಾದ ಶ್ರೀ ಅಶೋಕ್ ಕಂಡೆಕರ್,ವಿಟ್ಠಲ್ ಗೌಡ ಪಾಟೀಲ್,ಬಾಬುಗೌಡ ಪಾಟೀಲ್,ಸೋಮಣ್ಣ ರೂಗಿ, ಸುಖದೇವ ಮೇಲಿನಮನಿ,ಪೊಲೀಸ್ ಇಲಾಖೆಯ ಸಿಬ್ಬಂದಿಯಾದ ಶ್ರೀ ದೇವೇಂದ್ರ.ಎಲ್.ರಾಥೋಡ್ ಹಾಗೂ ಶ್ರೀ ಎನ್.ಸಿ.ಜೇವೂರ ಭಾಗವಹಿಸಿದ್ದರು.

**ವರದಿ-ಮನೋಜ ನಿಂಬಾಳ**

# ಅಂಬೇಡ್ಕರ್ ಜಯಂತಿ



ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಭೀಮಾ ನಗರದ ಸರಕಾರಿ ಹಿರಿಯ ಪ್ರಾಥ-ಮಿಕ ಶಾಲೆಯಲ್ಲಿ ಇಂದು ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 133 ನೇ ಜಯಂತಿ ನಿಮಿತ್ಯ ಇಂದು ಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷರಾದ ಶ್ರೀ ಗಡ್ಡಿ ಲಿಂಗ ಪೂಜಾರಿ ಹಾಗೂ ಶಾಲೆಯ ಮುಖ್ಯೋಪಾಧ್ಯಯರಾದ ಶ್ರೀ ಪೀರಹಮ್ಮದ್ ಬಡಿಗೇರ್ ಇವರು ಫೋಟೋ ಪೂಜೆಯನ್ನು ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆಯನ್ನು ಮಾಡಿ ಗೌರವ ಸಲ್ಲಿಸಿದರು.ಈ ಸಂದರ್ಭದಲ್ಲಿ ಶಾಲಾ ಸಹ ಶಿಕ್ಷಕರಾದ ಶ್ರೀ ಬಿ.ಕೆ.ಭಜಂತ್ರಿ ಹಾಗೂ ಅತಿಥಿ ಶಿಕ್ಷಕರಾದ ಶ್ರೀ ಸಂಜೀವ್ ಪಾಲವೆ,ಶ್ರೀಮತಿ ಮಹಾದೇವಿ ದಿಂಡೂರ ಹಾಗೂ ಶಾಲಾ ಮಕ್ಕಳು ಉಪಸ್ಥಿತರಿದ್ದರು.

**ವರದಿ-ಮನೋಜ ನಿಂಬಾಳ**

# ಮತದಾನ ಜಾಗೃತಿ ಅಭಿಯಾನ




ಗದಗ ಜಿಲ್ಲಾ ಲಕ್ಷ್ಮೇಶ್ವರ ನಗರದಲ್ಲಿ ಶಿಕ್ಷಣ ಇಲಾಖೆ,ತಾಲೂಕ ಪಂಚಾಯತಿ ಹಾಗೂ ಪುರಸಭೆ ವತಿಯಿಂದ ಮತದಾರರಲ್ಲಿ ಚುನಾವಣೆ ಮತದಾನದ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಮಹಾ ಕವಿ ಪಂಪ ವೃತ್ತದಲ್ಲಿ ಹಮ್ಮಿಕೊಳ್ಳಲಾಯಿತು.ಸಕಲ ಲಕ್ಷ್ಮೇಶ್ವರ ನಗರದ ಶಾಲಾ ಶಿಕ್ಷಕರು,ತಾಲೂಕ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು,ಪುರಸಭೆ ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳು ಭಾಗಿಯಾಗಿದ್ದರು. ಇದೆ ಸಮಯದಲ್ಲಿ ಉರ್ದು ಶಾಲಾ ಮಕ್ಕಳಿಂದ ಮಾನವ ಪಿರಮಿಡ್ ನಿರ್ಮಿಸುವ ಮೂಲಕ ಜಾಗೃತಿ ಮೂಡಿಸಿದ್ದು ಎಲ್ಲರ ಗಮನ ಸೆಳೆಯಿತು.

**ವರದಿ-ಸದಾಶಿವ ಮುಡೆಮ್ಮನವರ**




# ಡಾ.ಬಿ.ಆರ್ ಅಂಬೇಡ್ಕರ್ ರವರ ಜಯಂತಿಯ ಶುಭ ಕೋರಿದ ತಾಲೂಕಾಧ್ಯಕ್ಷರು



ಗದಗ ಜಿಲ್ಲಾ ಲಕ್ಷ್ಮೇಶ್ವರ ತಾಲೂಕಿನ ಕರ್ನಾಟಕ ಸರ್ಕಾರದ ಗ್ಯಾರಂಟಿ ಯೋಜನೆಗಳ ತಾಲೂಕ ಅಧ್ಯಕ್ಷರಾದ ಶ್ರೀ ನಾಗರಾಜ್ ಮಡಿವಾಳರವರು ದಿನಾಂಕ 14-04-2024 ರ ಸಂವಿಧಾನ ಶಿಲ್ಪಿ ಡಾ.ಬಿ.ಆರ್ ಅಂಬೇಡ್ಕರ್ ರವರ ಜಯಂತಿಯ ಹಾರ್ದಿಕ ಶುಭಾಶಯಗಳನ್ನು ಕೋರಿದರು.ಈ ಸಂದರ್ಭದಲ್ಲಿ ಶ್ರೀಯುತರು ಮಾತನಾಡುತ್ತಾ ಡಾ.ಬಿ ಆರ್ ಅಂಬೇಡ್ಕರ್ ರವರು ಈ ದೇಶದ ಸಂವಿಧಾನ ರಚನೆಯನ್ನು ಮಾಡಿ ದೀನ ದಲಿತರ,ಶೋಷಿತರ ಧ್ವನಿಯಾಗಿ ಸಮಾಜದಲ್ಲಿಯ ಬೇದ-ಭಾವ ತೊಲಗಿಸಲು ಬಹಳ ಪ್ರಾಮಾಣಿಕ ಕೆಲಸ ಮಾಡಿದ ಮಹಾನ್ ಚೈತನ್ಯವಾಗಿದ್ದಾರೆ ಎಂದು ಹೇಳಿದರು.

**ವರದಿ-ಸದಾಶಿವ ಭೀ ಮುಡೆಮ್ಮನವರ**

# "ಸಂವಿಧಾನ ಶಿಲ್ಪಿಯ ಜನ್ಮ ದಿನಾಚರಣೆ"



**ಗದಗ:** ಲಕ್ಷ್ಮೇಶ್ವರ ನಗರದ ಬಾಲಾಜಿ ಆಸ್ಪತ್ರೆಯಲ್ಲಿ ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಪ್ರಯುಕ್ತ ಬಾಬಾಸಾಹೇಬ್ ಅವರ ಭಾವಚಿತ್ರಕ್ಕೆ ಮಾನ್ಯ ಜನಪ್ರಿಯ ಶಾಸಕರಾದ ಸನ್ಮಾನ್ಯ ಡಾ.ಚಂದ್ರುಲಮಾಣಿ ಯವರು ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು.

ಈ ಸಂದರ್ಭದಲ್ಲಿ ಶಿರಹಟ್ಟಿ ಮಂಡಲದ ಅಧ್ಯಕ್ಷರಾದ ಸುನೀಲ ಮಹಾಂತೇಶೆಟ್ಟರ ಯವರು ಪಕ್ಷದ ಹಿರಿಯ ಮುಖಂಡರು ಪ್ರಮುಖರು,ವಿವಿಧ ಮೋರ್ಚಾದ ಪದಾಧಿಕಾ-ರಿಗಳು ಉಪಸ್ಥಿತರಿದ್ದರು.

**ವರದಿ-ಸದಾಶಿವ ಭೀ ಮುಡೆಮ್ಮನವರ**

ಕರುನಾಡ ಕಂದ
ಸಂಪುಟ 3 । ಸಂಚಿಕೆ 12
ದಿನಾಂಕ: 16–04–2024 ಪುಟಗಳು:16

# ಅನುಮಾನವೇ ಅನಾರೋಗ್ಯಕ್ಕೆ ಕಾರಣ



ಒಂದೇ ಒಂದು ಚಿಕ್ಕ ರಂದ್ರ ದೊಡ್ಡ ಹಡಗನ್ನೇ ಮುಳಗಿಸಬಲ್ಲದು ಹಾಗೆಯೇ ಒಂದು ಸಣ್ಣ ಅನುಮಾನ ಹಲವಾರು ವರ್ಷಗಳ ಸಂಬಂಧವನ್ನೇ ಅಲುಗಾಡಿಸಿ ಹಾಳು ಮಾಡಿಬಿಡಬಹುದು. ಅನುಮಾನ ಎಂಬ ರೋಗ ಎಲ್ಲರಿಗೂ ಇದ್ದೇ ಇರುತ್ತದೆ. ಕೆಲವು ಜನರಿಗೆ ಇನ್ನಷ್ಟು ಹೆಚ್ಚಾಗಿರುತ್ತದೆ.

ಸಂಶಯವನ್ನು ಹೆಚ್ಚಾಗಿ ಹೊಂದಿರುವ ಜನರು ಎಲ್ಲರ ಮೇಲೂ ಅನುಮಾನ ಪಡುತ್ತಿರುತ್ತಾರೆ. ಅಂತಹವರಿಗೆ ಅನುಮಾನ ಪಡಲು ದೊಡ್ಡ ಕಾರಣಬೇಕಿಲ್ಲ. ಯಾರೊ ಒಬ್ಬರು ತಮ್ಮಷ್ಟಕ್ಕೇ ತಾವೇ ನಕ್ಕರೂ ಸಹ ನನ್ನನ್ನು ನೋಡಿಯೇ ನಕ್ಕರು ಎನ್ನುವ ಅನುಮಾನ, ತಾವು ಹಾದಿಯಲ್ಲಿ ಹೋಗುವಾಗ ದಿಟ್ಟಿಸಿ ನೋಡಿದರೆ ಅದಕ್ಕೂ ಅನುಮಾನ ಹೀಗೆ ಅವರ ಜೀವನವೆಲ್ಲ ಅನುಮಾನದಲ್ಲಿಯೇ ಬದುಕಿ ಜೀವನವನ್ನು ನರಕ ಮಾಡಿಕೊಂಡುವರು ನಮ್ಮ ಮನೆಯಲ್ಲೂ, ನಮ್ಮ ಸುತ್ತಮುತ್ತಲು ಇರಬಹುದು ಅಥವಾ ನಾವೇ ಆ ರೋಗಕ್ಕೆ ತುತ್ತಾಗಿರಬಹುದು.

ದಾಂಪತ್ಯ ಜೀವನದಲ್ಲಿ ಅನುಮಾನದ ಪಾತ್ರ ದೊಡ್ಡದು. ಇದಕ್ಕೆ ಎಷ್ಟೋ ದಾಂಪತ್ಯಗಳು ಮುರಿದು ಬಿದ್ದಿವೆ. ಹಾಗೂ ಮುರಿದು ಬೀಳುತ್ತಿವೆ. ಮುಂದಾದರು ಮುರಿದು ಬೀಳಬಹುದು. ಇದು ಎಲ್ಲಾ ದೇಶಗಳಲ್ಲಿ ನಡೆಯುವ ಕ್ರಿಯೆಯು ಹೌದು. ಅದರಲ್ಲೂ ಇಂದಿನ ಯುವಜನಾಂಗದವರಲ್ಲಿ ಅನುಮಾನದ ಪಿಡುಗು ಹೆಚ್ಚಾಗಿದೆ. ಹೀಗಾಗಿಯೇ ವಿವಾಹ ವಿಚ್ಛೇದನಗಳ ಸಂಖ್ಯೆ ಕೋರ್ಟಿನಲ್ಲಿ ಹೆಚ್ಚಾಗಿ ಕಾಣಬಹುದು. ಗಂಡನ ಮೊಬೈಲ್ ಗೆ ಬಂದ ಕರೆ, ಮೆಸೇಜ್ ಮುಂತಾದವುಗಳ ಬಗ್ಗೆ ಹೆಂಡತಿ ಒಂದು ಕಣ್ಣಿಟ್ಟಿರುತ್ತಾಳೆ. ಕಚೇರಿಯಿಂದ ಸಹೋದ್ಯೋಗಿ ಕಚೇರಿ ಕೆಲಸಕ್ಕೆ ಕರೆಮಾಡಿದರು ಅನುಮಾನದ ಹೊಗೆಯಾಡುತ್ತದೆ. ಅವನೂ ಅಷ್ಟೇ ಹೆಂಡತಿಯ ಫೇಸ್ಬುಕ್, ಇನಸ್ಟಾಗ್ರಾಮ್ ಗಳನ್ನು ದಿನಂಪ್ರತಿ ಚೆಕ್ ಮಾಡುತ್ತಿರುತ್ತಾನೆ. ಫ್ರೆಂಡ್ಸ್ ಲಿಸ್ಟ್ ನಲ್ಲಿರುವ ಪುರುಷರು ಯಾರೆಂದು ಪತ್ತೆದಾರಿ ಮಾಡಲು ಪ್ರಯತ್ನಿಸುತ್ತಾನೆ.

ಮುಲ್ಲಾ ನಸ್ರುದ್ದಿನ್ ರ ಅನುಮಾನದ ಕುರಿತು ಇಂದು ಕತೆಯನ್ನು ಕೇಳಿರಬಹುದು. ನಸ್ರುದ್ದಿನ್ ನ ಹೆಂಡತಿ ಅವನ ಮೇಲೆ ಬಹಳಷ್ಟು ಸಂಶಯ ಹೊಂದಿದ್ದಳು. ನಸ್ರುದ್ದಿನ್ ಕಛೇರಿಯ ಮಹಿಳಾ ಸಿಬ್ಬಂದಿಗಳೊಂದಿಗೆ ಆತ್ಮೀಯತೆಯಿಂದ ಇರುವುದೇ ಇದಕ್ಕೆ ಕಾರಣವಾಗಿತ್ತು. ನಸ್ರುದ್ದಿನ್ ನ ಬಟ್ಟೆಗಳಲ್ಲಿ ಪ್ರತಿದಿನ ಏನಾದರೂ ಸಾಕ್ಷಿಗಾಗಿ ಹುಡುಕುತ್ತಿದ್ದಳು. ಅಂದು ನಸ್ರುದ್ದಿನ್ ಹಾಕಿಕೊಂಡ ಕೋರ್ಟಿನಲ್ಲಿ ಮಹಿಳೆಯ ಕರಿ ಕೂದಲು ಅವಳಿಗೆ ಸಿಕ್ಕಿತು. ಇದರಿಂದ ಮನೆಯಲ್ಲಿ ದೊಡ್ಡ ರಾದ್ಧಾಂತವೇ ನಡೆಯಿತು. ಅವನು ಎಷ್ಟೇ ಹೇಳಿದರೂ ಕೇಳುವ ಸ್ಥಿತಿಯಲ್ಲಿ ಅವಳಿರಲಿಲ್ಲ. ಮರುದಿನ ಬಿಳಿ ಕೂದಲು ಸಿಕ್ಕಿತು ಅದಕ್ಕವಳು ಬಿಳಿ ಕೂದಲವಳ ಜೊತೆ ಚಕ್ಕಂದ ಆಡಿದೆ ಅಂತ ಚೀರಾಡಿದಳು. ಮರುದಿನ ನಸ್ರುದ್ದಿನ್ ಕಚೇರಿಯಿಂದ ಮನೆಗೆ ಹೋಗುವಾಗ ಜಾಗರೂಕತೆಯಿಂದ ಹಾಕಿಕೊಂಡ ಕೋರ್ಟ್ ಸ್ವಚ್ಛಗೊಳಿಸಿಕೊಂಡು ಹೋದ ಅಂದು ಅವಳು ಇಂದು ನೀನು ತಲೆಯಲ್ಲಿ ಕೂದಲು ಇಲ್ಲದವಳ ಜೂತೆ ಸರಸ ಆಡಿದ್ದಿಯಾ ಎಂದು ಕೂಗಾಡಿದಳು. ಅನುಮಾನ ಹೊಂದಿದ್ದ ಮನಸ್ಸುಗಳು ಹೀಗೆ ಯಾವಾಗಲೂ ಅದರ ಸುತ್ತಲೇ ಸುತ್ತುತ್ತಿರುತ್ತವೆ.

ರಾಮಕೃಷ್ಣ ಪರಮಹಂಸರು "ನಂಬಿಕೆಯೇ ಜೀವನ ಸಂಶಯವೇ ಮರಣ. ನಂಬಿಕೆ ಅಧ್ಬುತವಾದ ಕಾರ್ಯವನ್ನು ಸಾಧಿಸಿದರೆ ಸಂಶಯ ಸರ್ವನಾಶಕ್ಕೆ ಕಾರಣವಾಗುತ್ತದೆ" ಎಂಬ ಮಾತು ಎಷ್ಟು ಸತ್ಯವಲ್ಲವೇ. ಇಂದಿನ ಮನುಷ್ಯನ ಜೀವನದ ಅತೀ ದೊಡ್ಡ ದೌರ್ಬಲ್ಯವೆಂದರೆ ಅನುಮಾನವೇ. ಕಾಮಾಲೆ ಕಣ್ಣಿನವರಿಗೆ ಎಲ್ಲವು ಹಳದಿ ಕಾಣುವಂತೆ ಸಂಶಯದ ಗುಣವುಳ್ಳವರು ಪ್ರತಿಯೊಂದನ್ನು ಸಂಶಯ ದೃಷ್ಟಿಯಿಂದ ನೋಡುತ್ತಾರೆ. "ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು" ಎನ್ನುವ ಯೋಚನೆಯನ್ನೇ ಮಾಡುವುದಿಲ್ಲ. ಕಣ್ಣಿನಿಂದ ನೋಡಿದ್ದು ಸುಳ್ಳಾಗಬಹುದು, ಕಿವಿಯಿಂದ ಕೇಳಿದ್ದು ಸುಳ್ಳಾಗಬುದು. ಎಂಬ ಅಂಶಗಳನ್ನು ಅನುಮಾನ ಪಡುವ ವ್ಯಕ್ತಿ ಗಣನೆಗೆ ತೆಗೆದುಕೊಳ್ಳುವುದಿಲ್ಲ.

ರಾಮಾಯಣದ ಒಂದು ಪ್ರಸಂಗವನ್ನು ನೆನಪಿಸಿಕೊಳ್ಳಬಹುದು. ವನವಾಸದಿಂದ ಮರಳಿ ಬಂದು ರಾಮ ಅಯೋಧ್ಯೆಯ ಮಹಾರಾಜನಾಗುತ್ತಾನೆ. ಸೀತಾದೇವಿ ಮಹಾರಾಣಿ ಆಗುತ್ತಾಳೆ. ಅಯೋಧ್ಯೆಯ ಎಲ್ಲ ಪ್ರಜೆಗಳು ಖುಷಿಯಿಂದ ಇರುವಾಗ ಅಗಸನ ತಲೆಯಲ್ಲಿ ಸಂಶಯದ ಹುಳ ಹೇಗೆ ಹೊಕ್ಕಿತು ಗೊತ್ತಿಲ್ಲ. "ಇಷ್ಟು ದಿನ ಪರಪುರುಷನ ರಾಜ್ಯದಲ್ಲಿ ಸೀತೆ ಪತಿವೃತೆ ಆಗಿರಲು ಹೇಗೆ ಸಾಧ್ಯ" ಎಂಬ ಮಾತು ಇಡೀ ಅಯೋಧ್ಯೆಯನ್ನು ಬೆಚ್ಚಿಬೀಳಿಸುತ್ತದೆ. ಇದರಿಂದ ಶ್ರೀರಾಮನು ಸೀತೆಯನ್ನು ಕಾಡಿಗೆ ಕಳುಹಿಸಿದನು. ಹೀಗೆಯೇ ಯಾರದೊ ಮಾತಿನಿಂದ ಮನೆಯಲ್ಲಿ ಜಗಳಗಳು, ಮನಸ್ತಾಪಗಳು ಸಾಮಾನ್ಯವಾಗಿ ಬಿಡುತ್ತವೆ.

"ಬಾರ್ಯಾ ಗುಣವತಿ ಶತ್ರು " ಎಂಬ ವಾಕ್ಯವಂತೂ ಸಂಶಯಕ್ಕೆ ಒಳ್ಳೆಯ ಉದಾಹರಣೆ ಆಗಬಹುದು. ಚೆಂದದ ಹೆಂಡತಿಯನ್ನು ಹೊಂದಿದ ಹೆಚ್ಚಿನ ಗಂಡಸರಿಗೆ ಅನುಮಾನ ಹೆಚ್ಚು. ಅವಳು ನನ್ನವಳು ಅವಳು ನನ್ನನ್ನಷ್ಟೇ ಮಾತನಾಡಿಸಬೇಕು ಎಂಬ ಸ್ವಾರ್ಥ ಮನೋಭಾವನೆ ಹೊಂದಿರುತ್ತಾರೆ. ಅವಳು ಎಲ್ಲಿಗೆ ಹೋದರೂ ಸಂಶಯ ದೃಷ್ಟಿಯಿಂದ ನೋಡುತ್ತಾನೆ. ಹತ್ತಾರು ಪ್ರಶ್ನೆಗಳನ್ನು ಕೇಳುತ್ತಾನೆ. ದೇವಸ್ಥಾನಕ್ಕೆ ಹೋದರು ಸಹಿತ ಸಂಶಯವೇ. ಎಲ್ಲಿ ಹೋಗಿದ್ದೆ? ಯಾರ ಜೊತೆ ಮಾತನಾಡಿದೆ? ಇಂತಹ ಡ್ರೆಸ್ ಏಕೆ? ಪ್ರತಿಯೊಂದಕ್ಕೂ ಸಂಶಯವೇ.

ಚೆಂದದ ಹೆಂಡತಿಯನ್ನು ಹೊಂದಿದ ಎಲ್ಲ ಗಂಡಂದಿರೂ ಸಂಶಯಸ್ಥರು ಎಂದು ಹೇಳಲಾಗದು, ಆದರೆ ಸಂಶಯ ಪಡುವವರೇ ಹೆಚ್ಚು.

"ಸಂಶಯಾತ್ಮಾ ವಿನಶ್ಯತಿ" ಎನ್ನುವ ಹಾಗೆ, ಸಂಶಯ ಹೊಂದಿದ ವ್ಯಕ್ತಿ ಎಲ್ಲಿಯೂ ಸಂತೋಷದಿಂದ ಇರಲು ಸಾಧ್ಯವಿಲ್ಲ. ಅವನೊಬ್ಬನೇ ಅಲ್ಲ ಅವನ ಸುತ್ತಲಿನ ಜನರನ್ನು ಸಂತೋಷದಿಂದ ಇರಲು ಬಿಡುವುದಿಲ್ಲ. ಮನೆಯಲ್ಲಿ ಅತ್ತೆ ನಾಯಿಗೂ, ಬೆಕ್ಕಿಗೂ ಬೈದರೂ ಸೊಸೆ ನನಗೆ ಬೈದಳೆಂದು ಸಂಶಯ ಪಡುತ್ತಾಳೆ. ಸೊಸೆ ತನ್ನ ಗಂಡನ ಜೊತೆ ಏಕಾಂತದಲ್ಲಿ ಮಾತನಾಡುವುದನ್ನು ಅತ್ತೆ ನೋಡಿದರೆ ಗಂಡನಿಗೆ ಏನೊ ಕಿವಿ ತುಂಬುತ್ತಿದ್ದಾಳೆಂಬ ಸಂಶಯ. ಹೀಗೆ ಸಂಶಯಗಳು ಪ್ರತಿ ಮನೆಯಲ್ಲೂ, ಸಂಸಾರದಲ್ಲೂ ಇದ್ದೆ ಇರುತ್ತವೆ. ಇದು ಅತಿಯಾದಾಗ ದುರಂತದಲ್ಲಿ ಸಂಬಂಧಗಳು ಕೊನೆಗೊಳ್ಳುತ್ತವೆ. ನ್ಯೂಸ್ ಗಳಲ್ಲಿ ನೋಡುತ್ತಿರುತ್ತೇವೆ. "ಪತ್ನಿಯ ಶೀಲ ಶಂಕಿಸಿ ಅವಳ ಕೊಲೆ". ಅನುಮಾನದ ರೋಗ ಹೆಚ್ಚಾದರೆ ಕೊಲೆ, ಆತ್ಮಹತ್ಯೆಗಳಂತಹ ದುರಂತಗಳನ್ನು ಕಾಣಬೇಕಾಗುತ್ತದೆ.

ನಾವು ಅಪರಿಚಿತ ಹೊಟೆಲ್ ನಲ್ಲಿ ಊಟ, ಉಪಹಾರ ಮಾಡುತ್ತೇವೆಂದರೆ ಅದು ನಂಬಿಕೆಯಿಂದ ಮಾತ್ರ. ಅವರು ಊಟದಲ್ಲಿ ವಿಷ ಹಾಕಿದ್ದರೆ ಎಂಬ ಅನುಮಾನ ಬಂದರೆ ನಾವು ಹೇಗೆ ಊಟ ಮಾಡಲು ಸಾಧ್ಯ. ಅದರಂತೆ ನಾವು ಎಲ್ಲರಲ್ಲಿ ನಂಬಿಕೆ ಬೆಳೆಸಿಕೊಂಡರೆ ಬದುಕು ನೆಮ್ಮದಿಯಾಗಿರುತ್ತದೆ. ಮುಖ್ಯವಾಗಿ ದಾಂಪತ್ಯದಲ್ಲಿ ಸಂಗಾತಿಯೊಂದಿಗೆ ನಂಬಿಕೆ, ವಿಶ್ವಾಸ ಇರಲೇಬೇಕು. ಇಂದು ವಿವಾಹ ಸಂಬಂಧಗಳು ದುರ್ಬಲಗೊಂಡು ವಿಚ್ಛೇದನದ ಹಾದಿ ಹಿಡಿಯುವುದನ್ನು ತಪ್ಪಿಸಬಹದು.

ನಮ್ಮನ್ನು ಜಾಗೃತರಾಗಿಸಲು ಸಣ್ಣ ಮಟ್ಟದ ಸಂಶಯಗಳು ಹುಟ್ಟಬೇಕು. ಆದರೆ ಅದು ಜ್ಞಾನಾರ್ಜನೆಗೆ ಸೀಮಿತವಾಗಿರಬೇಕು. ಏಕೆ? ಹೇಗೆ? ಮುಂದೇನು? ಒಂದು ವಿಷಯವನ್ನು ಸಂಪೂರ್ಣವಾಗಿ ತಿಳಿದುಕೊಳ್ಳಲು ಸಹಾಯಕವಾಗುತ್ತದೆ. ಸ್ವಾರ್ಥ, ಭಯ, ಗೊಂದಲದ ವ್ಯಕ್ತಿತ್ವಗಳನ್ನು ನಿಯಂತ್ರಣದಲ್ಲಿಟ್ಟುಕೊಂಡರೆ ಅನುಮಾನವೆಂಬ ರೋಗವನ್ನು ಹೋಗಲಾಡಿಸಬಹದು.



ಬಸವರಾಜ ಹೊನಗೌಡರ

# ಇಡ್ಲಿ ತಿಂದು ತಿಂದು ಬೇಸರ ಆಗಿದ್ಯಾ, ಇದ್ರಿಂದ ಮಂಚೂರಿಯನ್ ಮಾಡಿ ನೋಡಿ



ಇಡ್ಲಿ ಎಂದಾಕ್ಷಣ ಮಕ್ಕಳು ಮುಖ ಗಂಟಿಕ್ಕುವುದು ಸಹಜ ಹಾಗಾಗಿ ಮಕ್ಕಳಿಗೆ ಏನು ತಿಂಡಿ ಮಾಡೋದಪ್ಪಾ ಎಂದು ತಾಯಂದಿರು ಸಾಕಷ್ಟು ತಲೆ ಕೆಡಿಸಿಕೊಳ್ಳುತ್ತಾರೆ. ಇಡ್ಲಿ ತಿನ್ನದೇ ಇರುವವರಿಗಾಗಿಯೇ ಇಲ್ಲಿದೆ ಸ್ಪೆಷಲ್ ಇಡ್ಲಿ ಮಂಚೂರಿಯನ್ ರೆಸಿಪಿ. ಇಡ್ಲಿಯಲ್ಲಿ ಮಂಚೂರಿಯನ್ ಮಾಡಿಕೊಟ್ಟರೆ ಮಕ್ಕಳು ಕೂಡಾ ಬಾಯಿ ಚಪ್ಪರಿಸಿಕೊಂಡು ತಿನ್ನುತ್ತಾರೆ.

ದಕ್ಷಿಣ ಭಾರತದಲ್ಲಿ ಬೆಳಗಿನ ಉಪಾಹಾರಕ್ಕೆ ಬೆಸ್ಟ್ ತಿನಿಸು ಎಂದರೆ ಇಡ್ಲಿ.ಬಹುತೇಕ ಹೋಟೆಲ್ ಮನೆಗಳಲ್ಲಿ ಇಡ್ಲಿ ಮಾಡುತ್ತಾರೆ ಆದರೆ ಪದೇ ಪದೇ ಇಡ್ಲಿ ಮಾಡಿದ್ರೆ ಮಕ್ಕಳ ಬೇಸರ ಮಾಡಿಕೊಳ್ಳುತ್ತಾರೆ. ತಿನ್ನುವುದಿಲ್ಲ ಎಂದು ಹಟ ಹಿಡಿಯುತ್ತಾರೆ ಅದಕ್ಕಾಗಿ ಇಡ್ಲಿಯಲ್ಲೇ ಸ್ಪೆಷಲ್ ಏನಾದ್ರೂ ಮಾಡಿ.ಇಡ್ಲಿ ಬಳಸಿಕೊಂಡು ಡಿಫ್ರೆಂಟಾಗಿ ರೆಸಿಪಿ ತಯಾರಿಸಿದ್ರೆ ಮಕ್ಕಳಾದಿಯಾಗಿ ಮನೆಯವರೆಲ್ಲಾ ಬಾಯಿ ಚಪ್ಪರಿಸಿಕೊಂಡು ತಿಂತಾರೆ ಅಂತಹ ರೆಸಿಪಿಗಳಲ್ಲಿ ಇಡ್ಲಿ ಮಂಚೂರಿಯನ್ ಕೂಡಾ ಒಂದು.

**ಇಡ್ಲಿ ಮಂಚೂರಿಯನ್** : ಬೇಕಾಗುವ ಸಾಮಗ್ರಿಗಳು:ಇಡ್ಲಿ–5,ಟೊಮೆಟೊ–1, ಹುಣಸೆಹಣ್ಣು–ಚಿಕ್ಕ ಉಂಡೆ,ಗರಂಮಸಾಲಾ ಪುಡಿ–ಒಂದು ಚಮಚ,ಉಪ್ಪು–ರುಚಿಗೆ,ಈರುಳ್ಳಿ –ಅರ್ಧ ತುಂಡು,ಮೆಣಸಿನಕಾಯಿ–ಎರಡು, ಅರಿಶಿನ ಅರ್ಧ ಚಮಚ,ಎಣ್ಣೆ–ಎರಡು ಚಮಚ,ಜೀರಿಗೆ–ಅರ್ಧ ಚಮಚ,ಸಾಸಿವೆ–ಅರ್ಧ ಚಮಚ, ಕೊತ್ತಂಬರಿ ಪುಡಿ–ಎರಡು ಚಮಚ ತಯಾರಿಸುವ ವಿಧಾನ: ಬೇಯಿಸಿಕೊಂಡ ಇಡ್ಲಿಯನ್ನು ಒಂದು ತಟ್ಟೆಯಲ್ಲಿ ಹಾಕಿ ಚಿಕ್ಕ ಚಿಕ್ಕದಾಗಿ ಕತ್ತರಿಸಿಕೊಳ್ಳಿ., ಗ್ಯಾಸ್ ಸ್ಟೌ ಮೇಲೆ ಒಂದು ಪಾತ್ರೆ ಇರಿಸಿ, ಸ್ವಲ್ಪ ಎಣ್ಣೆ ಹಾಕಿ. ಮಧ್ಯಮ ಉರಿಯಲ್ಲಿ ಎಣ್ಣೆ ಬಿಸಿಯಾಗಲು ಬಿಡಿ. ಜೀರಿಗೆ ಮತ್ತು ಸಾಸಿವೆ ಹಾಕಿ. ಅವು ಸಿಡಿಯುವಾಗ ಟೊಮೆಟೊ ಪೇಸ್ಟ್, ಈರುಳ್ಳಿ ಪೇಸ್ಟ್ ಹಾಗೂ ಹಸಿಮೆಣಸಿನಕಾಯಿ ಪೇಸ್ಟ್ ಸೇರಿಸಿ, ಈ ಎಲ್ಲವನ್ನೂ ಚೆನ್ನಾಗಿ ಮಿಶ್ರಣ ಮಾಡಿ. ಸ್ವಲ್ಪ ನೀರಿನಲ್ಲಿ ಹುಣಸೆಹಣ್ಣು ನೆನೆಸಿಟ್ಟುಕೊಂಡಿರಿ. ಹುಣಸೆಹಣ್ಣನ್ನು ಕಿವುಚಿ ರಸ ಹಿಂಡಿಕೊಳ್ಳಿ. ದಪ್ಪ ಪೇಸ್ಟ್ ಅನ್ನು ಎಣ್ಣೆಗೆ ಸೇರಿಸಿ ಮಿಶ್ರಣ ಮಾಡಿ. ಇದಕ್ಕೆ ಗರಂ ಮಸಾಲೆ ಪುಡಿ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಟೊಮೆಟೊ ಹಾಕಿ ಮತ್ತೆಗಾಗುವವರೆಗೆ ಬೇಯಿಸಿ, ನಂತರ ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ. ಕತ್ತರಿಸಿಕೊಂಡ ಇಡ್ಲಿಯನ್ನು ಈ ಮಿಶ್ರಣಕ್ಕೆ ಹಾಕಿ. ಈ ಎಲ್ಲವನ್ನೂ ಚೆನ್ನಾಗಿ ಮಿಶ್ರಣ ಮಾಡಿ. ಈ ಎಲ್ಲವೂ ಒಂದು ಹದಕ್ಕೆ ಬರುವವರೆಗೆ ಸ್ಟೌ ಮೇಲೆ ಇರಿಸಿ. ನಂತರ ಪ್ಲೇಟ್‌ಗೆ ಸರ್ವ್ ಮಾಡಿ, ಅದರ ಮೇಲೆ ಚಿಕ್ಕದಾಗಿ ಹೆಚ್ಚಿಕೊಂಡ ಕೊತ್ತಂಬರಿ ಸೊಪ್ಪು ಉದುರಿಸಿದರೆ ಇಡ್ಲಿ ಮಂಚೂರಿಯನ್ ತಿನ್ನಲು ಸಿದ್ಧ.

# ಎಲಾನ್ ಮಸ್ಕ್ ದೊಡ್ಡ ಘೋಷಣೆ: ಶೀಘ್ರದಲ್ಲಿ ಆರಂಭವಾಗಲಿದೆ ಎಕ್ಸ್–ಮೇಲ್

ವಿಶ್ವದ ಅತ್ಯಂತ ಶ್ರೀಮಂತ ಎಲೆನ್ ಮಸ್ಕ್ ಒಂದಿಲ್ಲೊಂದು ಕಾರಣದಿಂದ ಸದಾ ಸುದ್ದಿಯಲ್ಲಿ ಇರುತ್ತಾರೆ.ಕೆಲವೊಮ್ಮೆ ತಮ್ಮ ಕಂಪನಿಯ ಉತ್ಪನ್ನಗಳ ಮೂಲಕ ಸುದ್ದಿಯಲ್ಲಿರುತ್ತಾರೆ ಅಲ್ಲದೆ ಇತ್ತೀಚಿನ ವರ್ಷಗಳಲ್ಲಿ ಎಲೆನ್ ಮಸ್ಕ್ ವಿಶ್ವದ ದೊಡ್ಡ ಕಂಪನಿಗಳನ್ನು ಖರೀದಿ ಮಾಡಿದ್ದರು.ಈಗ ಮಸ್ಕ್ ಇನ್ನೊಂದು ಹೊಸ ಕ್ಷೇತ್ರಕ್ಕೆ ಕಾಲಿಡಲಿದ್ದಾರೆ.

ಎಲೆನ್ ಮಸ್ಕ್ ಇಮೇಲ್ ಲೋಕಕ್ಕೂ ಕಾಲಿಡಲಿದ್ದಾರೆ. ಅವರ ಸಾಮಾಜಿಕ ಮಾಧ್ಯಮ ಪ್ಲಾಟ್‌ಫಾರ್ಮ್ "ಎಕ್ಸ್" ನಲ್ಲಿನ ಚರ್ಚೆಯ ಸಮಯದಲ್ಲಿ,ಎಲೆನ್ ಮಸ್ಕ್ ಅವರು ಎಕ್ಸ್–ಮೇಲ್ ಶೀಘ್ರದಲ್ಲೇ ಬರಲಿದೆ ಎಂದು ದೃಡಪಡಿಸಿದರು.




ಕರುನಾಡ ಕಂದ
ಸಂಪುಟ 3 । ಸಂಚಿಕೆ 12
ದಿನಾಂಕ: 16-04-2024 ಪುಟಗಳು:16












# ಅಂಬೇಡ್ಕರ್ ಅವರ 133ನೇ ಜಯಂತಿ



ವಿಜಯಪುರ ಜಿಲ್ಲೆಯ ತಾಳಿಕೋಟೆ ತಾಲೂಕಿನ ಬಳಗಾನೂರು ಗ್ರಾಮದಲ್ಲಿ ನಡೆದ ಭಾರತ ರತ್ನ,ಭಾಗ್ಯವಿಧಾತ,ಸಮಾಜವಾದಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ 133 ನೇ ಜಯಂತಿಯನ್ನು ಗ್ರಾಮದ ದಲಿತ ಬಾಂಧವರು ಮತ್ತು ಎಲ್ಲಾ ಸಮುದಾಯದ ಯುವಕರು ತಾಯಂದಿರು ಸೇರಿ ಬಹಳ ಅದ್ದೂರಿಯಾಗಿ ಆಚರಣೆ ಮಾಡಿದರು.

ಈ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ವಾದಿಗಳಾದ ಹಿರಗಪ್ಪ ಅರಳಿಕಟ್ಟಿ ಅವರು ಮಾತನಾಡುತ್ತಾ

"ಡಾ.ಭೀಮರಾವ್ ರಾಮಜಿ ಅಂಬೇಡ್ಕರ್ (1891–1956) ಬಾಬಾ ಸಾಹೇಬ್ ಎಂದು ಪ್ರಸಿದ್ಧರಾಗಿದ್ದಾರೆ ಅವರು ಭಾರತೀಯ ನ್ಯಾಯಶಾಸ್ತ್ರಜ್ಞ,ಅಥ–ರ್ಶಾಸ್ತ್ರಜ್ಞ,ರಾಜಕಾರಣಿ ಮತ್ತು ಸಮಾಜ ಸುಧಾರಕರಾಗಿದ್ದರು ಅವರು ದಲಿತ ಬೌದ್ಧ ಚಳುವಳಿಯನ್ನು ಪ್ರೇರೇಪಿಸಿದರು ಮತ್ತು ಅಸ್ಪೃಶ್ಯತೆ ವಿರುದ್ಧ ಸಮಾಜ ತಾರತಮ್ಯದ ವಿರುದ್ಧ ಪ್ರಚಾರ ಮಾಡಿದರು ಮತ್ತು ಮಹಿಳೆಯರ ಹಕ್ಕುಗಳನ್ನು ಸಹ ಬೆಂಬಲಿಸಿದರು ಮತ್ತು ಕಾರ್ಮಿಕ ಅವರು ಸ್ವತಂತ್ರ ಭಾರತದ ಮೊದಲ ಕಾನೂನು ಮಂತ್ರಿ ಮತ್ತು ಭಾರತದ ಸಂವಿಧಾನ ಸ್ಥಾಪಿಸಿದವರು"ಎಂದು ತಿಳಿಸಿದರು.

ನಂತರ ಸಿದ್ದಪ್ಪ ಹೊಸಮನಿ ಯುನಿವರ್ಸಿಟಿ ಪಿ.ಯು. ಲೆಕ್ಚರರ್ ಅವರು ಮಾತನಾಡಿ ಅಂಬೇಡ್ಕರ್ ಅವರು ನಮಗೆ ಕೊಟ್ಟಂತಹ ಕೊಡುಗೆ ಒಂದಲ್ಲ ಎರಡಲ್ಲ ಇದು ಒಂದು ವಿಶ್ವದ ಅತಿ ದೊಡ್ಡ ಮರ ಇದು,ವಿಶ್ವದ ಎಲ್ಲಾ ಜನರಿಗೆ ನೆರಳು ನೀಡಿದ ಮರ ಡಾ.ಬಾಬಾಸಾಹೇಬ್ ಅಂಬೇಡ್ಕರ್. ಅವರ ಮಾರ್ಗದಲ್ಲಿ ನಡೆದರೆ ನಮಗೆ ಯಾವ ಕೊರತೆಯಾಗುವುದಿಲ್ಲ ಮತ್ತು ಮುಂದಿನ ದಿನಮಾನಗಳಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಜನರು ಸೇರಿ ಮತ್ತು ಅದ್ದೂ–ರಿಯಿಂದ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸೋಣ ಎಂದು ಹೇಳಿದರು.

ಈ ಸಂದರ್ಭದಲ್ಲಿ ದಲಿತ ಸಮಾಜದ ಮುಖಂಡರಾದ ಸಿರುಗಪ್ಪ ಅರಳಿಕಟ್ಟಿ, ಬಸವರಾಜ್ ಸಿ ತಳವಾರ, ತಮ್ಮಣ್ಣ ಜಾಲಿಗಿಡದ, ನಿಂಗಪ್ಪ ಹೊಸಮನಿ, ಪರಶುರಾಮ್ ಸಿ ತಳವಾರ್, ಮಡಿವಾಳಪ್ಪ ಬ ಚಲವಾದಿ, ಮಲ್ಲಿಕಾರ್ಜುನ್ ತಳವಾರ, ಗುರಪ್ಪ ಸ ತಳವಾರ, ಗುರಪ್ಪ ಚ ತಳವಾರ, ಬಸವರಾಜ್ ಹೂ ಹೊಸಮನಿ, ಸಿಂಗಪ್ಪ ಹೊಸಮನಿ ಹಾಗೂ ಯುವಕರಾದ ಹುಸನಪ್ಪ ಹೊಸಮನಿ, ಯಲ್ಲಾಲಿಂಗ ಭಾವೂರ್, ಶಂಕರ್ ಲಿಂಗ, ಬಂದು ಬಳಗಾನೂರ, ಉಸ್ಮಾನ್ ಬಾಗವಾನ, ಅಮೀರ್ ವಾಲಿಕಾರ್, ರಿಯಾಜ್ ವಾಲಿಕಾರ್, ಲಾಳೇಸಾಬ ಅವಟಿ ಭಾಗವಹಿಸಿದ್ದರು.

ವರದಿ:ಉಸ್ಮಾನ ಬಾಗವಾನ

"ಕರುನಾಡ ಕಂದ ಪತ್ರಿಕೆ"
ನ್ಯೂಸ್ ಪೋರ್ಟಲ್ ಹಾಗೂ ಯೂಟ್ಯೂಬ್ ಚಾನೆಲ್ ಗೆ ಪಾರ್ಟ್/ಫುಲ್ ಟೈಮ್ ನಲ್ಲಿ ಕಾರ್ಯ ನಿರ್ವಹಿಸಲು ರಾಜ್ಯಾದ್ಯಂತ ಎಲ್ಲಾ ಜಿಲ್ಲೆ, ತಾಲೂಕು ಮಟ್ಟದಲ್ಲಿ ಸ್ಥಳೀಯ ವರದಿಗಾರರು ಬೇಕಾಗಿದ್ದಾರೆ.
18 ವರ್ಷದಿಂದ 45 ವರ್ಷದವರೆಗಿನ ಆಸಕ್ತರು ಸಂಪರ್ಕಿಸಬಹುದು.
TARGET ಇರುವುದಿಲ್ಲ
ಹೆಚ್ಚಿನ ಮಾಹಿತಿಗಾಗಿ ನಿಮ್ಮ ಹೆಸರು, ತಾಲ್ಲೂಕು ವಾಟ್ಸ್ ಆಪ್ ಮಾಡಿ ಅಥವಾ ಕರೆ ಮಾಡಿ:

ಬಸವರಾಜ ಬಳಿಗಾರ, ಸಂಪಾದಕರು
Call & WhatsApp: 9986366909
www.karunadakanda.com

ಕರುನಾಡ ಕಂದ
ಸಂಪುಟ 3 । ಸಂಚಿಕೆ 12
ದಿನಾಂಕ: 16–04–2024 ಪುಟಗಳು:16

# ಚುನಾವಣೆಯೆಂಬ ಗುಂಗಿನೊಳಗಿನ ನೆನಪುಗಳು...



ತನ್ನ ಪಕ್ಷದ ಅಭ್ಯರ್ಥಿಯ ಪ್ರಚಾರಕ್ಕಾಗಿ ದೊಡ್ಡ ಸೌಂಡು ಸ್ಪೀಕರ್ ನೊಂದಿಗೆ... "ನಿಮ್ಮ ಮತ ನಮ್ಮ ಅಭ್ಯರ್ಥಿಗೆ...ನಿಮ್ಮ ಮತ ನಮ್ಮ ಅಭ್ಯರ್ಥಿಗೆ..." ಎಂದು ಜೋರಾದ ಧ್ವನಿಯನ್ನು ಹಾಕಿಕೊಂಡು ಬರುತ್ತಿದ್ದ ಗಾಡಿಯ ಹಿಂದೆ ಧೂಳು ಕುಡಿದರೂ ಚಿಂತೆಯಿಲ್ಲ ಎಂದು ಓಡೋಡಿ ಹೋಗುತ್ತಿದ್ದ....ಅಂದಿನ ಹುಡುಗರು ನಾವು...!! ಅಂದು ಅಭ್ಯರ್ಥಿಯು ದೊಡ್ಡವರೂ, ಹುಡುಗರೆನ್ನದೆ ಎಲ್ಲರನ್ನೂ ಕರೆದುಕೊಂಡು ಗುಂಪು ಗುಂಪಾಗಿ ಗ್ರಾಮದ ಮನೆ ಮನೆಗೆ ಹೋಗಿ, "ಅಕ್ಕ ನನಗೆ ವೋಟ್ ಹಾಕು... ಏ ಮಾವ ಬಾರೋ.. ದೂರ ದೂರ ನಿಲ್ಲಬ್ಯಾಡ, ಈ ಸಲ ಮರಿಬ್ಯಾಡಪ ಮಾವ.."

ನನಗೆ ಮೇಲಿನ ಎರಡು ಸನ್ನಿವೇಶಗಳು, ನಮ್ಮ ಬಾಲ್ಯದ ಚುನಾವಣೆಗಳನ್ನು ನೆನಪು ಮಾಡಿಕೊಂಡರೆ ಇವತ್ತಿಗೂ ರೋಮಾಂಚನಗೊಳ್ಳುತ್ತೇನೆ. ಅಂದು ಚುನಾವಣೆಗೆ ನಿಂತ ಅಭ್ಯರ್ಥಿ ಯಾರೇ ಇರಲಿ, ಯಾವುದೇ ಪಕ್ಷ ಇರಲಿ, ಹಳ್ಳಿಗಳಲ್ಲಿ ಪಕ್ಷದ ಪರವಾಗಿ ಪ್ರಚಾರ ಮಾಡುತ್ತಾ ಬರುವ ವಾಹನಗಳ ಹಿಂದೆ ಓಡುವುದು... ಪಾಂಪ್ಲೆಂಟ್ (ಕರಪತ್ರ) ಗಳನ್ನು ಆರಿಸುತ್ತಾ ಆರಿಸುತ್ತಾ ಅವುಗಳನ್ನು ಒಟ್ಟುಮಾಡಿಕೊಂಡು, ಕಚ್ಚಾ ಕಾಪಿಯನ್ನಾಗಿ ಉಪಯೋಗಿಸಿದ ನೆನಪು ಇವತ್ತಿಗೂ ಮರೆಯುವಂತಿಲ್ಲ. ಚುನಾವಣೆಗೆ ನಿಂತ ಅಭ್ಯರ್ಥಿಯ ಪರಿಚಯವಾಗಲಿ, ಪಕ್ಷದ ಗುರುತಾಗಲಿ ಗೊತ್ತಿಲ್ಲದ ಕಾಲದಲ್ಲಿಯೂ ಅವತ್ತು, ಮನೆ ಮನೆಗೆ ವೋಟು ಕೇಳುವ ನೆಪದಲ್ಲಿ ಸಂಬಂಧ ಸೂಚಕ ಪದಗಳನ್ನು ಬಳಸುತ್ತಾ, ಪ್ರೀತಿಯಿಂದ ಮಾತನಾಡಿಸುತ್ತಿದ್ದರು. ಜಾತಿ, ಧರ್ಮ, ಮತ – ಪಂಥಗಳು ಅವತ್ತು ಗೌಣವಾಗಿದ್ದವು.

ಬಹುತೇಕವಾಗಿ ಚುನಾವಣೆಗಳು ದ್ವೇಷ, ಸಿಟ್ಟು, ಆಕ್ರೋಶ, ಸೇಡು... ಇವು ಯಾವುದಕ್ಕೂ ಅಲ್ಲಿ ಜಾಗವಿರಲಿಲ್ಲ. ಚುನಾವಣೆ ಎಂದರೆ ಅದೊಂದು ಪ್ರೀತಿ ಪೂರ್ವಕ ಸ್ಪರ್ಧೆ ಎನ್ನುವುದಿತ್ತು. ಅಂತಹ ಕಾಲದಲ್ಲಿ ನಾವಿನ್ನು ಚಿಕ್ಕ ಹುಡುಗರು. ಚುನಾವಣೆಯ ಪ್ರಚಾರಕ್ಕಾಗಿ ಬರುವ ಉಮೇದುವಾರರ ಭಾಷಣ ಕೇಳಲು ನಾವು ತದೇಕ ಚಿತ್ತದಿಂದ ನೋಡುತ್ತಿದ್ದೆವು. ನಂತರ ಅವರು ಕೊಡುವ ಒಗ್ಗರಣೆ ಮಿರ್ಚಿಗಾಗಿ ಹಾತೋರೆಯುತ್ತಿದ್ದೆವು. ಅವತ್ತು ಪಕ್ಷನಿಷ್ಠೆ, ವ್ಯಕ್ತಿನಿಷ್ಠೆ ಬಹಳ ಪ್ರಮುಖವಾಗಿದ್ದರೂ.. ಕೂಡ ಹಳ್ಳಿಗಳಲ್ಲಿ ಸಂಬಂಧಗಳ ವಿಷಯವಾಗಿ ಅನ್ಯೋನ್ಯತೆಯಿತ್ತು. ಯಾವುದೇ ಕಾರಣಕ್ಕೂ ಯಾರು ಜಗಳ ಮಾಡುತ್ತಿರಲಿಲ್ಲ. ಚಿಕ್ಕವರು ದೊಡ್ಡವರಿಗೆ ಗೌರವ ಕೊಡುತ್ತಿದ್ದರು. ತಮ್ಮ ತಮ್ಮ ಪಕ್ಷದ ಪರವಾಗಿ ಪ್ರಚಾರ ಮಾಡಿಕೊಳ್ಳುತ್ತಾ, ಓಟು ಹಾಕು ಎಂದು ವಿನಂತಿಸಿಕೊಳ್ಳುತ್ತಿದ್ದರು.

ಸಾಮಾನ್ಯವಾಗಿ ಹಳ್ಳಿಗಳಲ್ಲಿ 18 ತುಂಬುವ ಸಮಯದಲ್ಲಿ 'ಕಳ್ಳ ಓಟು' ಹಾಕಿದ ನೆನಪು ಬಹುತೇಕ ಹಳ್ಳಿಯ ಹುಡುಗರಿಗೆ ಇದ್ದೇ ಇರುತ್ತದೆ. ನಾನಂತೂ ಒಂದು ಸಲ ಯಾರೋ ಹೆಸರಿನ ವೋಟು ಹಾಕಿ, ಹೊರ ಬಂದ ತಕ್ಷಣ ಅಲ್ಲಿಯ ಏಜೆಂಟರ "ಅಯ್ಯೋ ಆತ ಹನುಮಂತಲ್ಲ...ರಮೇಶಾ ಅಂವಾ..." ಎಂದು ಹೇಳಿದ ತಕ್ಷಣ ಬಿದ್ದಿನೋ ಎದ್ದೆನೋ ಎಂದು ಓಡೋಡಿ ಬಂದೆ. ಅದು ಈಗಲೂ ನೆನಪಾದರೆ ನಗು ಬರುತ್ತದೆ. ಆದರೆ ನಮ್ಮ ಹಳ್ಳಿಯ ಹಿರಿಯರ ವಿಶಾಲ ಹೃದಯದವರು, "ಹೋಗಲಿ ಬಿಡ್ರೋ ಅವನು ನಮ್ಮ ಹುಡುಗ.." ಎಂದು ನನ್ನನ್ನು ಬಚಾವ್ ಮಾಡಿದರು. ಆದರೆ ಈಗ ಪರಿಸ್ಥಿತಿ ಮೊದಲಿನಂತಿಲ್ಲ. ನಿಜವಾಗಲೂ ಅದನ್ನು ಉದ್ದೇಶಪೂರ್ವಕವಾಗಿ ಮಾಡಿದಲ್ಲ ಹುಂಬುತನದಿಂದ "ಏನೋ ಸಾಧಿಸಿ ಬಿಟ್ಟೆನೆಂಬ ಛಲ, ಅಭ್ಯರ್ಥಿಯ ಪರಿಚಯವಿರದಿದ್ದರೂ ನಮ್ಮ ಅಭ್ಯರ್ಥಿ ಗೆಲ್ಲಬೇಕೆಂಬ ಹಠ.." ಹೀಗೆ ಚುನಾವಣೆಯ ಗುಂಗಿನಲ್ಲಿ ಇರುವ ಅವತ್ತಿನ ಬಾಲ್ಯದ ನೆನಪುಗಳಿಗೆ ಕೊನೆಯಿಲ್ಲ. ಇಂತಹ ನೆನಪುಗಳು ತಮ್ಮ ಬದುಕಿನಲ್ಲಿಯೂ ಸಾಮಾನ್ಯವಾಗಿ ಬಂದು ಹೋಗಿರುತ್ತವೆ.

ಅವತ್ತು ಇಂದಿನಂತೆ ಚುನಾವಣೆಗೆ ನಿರ್ಬಂಧನೆಗಳಿರಲಿಲ್ಲ ಪಕ್ಷದ ಚಿಹ್ನೆಗಳನ್ನು, ಪಕ್ಷದ ಅಭ್ಯರ್ಥಿಗಳ ಹೆಸರುಗಳನ್ನು ಗ್ರಾಮದ ಊರುಗಳ ಪ್ರತಿ ಮನೆಯ ಗೋಡೆಗಳಿಗೆ ಬರೆಸುತ್ತಿದ್ದರು, ಕರಪತ್ರಗಳನ್ನು ಹಂಚುತ್ತಿದ್ದರು, ಸಭೆಗಳನ್ನು ನಡೆಸುತ್ತಿದ್ದರು, ಪಕ್ಷದ ಪರವಾಗಿ, ವ್ಯಕ್ತಿಗಳ ಪರವಾಗಿ ಮನೆ ಮನೆಗೆ ಹೋಗಿ ಪ್ರಚಾರ ಮಾಡುತ್ತಿದ್ದರು. ಚುನಾವಣೆಗೆ ನಿಂತ ಅಭ್ಯರ್ಥಿಯು ಪ್ರಚಾರ ಮಾಡುತ್ತಾ ಮಾಡುತ್ತಾ ಮತದಾರರಿಗೆ ವಿವಿಧ ಆಮಿಷಗಳನ್ನು ನೀಡುತ್ತಿದ್ದರೂ ಆದರೆ ಹಳ್ಳಿಯ ಜನಗಳು ಆಮಿಷಕ್ಕೆ ಒಳಗಾಗದೆ ಇದ್ದರೂ ಪಕ್ಷ ನಿಷ್ಠೆ, ಸ್ವಾಮಿ ನಿಷ್ಠೆಗೆ ಮಾರುಹೋಗಿ ಚುನಾವಣೆಯನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡು, ನಮ್ಮ ಊರಿನಿಂದ ಹೆಚ್ಚು ವೋಟುಗಳನ್ನು ಹಾಕಿಸಬೇಕೆಂದು ಪಣ–ತೊಡುತ್ತಿದ್ದರು. ಅಭ್ಯರ್ಥಿಯಿಂದ ಯಾವುದೇ ರೀತಿಯಿಂದ ಹಣವನ್ನು, ವಸ್ತುಗಳನ್ನು ನಿರೀಕ್ಷೆ ಮಾಡುತ್ತಿರಲಿಲ್ಲ. ಚುನಾವಣೆಯಲ್ಲಿ ಮತ ಹಾಕುವ ದಿನ ಮಾತ್ರ ಒಗ್ಗರಣಿ ಮಿರ್ಚಿ ಮಾಡಿಸಿ ಎಲ್ಲರಿಗೂ ಹಂಚಿ ತಿನ್ನುತ್ತಿದ್ದರು. ಆಗ ತಿನ್ನುವಾಗ ಆ ಪಕ್ಷದವರು ಈ ಪಕ್ಷದವರು ಎನ್ನದೆ ಎಲ್ಲರೂ ಅವರವರ ಗುಂಪಿನಲ್ಲಿ ಇವರು ; ಇವರ ಗುಂಪಿನಲ್ಲಿ ಅವರು ಸೇರಿಕೊಂಡು ನಗು ನಗುತ್ತಾ, ಹಾಸ್ಯ ಮಾಡುತ್ತಾ, "ಈ ಸಲ ನಮ್ಮ ಅಭ್ಯರ್ಥಿನೆ ಗೆಲ್ತಾನ್ ಮಾವ, ಎಷ್ಟೆಷ್ಟು ಬೆಟ್ಟ್ ಇರಲಿ ಎಂದು ಚಾಲೆಂಜ್ ಹಾಕುತ್ತಿದ್ದರು.

ಹೀಗೆ ಚುನಾವಣೆ ಎಂದರೆ ಒಂದು ರೀತಿಯ ಮನೋರಂಜನೆಯ ಆಟದಂತೆ ಅಂದಿನ ಜನರು ಭಾವಿಸಿಕೊಂಡಿದ್ದರು. ಯಾವತ್ತೂ ಚುನಾವಣಾ ವಿಷಯವಾಗಿ ಜಗಳ ಮಾಡುತ್ತಿರಲಿಲ್ಲ. ಆವತ್ತು..ಮತ ಹಾಕುವ ದಿನ ಏಜೆಂಟರಾದವರು ಸ್ನಾನ ಮಾಡಿ, ತಮ್ಮ ಪಕ್ಷದ ಪರವಾಗಿ "ಅಭ್ಯರ್ಥಿ ಗೆಲ್ಲಲಿ" ಎಂದು ದೇವರಿಗೆ ಪೂಜೆ ಸಲ್ಲಿಸಿ, ಮತ ಹಾಕುವ ಕೊಠಡಿಯ ಮತ ಪೆಟ್ಟಿಗೆಗೆ ಪೂಜೆ ಸಲ್ಲಿಸುತ್ತಿದ್ದರು. ಕಾಯಿ ಹೊಡೆಯುತ್ತಿದ್ದರು. ಏನೋ ಒಂದು ರೀತಿಯ ನಂಬಿಕೆ ಅವರಲ್ಲಿತ್ತು. ಆದರೆ ಇವತ್ತು ಚುನಾವಣಾ ಆಯೋಗದವರು ಬಿಗಿಯಾದ ಅನೇಕ ನಿರ್ಬಂಧನೆಗಳನ್ನು, ಚುನಾವಣಾ ನಿಯಮಗಳನ್ನು, ಕಾನೂನುಗಳನ್ನು ಪರಿಷ್ಕರಣೆ ಮಾಡಿದ್ದಾರೆ. ಹೊಸ ರೀತಿಯ ಮೌಲ್ಯಾಧರಿತವಾದ ಚುನಾವಣೆಗೆ ಅವಕಾಶ ಮಾಡಿಕೊಟ್ಟಿದ್ದಾರೆ.

ಚುನಾವಣೆ ಎಂದರೆ...ನಮ್ಮ ನಾಯಕರನ್ನು ನಾವೇ ಆರಿಸುವ ಒಂದು ಸಂಭ್ರಮದ ಹಬ್ಬ. ಇಂತಹ ಸಂಭ್ರಮದ ಹಬ್ಬದಲ್ಲಿ ಅಭ್ಯರ್ಥಿಯು ಜಾತ್ಯತೀತವಾಗಿ, ಧರ್ಮಾತೀತವಾಗಿ, ನ್ಯಾಯಯುತವಾಗಿ ಯಾವುದೇ ಆಮಿಷವನ್ನು ಒಡ್ಡದೆ ಮೌಲ್ಯಧಾರಿತವಾಗಿ ಜನ–ರಿಂದ ಆರಿಸುವಂತಾಗಬೇಕೆನ್ನುವುದು ಚುನಾವಣಾ ಆಯೋಗದ ಆಶಯ. ಅಂದಿನ ಚುನಾವಣಾ ಆಯೋಗದ ಕಮೀಷನರ್ ಅವರು, ಮಾನ್ಯ ಟಿ.ಎನ್. ಶೇಷನ್ ರವರ ದೂರದೃಷ್ಟಿಯಿಂದಾಗಿ ಅನೇಕ ಹೊಸ ಹೊಸ ನಿಯಮಗಳು ಜಾರಿಗೆ ಬಂದವು. ಇಂದು ಚುನಾವಣಾ ಆಯೋಗದ ಕ್ರಿಯಾಶೀಲತೆಗೆ ಸಾಕ್ಷಿಯಾಗಿದೆ. ನಂತರ ಅನೇಕ ಕಮಿಷನರ್ ಗಳು ಅನೇಕ ಬದಲಾವಣೆಗಳನ್ನು ಮಾಡಿಕೊಂಡು ನ್ಯಾಯಯುತ ಚುನಾವಣೆಗೆ ಅವಕಾಶ ಮಾಡಿಕೊಂಡಿದ್ದಾರೆ.

ಕಳೆದ ಚುನಾವಣೆಯಿಂದ ವೃದ್ದರು, ವಿಕಲಚೇತನರಿಗೆ ತೊಂದರೆಯಾಗಬಾರದೆಂದು ಅವರಿಗೆ ವಿಶೇಷವಾದ ಅವಕಾಶವನ್ನು ನೀಡಿ, ಅವರಿಗೆ ಇರುವಲ್ಲಿಯೇ ಮತ ಹಾಕುವ ಅವಕಾಶ ಮಾಡಿಕೊಟ್ಟಿದ್ದಾರೆ. ಅಲ್ಲದೆ ನೌಕರರಿಗೂ ಅನೇಕ ಬದಲಾವಣೆಗಳನ್ನು ಮಾಡಿ ಅವರಿಗೂ ಸುಲಭವಾಗಿ ಮತ ಚಲಾಯಿಸಲು ಅವಕಾಶ ಮಾಡಿಕೊಟ್ಟಿದ್ದಾರೆ. ಅಂದು ಚುನಾವಣೆಗೆ ನಿಲ್ಲುವ ವ್ಯಕ್ತಿ ಎಂದರೆ ಊರಿನ ಗಣ್ಯ ವ್ಯಕ್ತಿಯಾಗಿರುತ್ತಿದ್ದರು. ಎಲ್ಲರನ್ನೂ ಪ್ರೀತಿಸುವ ವ್ಯಕ್ತಿ ನ್ಯಾಯಯುತವಾದ ವ್ಯಕ್ತಿಯಾಗಿರುತ್ತಿದ್ದರು. ಇವತ್ತು ಅದು ಯಾವುದು ಇಲ್ಲದೆ ಅನೇಕ ಅಸಮ್ಮತವಾದ ಅಭ್ಯರ್ಥಿಗಳ ಆಯ್ಕೆಯಾಗುತ್ತಾರೆ. ಅವತ್ತಿನ ದಿನಮಾನಗಳನ್ನು ನೆನಪಿಸಿದರೆ ಅನೇಕ ಬದಲಾವಣೆಗಳಿಗೆ ನಾವು ಇವತ್ತು ಸಿದ್ದರಾಗಿಬೇಕಾಗಿದೆ. ಒಬ್ಬ ಮತದಾರನಾಗಲು 18 ವರ್ಷ ಪೂರ್ಣಗೊಂಡ ನಂತರ ಮತಪಟ್ಟಿಗೆ ಹೆಸರು ಸೇರಿಸಲು ಇನ್ನೂ ಮೀನಮೇಷ ಎಣಿಸುವ ನಾವುಗಳು ಆವತ್ತು ಮತ ಪಟ್ಟಿಯಲ್ಲಿ ಫೋಟೋಗಳಾಗಲಿ, ಸರಿಯಾದ ವಿಳಾಸವಾಗಲಿ, ಇರುತ್ತಿರಲಿಲ್ಲ. ಇವತ್ತು ಮತದಾರರ ಗುರುತಿನ ಚೀಟಿ, ಮತಪತ್ರಗಳು ಡಿಜಿಟಲಿಕರಣಗೊಂಡು ಭಾವಚಿತ್ರ ಸಮೇತ ಯಾವುದೇ ಅಭ್ಯರ್ಥಿಗೂ ಅನ್ಯಾಯವಾಗಬಾರದೆಂದು, ಮತದಾರನ ಹೆಸರು ಆತನ ಹಿನ್ನೆಲೆ ಸ್ಪಷ್ಟವಾಗಿ ಮತದಾರರ ಪಟ್ಟಿಯಲ್ಲಿ ನಮೂದಾಗಿರುತ್ತದೆ. ಹಾಗೆಯೇ ಚುನಾವಣೆ ನಡೆಯುವ ಸ್ಥಳವನ್ನು, ದಿನಾಂಕವನ್ನು ಸಾಕಷ್ಟು ಪ್ರಚಾರವನ್ನು ರಾಜ್ಯ ಮತ್ತು ಜಿಲ್ಲಾ ಚುನಾವಣಾ ಸ್ವೀಪ್ ಸಮಿತಿಯವರು ಸಿದ್ದ ಮಾಡಿಕೊಂಡಿರುತ್ತಾರೆ.

ಇಷ್ಟೆಲ್ಲ ಸಾಕಷ್ಟು ಸೌಲಭ್ಯಗಳಿದ್ದಾಗಿಯೂ ಪ್ರಜ್ಞಾವಂತ ನಾಗರೀಕರಾದ ನಾವುಗಳು ಇಂದು ಮತ ಹಾಕಲು ಹಿಂದೇಟು ಹಾಕುತ್ತೇವೆ. ನಮ್ಮ ಸೋಮಾರಿತನವೋ ಅಥ–'ವಾ ದೇಶದ ಬಗ್ಗೆ ಪ್ರಗತಿಯ ಬಗ್ಗೆ ಕೇವಲ ಮಾತುಗಳನ್ನಾಡುವ ಆಷಾಢಭೂತಿತನವೋ ಒಂದು ತಿಳಿಯದಾಗಿದೆ. ಈ ಸಲವಾದರೂ ನೂರಕ್ಕೆ ನೂರರಷ್ಟು ಮತ ಚಲಾಯಿಸೋಣ. ದೇಶದ ಪ್ರಗತಿಗಾಗಿ ಒಳ್ಳೆಯ ಅಭ್ಯರ್ಥಿಗಳನ್ನು ನಾವು ಆರಿಸುವಲ್ಲಿ ನಮ್ಮ ಪಾತ್ರ ಬಹಳ ಮುಖ್ಯ ಎನ್ನುವುದನ್ನು ಮರೆಯದಿರೋಣ. ಒಂದು ಸಲ ನಮ್ಮ ಬಾಲ್ಯದ ನೆನಪುಗಳನ್ನು ಮಾಡಿಕೊಂಡಾಗ ಚುನಾವಣಾ ಆಯೋಗವು ಎಷ್ಟೊಂದು ಬದಲಾವಣೆ ತಂದಿದೆ ಎಂದು ಆಶ್ಚರ್ಯವಾಗುತ್ತದೆ..!! ಚುನಾವಣಾ ಆಯೋಗದ ಆಶಯದಂತೆ ನಾವು ನೀವೆಲ್ಲ ದೇಶದ ಪ್ರಗತಿಗೆ ಮತ ಹಾಕೋಣ ; ಮತ ಹಾಕಿಸೋಣ ಉತ್ತಮ ಅಭ್ಯರ್ಥಿಗಳನ್ನು ಆರಿಸೋಣ ಎಂದು ಸದಾಶಯ ಬಯಸುವೆ.



ರಮೇಶ ಸಿ ಬನ್ನಿಕೊಪ್ಪ ಹಲಗೇರಿ

KARUNADA KANDA Fourthnightly, Printed by, Published by, owned by KARIBASAPPA BALIGAR and Printed at Nikhil offset Printers Ward No 23, Buddha Circle, Hosalli main Road, Gangavati 583227.Tq-Gangavati, Dist:Koppal, and Published at : # 94,at-Post-Gunnal, Tq-Yalaburga,Dst-Koppal,pin-583237,PH:9986366909, 9742776385 Editor-KARIBASAPPA BALIGAR